ಸೋಮವಾರ, ಮಾರ್ಚ್ 16, 2026 | ₹ 7.00
prajavani.net prajavani
www.prajavani.net

ಭರತ ನಾಟ್ಯ

ದಾವಣಗೆರೆಯ ಎವಿಕೆ ಕಾಲೇಜಿನಲ್ಲಿ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿ ಪಲ್ಲವಿ ಭರತನಾಟ್ಯ ಪ್ರದರ್ಶಿಸಿದರು



ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಸಾಹಸ

ಗುಜರಾತ್‌ನ ಸೂರತ್‌ನಲ್ಲಿ ನಡೆದ ಸೂರತ್ ಅಂತರರಾಷ್ಟ್ರೀಯ ಆಟೊ ಎಕ್ಸ್‌ಪೊದಲ್ಲಿ ಬೈಕ್ ಸವಾರರೊಬ್ಬರು ಪ್ರದರ್ಶಿಸಿದ ಸಾಹಸ ದೃಶ್ಯ



10 YEAR WARRANTY | BAJAJ SECURE • AMC • ROAD SIDE ASSISTANCE | 72198 21111 | SHRIRAM Finance | IDFC FIRST Bank ALWAYS YOU FIRST | BAJAJ AUTO CREDIT | L&T Finance | TATA CAPITAL Two Wheeler Loans

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಮಾರ್ಚ್ 31, 2026 ರ ವರೆಗೆ ಅನ್ವಯವಾಗುವ ಉಳಿತಾಯ. ಕ್ಯಾಶ್ ಬ್ಯಾಕ್ ಉಲ್ಲೇಖಿಸಲ್ಪಟ್ಟ ಒಟ್ಟು ಉಳಿತಾಯ. ಶೂನ್ಯ ಪ್ರೊಸೆಸಿಂಗ್ ಶುಲ್ಕ ಮತ್ತು ಉಚಿತ ಸೇವೆಗಳಿಂದ (3 ಸ್ಟ್ಯಾಂಡರ್ಡ್ ಫ್ರೀ ಸರ್ವಿಸಸ್ ಮತ್ತು 2 ಹೆಚ್ಚುವರಿ ಫ್ರೀ ಸರ್ವಿಸಸ್) ಉಳಿಯುವ ಮೊತ್ತವಾಗಿದೆ. ಉಚಿತ ಸೇವೆಯ ಉಳಿತಾಯವು ನಿಗದಿತ ಲೇಬರ್ ಶುಲ್ಕಗಳಿಗೆ ಅನ್ವಯಿಸುತ್ತದೆ. ಅನ್ವಯವಾಗುವ ಕೊಡುಗೆಗಳು ಮೋಡೆಲ್ಸ್/ರಾಜ್ಯಗಳಲ್ಲಿ ಬದಲಾಗಬಹುದು. ಶೂನ್ಯ PF ಮೇಲಿನ ಉಳಿತಾಯ ಫೈನಾನ್ಸರ್‌ರನ್ನು ಅವಲಂಬಿಸಿದೆ ಮತ್ತು ಆಯಾಯ ಸ್ಥಳಗಳಲ್ಲಿ ಬದಲಾಗಬಹುದು. ಫೈನಾನ್ಸರ್‌ರ ಸ್ವಂತ ವಿವೇಚನೆಯಡಿ ಹಣಕಾಸು ಲಭ್ಯ. ಸಾಹಸಗಳನ್ನು ತಜ್ಞರು ವೃತ್ತಿಪರ ಮೇಲ್ವಿಚಾರಣೆಯಲ್ಲಿ ನಿಯಂತ್ರಿತ ಮತ್ತು ಸುರಕ್ಷಿತ ವಾತಾವರಣದಲ್ಲಿ ಸಾರ್ವಜನಿಕ ಅಥವಾ ಸಾರ್ವಜನಿಕ ರಸ್ತೆಗಳಿಂದ ಪ್ರತ್ಯೇಕವಾಗಿ ನಿರ್ವಹಿಸಿರುತ್ತಾರೆ. ಇಂತಹ ಸಾಹಸಗಳನ್ನು ಪುನರಾವರ್ತಿಸಬಾರದಾಗಿ ವಿನಂತಿ. ಯಾವಾಗಲೂ ಸಂಚಾರ ಮತ್ತು ಸುರಕ್ಷತಾ ನಿಯಮಗಳನ್ನು ಅನುಸರಿಸಿ. ಪಲ್ಸರ್ 125 ಆಫರ್ ನಿಯಾನ್ ಮತ್ತು ಕಾರ್ಬನ್ ಫೈಬರ್ ಮೋಡೆಲ್‌ಗಳ ಮೇಲೆ. ಪಲ್ಸರ್ N160 USD ಸಿಂಗಲ್ ಸೀಟ್ ರೂಪಾಂತರದ ಮೇಲೆ ಇ-ಕಾಮ್ ಕೊಡುಗೆಗಳು, ಆಯಾ ಇ-ಕಾಮ್ ಪಾಲುದಾರರ ನಿಯಮಗಳಿಗೆ ಒಳಪಟ್ಟಿರುತ್ತವೆ. ಇ-ಕಾಮ್ ಕೊಡುಗೆಗಳು ಪಾಲುದಾರರಿಂದ ಪಾಲುದಾರರಿಗೆ ಬದಲಾಗಬಹುದು.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli** RV BAJAJ: 6360308373 • **Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur :** KHIVRAJ BAJAJ: - 9148752305 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 9900072690 • **Hubli** CHANNAMMA BAJAJ: 9620614106 • **Gokul Road branch** 9035927969 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGASHREE BAJAJ: 988690116, **MISHA BAJAJ**: 9632684225. • **Chikodi** MISHA BAJAJ: 9632765225 • **Gokak** MISHA BAJAJ: 9035454225 • **Bellary AADI BAJAJ: 9606050250• Raichur SHREE BALAJI AUTOMOBILES: 9880235539• Koppal I A BAJAJ: 963512938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 7022627411•(Bus Stand Road) 7022627412• **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805, 9663566620 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8867776567 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.

ಶಾಮನೂರು ಉತ್ತರಾಧಿಕಾರಿ ಯಾರು?

• ಜಿ.ಬಿ.ನಾಗರಾಜ್



ದಾವಣಗೆರೆ: ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿರುವ ದಕ್ಷಿಣ ವಿಧಾನಸಭಾ ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆ. ಇಲ್ಲಿ ಬಿಜೆಪಿ ಪ್ರಬಲ ಎದುರಾಳಿ. ಜೆಡಿಎಸ್, ಎಸ್‌ಡಿಪಿಐ ಸೇರಿದಂತೆ ಇತರ ರಾಜಕೀಯ ಪಕ್ಷಗಳಿದ್ದರೂ ಎರಡು ರಾಷ್ಟ್ರೀಯ ಪಕ್ಷಗಳ ನಡುವೆಯೇ ನೇರ ಸ್ಪರ್ಧೆ. ರಾಜಕೀಯ ಪಕ್ಷಗಳಲ್ಲಿ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ.

2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆಯ ಬಳಿಕ ಅಸ್ತಿತ್ವಕ್ಕೆ ಬಂದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರವನ್ನು ಶಾಮನೂರು ಶಿವಶಂಕರಪ್ಪ ನಾಲ್ಕು ಬಾರಿ ಪ್ರತಿನಿಧಿಸಿದ್ದರು. 2008, 2013, 2018, 2023ರಲ್ಲಿ ಕ್ಷೇತ್ರದಿಂದ ಸತತವಾಗಿ ಆಯ್ಕೆಯಾಗಿದ್ದರು. 95 ವರ್ಷದ ಶಿವಶಂಕರಪ್ಪ ಅವರು ಡಿ.14ರಂದು ನಿಧನರಾಗಿದ್ದರು.

ಕ್ಷೇತ್ರದಲ್ಲಿ ನಿರ್ಣಾಯಕ ಮತದಾರರನ್ನು ಹೊಂದಿರುವ ಮುಸ್ಲಿಂ ಸಮುದಾಯ ಕಾಂಗ್ರೆಸ್ ಟಿಕೆಟ್‌ಗೆ ಪಟ್ಟು ಹಿಡಿದಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ.ಪ್ರಭಾ ಅವರ ಪುತ್ರ ಸಮರ್ಥ ಶಾಮನೂರು ಹೆಸರು ಮುಂಚೂಣಿಗೆ ಬಂದಿದೆ. ಶಾಮನೂರು ಶಿವಶಂಕರಪ್ಪ ಅವರ ಇನ್ನಿಬ್ಬರು ಪುತ್ರರಾದ ಎಸ್. ಎಸ್. ಬಕ್ಕೇಶ್ ಮತ್ತು ಎಸ್.ಎಸ್. ಗಣೇಶ್ ಅವರಿಗೆ ಅವಕಾಶ ಕಲ್ಪಿಸಬೇಕೆಂಬ ಒತ್ತಾಯವೂ ಕೇಳಿಬಂದಿದೆ.

ಉಪ ಚುನಾವಣೆ

ಮುಸ್ಲಿಂ ಸಮುದಾಯದ ನಾಯಕರಿಗೆ ಟಿಕೆಟ್ ನೀಡುವಂತೆ ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್ ಪಕ್ಷದ ಮೇಲೆ ಒತ್ತಡ ಹೇರಿದ್ದಾರೆ. ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಕಾಂಗ್ರೆಸ್ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಇದರಿಂದ ಅಸಮಾಧಾನಗೊಂಡ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಳಿಗೆ ಬೆಂಬಲಿಗರನ್ನು ಕರೆದೊಯ್ದು ಶಕ್ತಿಪ್ರದರ್ಶನ ಮಾಡಿದ್ದಾರೆ.

ಕ್ಷೇತ್ರ ಗೆಲ್ಲಲು ನಿರಂತರವಾಗಿ ಪ್ರಯತ್ನಿಸಿ ವಿಫಲವಾಗಿರುವ ಬಿಜೆಪಿಯಲ್ಲಿ ಕಮಲ ಅರಳಿಸುವ ಉಮೇದು ಹೆಚ್ಚಾಗಿದೆ. ಮುಖಂಡರಾದ ಯಶವಂತರಾವ್ ಜಾಧವ್, ಬಿ.ಜಿ. ಅಜಯ್‌ಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ರಾಜನಹಳ್ಳಿ ಶಿವಕುಮಾರ್ ಸೇರಿದಂತೆ ಹಲವರು ಟಿಕೆಟ್ ನೀಡುವಂತೆ ಪಕ್ಷದ ಬಾಗಿಲು ಬಡಿದಿದ್ದಾರೆ. ಬಿಜೆಪಿಯಿಂದ 'ಇನ್‌ಸೈಟ್ಸ್' ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯಕುಮಾರ್ ಕಣಕ್ಕೆ ಇಳಿಯಲಿದ್ದಾರೆ ಎಂಬ ಮಾತುಗಳು ಕ್ಷೇತ್ರದಲ್ಲಿ ಕೇಳಿಬರುತ್ತಿವೆ.

> **ಕಾಂಗ್ರೆಸ್ ಟಿಕೆಟ್‌ಗೆ ನಾಲ್ವರು ಕೋರಿಕೆ ಸಲ್ಲಿಸಿದ್ದಾರೆ. ಆಕಾಂಕ್ಷಿಗಳ ಪಟ್ಟಿಯನ್ನು ವರಿಷ್ಠರ ಗಮನಕ್ಕೆ ತರಲಾಗಿದೆ. ಹೈಕಮಾಂಡ್ ಶೀಘ್ರ ಅಭ್ಯರ್ಥಿ ಘೋಷಣೆ ಮಾಡಲಿದೆ**
> **ಎಚ್.ಬಿ. ಮಂಜಪ್ಪ**
> ಅಧ್ಯಕ್ಷರು, ಕಾಂಗ್ರೆಸ್ ಜಿಲ್ಲಾ ಘಟಕ

> **ಬಿಜೆಪಿಯಲ್ಲಿ 10 ಜನ ಟಿಕೆಟ್ ಆಕಾಂಕ್ಷಿಗಳಿದ್ದಾರೆ. ಇವರ ಹೆಸರುಗಳನ್ನು ರಾಜ್ಯ ಘಟಕಕ್ಕೆ ರವಾನೆ ಮಾಡಲಾಗಿದೆ. ಪಕ್ಷದ ಸಂಸದೀಯ ಮಂಡಳಿ ತೀರ್ಮಾನ ಕೈಗೊಳ್ಳಲಿದೆ**
> **ಎನ್.ರಾಜಶೇಖರ್**
> ಅಧ್ಯಕ್ಷರು ಬಿಜೆಪಿ ಜಿಲ್ಲಾ ಘಟಕ

ಮತದಾರರ ವಿವರ	
ಒಟ್ಟು	2,31,683
ಪುರುಷರು	1,13,654,
ಮಹಿಳೆಯರು	1,17,986
ಲಿಂಗತ್ವ ಅಲ್ಪಸಂಖ್ಯಾತರು	43
2023ರ ಫಲಿತಾಂಶ	
ಗೆದ್ದ ಪಕ್ಷ	ಕಾಂಗ್ರೆಸ್
ಗೆಲುವಿನ ಅಂತರ	27,888

ಕಾಂಗ್ರೆಸ್‌ಗೆ ಪ್ರತಿಷ್ಠೆ, ಬಿಜೆಪಿಗೆ ಅಗ್ನಿಪರೀಕ್ಷೆ

• ಬಸವರಾಜ ಹವಾಲ್ದಾರ



ಬಾಗಲಕೋಟೆ: ಎಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿದ್ದ ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಮೇಟಿ ಅವರ ಪುತ್ರರಾದ ಮಲ್ಲಿಕಾರ್ಜುನ ಮೇಟಿ, ಉಮೇಶ ಮೇಟಿ ಆಕಾಂಕ್ಷಿಗಳಾಗಿದ್ದಾರೆ. ಪಕ್ಷದ ವಲಯದಲ್ಲೂ ಮೇಟಿ ಕುಟುಂಬಕ್ಕೆ ಟಿಕೆಟ್ ನೀಡಬೇಕು ಎಂಬುದಕ್ಕೆ ಒಲವು ಹೆಚ್ಚಿದೆ.

ಬಿಜೆಪಿಯಿಂದ ವಿಧಾನ ಪರಿಷತ್ ಸದಸ್ಯ ಪಿ.ಎಚ್. ಪೂಜಾರ ಸೇರಿದಂತೆ ಹಲವು ಹೆಸರುಗಳು ಕೇಳಿ ಬರುತ್ತಿದ್ದರೂ ಮಾಜಿ ಶಾಸಕ ವೀರಣ್ಣ ಚರಂತಿಮಠ ಅವರ ಹೆಸರು ಮುಂಚೂಣಿಯಲ್ಲಿದೆ. ಅವರಿಗೇ ಟಿಕೆಟ್ ಘೋಷಣೆಯಾಗುವ ಸಾಧ್ಯತೆಗಳು ಹೆಚ್ಚಿವೆ.

2023ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಎಚ್.ವೈ. ಮೇಟಿ ಅವರು 79,336 ಮತಗಳನ್ನು ಪಡೆದಿದ್ದರೆ, ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ 73,458 ಮತಗಳನ್ನು ಪಡೆದಿದ್ದರು. 5,878 ಮತಗಳ ಅಂತರದಿಂದ ಎಚ್. ವೈ. ಮೇಟಿ ಗೆದ್ದಿದ್ದರು. ಪಕ್ಷೇತರರಾಗಿ ಸ್ಪರ್ಧಿಸಿದ್ದ ವೀರಣ್ಣ ಚರಂತಿಮಠ ಅವರ ತಮ್ಮ ಮಲ್ಲಿಕಾರ್ಜುನ ಚರಂತಿಮಠ 10,116 ಮತ ಪಡೆಯುವ ಮೂಲಕ ವೀರಣ್ಣ ಅವರ ಸೋಲಿಗೆ ಪರೋಕ್ಷವಾಗಿ ಕಾರಣರಾಗಿದ್ದರು.

ಲೋಕಸಭಾ ಚುನಾವಣೆ ವೇಳೆ ಮಲ್ಲಿಕಾರ್ಜುನ ಚರಂತಿಮಠ ಅವರನ್ನು ಕಾಂಗ್ರೆಸ್ ಸೆಳೆದುಕೊಂಡಿತ್ತು. ಬಾಗಲಕೋಟೆಗೆ ಶನಿವಾರ ಬಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಚರಂತಿಮಠ ಅವರ ಮನೆಗೆ ಭೇಟಿ ನೀಡುವ ಮೂಲಕ ಚುನಾವಣಾ ದಾಳ ಉರುಳಿಸಿದ್ದರು. ಅವರ ಸೇರ್ಪಡೆ ಕಾಂಗ್ರೆಸ್‌ಗೆ ಎಷ್ಟು ಪ್ಲಸ್ ಆಗಲಿದೆ ನೋಡಬೇಕು.

ಕಳೆದ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಡಾ. ದೇವರಾಜ ಪಾಟೀಲ ಸ್ಪರ್ಧಿಸಿದ್ದರು. ಅವರು 3,470 ಮತಗಳನ್ನು ಪಡೆದಿದ್ದರು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಜೆಡಿಎಸ್ ಉಪಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸಲಿದೆ. ಇದು ಬಿಜೆಪಿಗೆ ಎಷ್ಟು ಅನುಕೂಲವಾಗಲಿದೆ ನೋಡಬೇಕಿದೆ.

ಮೇಟಿ, ಚರಂತಿಮಠ ಮುಖಾಮುಖಿ: 2008ರಲ್ಲಿ ಚುನಾವಣೆಯಲ್ಲಿ ಎಚ್.ವೈ. ಮೇಟಿ, ವೀರಣ್ಣ ಚರಂತಿಮಠ ಮೊದಲ ಬಾರಿಗೆ ಮುಖಾಮುಖಿಯಾಗಿದ್ದರು. ಚರಂತಿಮಠ ಗೆಲುವು ಸಾಧಿಸಿದ್ದರು. 2013ರಲ್ಲಿ ಚರಂತಿಮಠರನ್ನು ಸೋಲಿಸಿ ಮೇಟಿ ಆಯ್ಕೆಯಾಗಿದ್ದರು. 2018ರಲ್ಲಿ ಚರಂತಿಮಠ ಮತ್ತೇ ಗೆಲುವು ಸಾಧಿಸಿದ್ದರು. 2023ರಲ್ಲಿ ಎಚ್.ವೈ.ಮೇಟಿ ಗೆಲುವಿನ ನಗೆ ಬೀರಿದ್ದರು.

ಆಡಳಿತಾರೂಢ ಕಾಂಗ್ರೆಸ್‌ಗೆ ಉಪಚುನಾವಣೆ ಪ್ರತಿಷ್ಠೆಯದ್ದಾಗಿದ್ದರೆ, ಈ ಕ್ಷೇತ್ರದಲ್ಲಿ ಗೆಲ್ಲುವ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆ ಸಾಬೀತಿನ ಜೊತೆಗೆ ಪಕ್ಷದಿಂದ ಹೊರ ಹೋಗಿರುವವರು, ಪಕ್ಷದೊಳಗಿನ ಅಸಮಾಧಾನಿತರಿಗೆ ಉತ್ತರ ನೀಡುವ ಉಮೇದು ಬಿಜೆಪಿಯದ್ದಾಗಿದೆ.

> **ರಾಜ್ಯ ಮಟ್ಟದಲ್ಲಿ ಪಕ್ಷದ ಅಭ್ಯರ್ಥಿ ಬಗ್ಗೆ ಚರ್ಚೆಯಾಗಿದೆ. ಉಪಚುನಾವಣೆ ಎದುರಿಸಲು ಮುಖಂಡರು, ಕಾರ್ಯಕರ್ತರು ಸಜ್ಜಾಗಿದ್ದಾರೆ**
> **ಶಾಂತಗೌಡ ಪಾಟೀಲ**
> ಜಿಲ್ಲಾ ಅಧ್ಯಕ್ಷ ಬಿಜೆಪಿ

> **ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಇಲ್ಲಿಗೆ ಬಂದು ಹುಮ್ಮಸ್ಸು ತುಂಬಿದ್ದಾರೆ. 'ಗ್ಯಾರಂಟಿ' ಯೋಜನೆಗಳ ಅನುಷ್ಠಾನ, ಸರ್ಕಾರದ ಅಭಿವೃದ್ಧಿ ಕೆಲಸದಿಂದ ಗೆಲುವು ಖಚಿತ**
> **ಎಸ್.ಜಿ. ನಂಜಯ್ಯಮಠ**
> ಜಿಲ್ಲಾ ಅಧ್ಯಕ್ಷ, ಕಾಂಗ್ರೆಸ್

ಮತದಾರರ ವಿವರ	
ಒಟ್ಟು	2,59,260
ಪುರುಷರು	1,26,761
ಮಹಿಳೆಯರು	1,32,476
ಲಿಂಗತ್ವ ಅಲ್ಪಸಂಖ್ಯಾತರು	23
2023ರ ಫಲಿತಾಂಶ	
ಗೆದ್ದ ಪಕ್ಷ	ಕಾಂಗ್ರೆಸ್
ಗೆಲುವಿನ ಅಂತರ	5,878

ಕೇರಳ: ತ್ರಿಕೋನ ಹೋರಾಟ

ಎಲ್‌ಡಿಎಫ್–ಯುಡಿಎಫ್‌ಗೆ ಪೈಪೋಟಿ ನೀಡಲಿರುವ ಎನ್‌ಡಿಎ

ಪ್ರಜಾವಾಣಿ ವಾರ್ತೆ

ತಿರುವನಂತಪುರಂ: ಕೇರಳದ 140 ವಿಧಾನಸಭಾ ಕ್ಷೇತ್ರಗಳಿಗೆ ಇದೇ ಏಪ್ರಿಲ್ 9ರಂದು ಮತದಾನ ನಡೆಯಲಿದೆ. ರಾಜ್ಯದಲ್ಲಿ ಇದುವರೆಗೆ, ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) ಹಾಗೂ ಸಿಪಿಎಂ ನೇತೃತ್ವದ (ಎಲ್‌ಡಿಎಫ್) ಮೈತ್ರಿಕೂಟದ ಹಣಾಹಣಿಗೆ ರಾಜ್ಯ ಸಾಕ್ಷಿಯಾಗಿತ್ತು. ಈ ಬಾರಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಪ್ರಬಲ ಶಕ್ತಿಯಾಗಿ ಹೊರಹೊಮ್ಮಿದೆ.

ಎಲ್‌ಡಿಎಫ್ ಹಾಗೂ ಯುಡಿಎಫ್ ನಡುವೆ ತುರುಸಿನ ಸ್ಪರ್ಧೆಯಿದೆ. ಹಿಂದಿನ ಫಲಿತಾಂಶಕ್ಕೆ ಹೋಲಿಸಿದರೆ, ಕೇಸರಿ ಪಕ್ಷವು ತನ್ನ ಪ್ರದರ್ಶನವನ್ನು ಸುಧಾರಿಸಿಕೊಳ್ಳುವ ಉಮೇದಿನಲ್ಲಿದೆ.

10 ವರ್ಷಗಳ ಬಳಿಕ ರಾಜ್ಯದಲ್ಲಿ ಅಧಿಕಾರ ಹಿಡಿಯಲು ಯುಡಿಎಫ್ ಎಲ್ಲ ಪ್ರಯತ್ನಗಳನ್ನು ನಡೆಸಿದ್ದು, ಎಲ್‌ಡಿಎಫ್ ಸರ್ಕಾರವು ಆಡಳಿತ ಅವಧಿಯಲ್ಲಿ ನಡೆಸಿದ ಜನಪರ ಕೆಲಸಗಳ ಮೂಲಕ ಸತತ ಮೂರನೇ ಬಾರಿ ಅಧಿಕಾರಕ್ಕೇರುವ ತವಕದಲ್ಲಿದೆ. ಇಡೀ ದೇಶದಲ್ಲಿ ಕೇರಳದಲ್ಲಿ ಮಾತ್ರ ಎಡಪಕ್ಷವು ಅಧಿಕಾರದಲ್ಲಿದ್ದು, ಇಲ್ಲಿ ಚುನಾವಣೆ ಗೆಲ್ಲುವುದು ಪಕ್ಷಕ್ಕೂ ಅನಿವಾರ್ಯವಾಗಿದೆ.

ಕೇರಳದಲ್ಲಿ ಪ್ರತಿ 5 ವರ್ಷಗಳಿಗೊಮ್ಮೆ ಯುಡಿಎಫ್ ಅಥವಾ ಎಲ್‌ಡಿಎಫ್‌ಗೆ ಜನರು ಮಣೆಹಾಕುತ್ತಿದ್ದರು. 2021ರಲ್ಲಿ ಎಲ್‌ಡಿಎಫ್ ಸತತ ಎರಡನೇ ಅವಧಿಗೆ ಅಧಿಕಾರ ಹಿಡಿದಿತ್ತು. ಕಳೆದ 10 ವರ್ಷದಿಂದ ಪ್ರಶ್ನಾತೀತ ನಾಯಕರಾಗಿದ್ದ ವಿಜಯನ್ ನೇತೃತ್ವದಲ್ಲಿ ಪಕ್ಷವು ಚುನಾವಣೆ ಎದುರಿಸಲಿದೆ. ಯುಡಿಎಫ್‌ನಲ್ಲಿ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್, ರಮೇಶ್ ಚೆನ್ನಿತ್ತಲ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಒಟ್ಟಿಗೆ ಕರೆದುಕೊಂಡು ಹೋಗುವುದು ಪಕ್ಷಕ್ಕೂ ಸವಾಲೆನಿಸಿದೆ.

ವರ್ಷದ ಹಿಂದೆ ಕೇರಳ ಬಿಜೆಪಿ ಘಟಕದ ಅಧ್ಯಕ್ಷರಾಗಿರುವ ರಾಜೀವ್ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಪಕ್ಷ ಬಲ ಹೆಚ್ಚಿಸಿಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಂದಿಟ್ಟುಕೊಂಡು, ವಿಕಸಿತ ಭಾರತ ಅಭಿಯಾನದ ಮೂಲಕ ಜನರನ್ನು ಸೆಳೆಯುವ ಯತ್ನಕ್ಕೆ ಕೈ ಹಾಕಿದ್ದಾರೆ.

ತಿರುವನಂತರಪುರದ ನೇಮಮ್‌ನಿಂದ ಕಣಕ್ಕಿಳಿಯಲು ಅವರು ನಿರ್ಧರಿಸಿದ್ದು, ಮತ್ತೆ ಈ ಕ್ಷೇತ್ರದಲ್ಲಿ ಬಿಜೆಪಿ ಬಾವುಟ ಹಾರಿಸುವ ತವಕದಲ್ಲಿದ್ದಾರೆ. 2016ರಲ್ಲಿ ಬಿಜೆಪಿಯಿಂದ ಒ.ರಾಜಗೋಪಾಲ್ ಗೆದ್ದಿದ್ದರು, 2021ರಲ್ಲಿ ಸಿಪಿಎಂನ ವಿ.ಶಿವನ್‌ಕುಟ್ಟಿ ಗೆಲುವು ಪಡೆದಿದ್ದಾರೆ.

ಮುಖ್ಯಾಂಶಗಳು
- ಎಲ್‌ಡಿಎಫ್‌ಗೆ ಹ್ಯಾಟ್ರಿಕ್ ಗೆಲುವಿನ ಗುರಿ
- 10 ವರ್ಷದ ಬಳಿಕ ಮತ್ತೆ ಅಧಿಕಾರ ಹಿಡಿಯುವ ಹುಮ್ಮಸ್ಸಿನಲ್ಲಿ ಯುಡಿಎಫ್
- ಖಾತೆ ತೆರೆಯಲು ಎನ್‌ಡಿಎ ಗುರಿ


ಕೇರಳ ವಿಧಾನಸಭಾ ಚುನಾವಣೆ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ರಾಜಧಾನಿ ತಿರುವನಂತಪುರದಲ್ಲಿ ಕೇಂದ್ರಿಯ ಮೀಸಲು ಪೊಲೀಸ್ ಪಡೆಯ ಯೋಧರು ಪಥಸಂಚಲನ ನಡೆಸಿದರು ಪಿಟಿಐ ಚಿತ್ರ

ವ್ಯಾಪಕ ಪ್ರಚಾರ– ಮುನ್ನೆಲೆಗೆ ಶಬರಿಮಲೆ

ಸರ್ಕಾರ ಕೈಗೊಂಡ ಅಭಿವೃದ್ಧಿ ಕಾರ್ಯ ಹಾಗೂ ಕಲ್ಯಾಣ ಯೋಜನೆಗಳ ಕುರಿತು ವ್ಯಾಪಕ ಪ್ರಚಾರ ನಡೆಸಿರುವ ಎಲ್‌ಡಿಎಫ್ ಸರ್ಕಾರ, ನಟ ಮೋಹನ್‌ಲಾಲ್ ಅವರನ್ನು ಸರ್ಕಾರಿ ಯೋಜನೆಗಳ ಪ್ರಚಾರಕ್ಕೆ ಬಳಸಿಕೊಂಡಿತ್ತು. ಆ ಮೂಲಕ ಕೆಲ ತಿಂಗಳ ಹಿಂದೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಉಂಟಾದ ಹಿನ್ನಡೆಯನ್ನು ತುಂಬಿಕೊಳ್ಳುವ ಪ್ರಯತ್ನದಲ್ಲಿದೆ.

ಶಬರಿಮಲೆ ದೇವಾಲಯದಲ್ಲಿ ನಡೆದ ಚಿನ್ನ ಕಳ್ಳತನ ಹಾಗೂ ಮಹಿಳೆಯರ ಪ್ರವೇಶಾತಿ ವಿಚಾರವನ್ನು ಮುಂದಿಟ್ಟುಕೊಂಡು ಯುಡಿಎಫ್ ಹಾಗೂ ಎನ್‌ಡಿಎ ಒಕ್ಕೂಟ ಜನರನ್ನು ಸೆಳೆಯುವ ಪ್ರಯತ್ನ ನಡೆಸಿದೆ.

ಯು–ಟರ್ನ್: ಶಬರಿಮಲೆ ದೇವಾಲಯಕ್ಕೆ 10ರಿಂದ 50 ವರ್ಷದ ಮಹಿಳೆಯರಿಗೆ ಪ್ರವೇಶಾತಿ ಕಲ್ಪಿಸುವ ಬೇಡಿಕೆಗೆ ಸಿಪಿಎಂ ಆರಂಭದಲ್ಲಿ ಬೆಂಬಲ ವ್ಯಕ್ತಪಡಿಸಿತ್ತು. ಈಗ ಯೂ–ಟರ್ನ್ ಹೊಡೆದಿದ್ದು, ಜನರ ನಂಬಿಕೆ ಹಾಗೂ ಸಂಪ್ರದಾಯಗಳನ್ನು ರಕ್ಷಿಸಬೇಕು ಎಂದು ತನ್ನ ನಿಲುವು ಬದಲಾಯಿಸಿದೆ.

ದೇವಾಲಯದ ಚಿನ್ನ ಕಳವು ಪ್ರಕರಣದಲ್ಲಿ ಸಿಪಿಎಂನ ಕೆಲವು ನಾಯಕರು ಬಂಧನಕ್ಕೆ ಒಳಗಾಗಿರುವುದು ಪಕ್ಷಕ್ಕೆ ಹಿನ್ನಡೆ ಉಂಟು ಮಾಡಿದೆ.

ಸಿಪಿಎಂ, ಸಿಪಿಐ ಪಟ್ಟಿ ಪ್ರಕಟ

ತಿರುವನಂತಪುರಂ: ವಿಧಾನ ಸಭೆಗೆ ಸ್ಪರ್ಧಿಸಲಿರುವ ಅಭ್ಯರ್ಥಿಗಳ ಪಟ್ಟಿಯನ್ನು ಆಡಳಿತಾರೂಢ ಸಿಪಿಎಂ ಪಕ್ಷವು ಪ್ರಕಟಿಸಿದೆ.

80 ವರ್ಷದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಧರ್ಮಡಂ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದ್ದು, ಫುಟ್‌ಬಾಲ್ ಮಾಜಿ ಆಟಗಾರ ಯು.ಶರಫ್‌ಅಲಿ ಅವರಿಗೆ ಮಲಪ್ಪುರಂ ನಿಲಂಬೂರು ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ಸಾಮಾನ್ಯವಾಗಿ ಎರಡಕ್ಕಿಂತ ಹೆಚ್ಚಿನ ಅವಧಿ ಹಾಗೂ ವಯಸ್ಸಿನ ವಯೋಮಿತಿ ವಿಚಾರದಲ್ಲಿ ಪಿಣರಾಯಿಗೆ ಸಡಿಲಿಕೆ ನೀಡಲಾಗಿದೆ. ಗರಿಷ್ಠ ಸೀಟುಗಳನ್ನು ಗೆಲ್ಲಬೇಕೆಂಬ ಕಾರಣದಿಂದ, ಉಳಿದವರಿಗೆ ಇದೇ ರೀತಿ ರಿಯಾಯಿತಿ ನೀಡಿದೆ.

86 ಕ್ಷೇತ್ರಗಳಲ್ಲಿ ಸಿಪಿಎಂ ಕಣಕ್ಕಿಳಿಯಲಿದ್ದು, 56 ಶಾಸಕರಿಗೆ ಮತ್ತೆ ಟಿಕೆಟ್ ನೀಡಲಾಗಿದೆ ಎಂದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಎಂ.ಗೋವಿಂದನ್ ತಿಳಿಸಿದ್ದಾರೆ.

ಮೈತ್ರಿಪಕ್ಷದ ಎರಡನೇ ಅತೀ ದೊಡ್ಡ ಪಕ್ಷವಾಗಿರುವ ಸಿಪಿಐ, 25 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದು, ನಾಲ್ವರು ಸಚಿವರು ಕೂಡ ಮತ್ತೆ ಸ್ಪರ್ಧಿಸಲಿದ್ದಾರೆ ಎಂದು ತಿಳಿಸಿದೆ.

ಕಳೆದ ಬಾರಿ ಮಟ್ಟನೂರು ಕ್ಷೇತ್ರದಿಂದ ಸ್ಪರ್ಧಿಸಿದ್ದ ಸಚಿವೆ ಕೆ.ಕೆ. ಶೈಲಜಾ ಅವರನ್ನು ಪೆರವೂರು ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ.

ತಮಿಳುನಾಡು: ಯಾರಿಗೆ ಪಟ್ಟ?

ಡಿಎಂಕೆ, ಎಐಎಡಿಎಂಕೆ, ಟಿವಿಕೆ ನಡುವೆ ತುರುಸಿನ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣೆಗೆ ಮುಹೂರ್ತ ನಿಗದಿಯಾಗಿದೆ. ಏಪ್ರಿಲ್ 23ರಂದು ನಡೆಯಲಿರುವ ಹಣಾಹಣಿಯಲ್ಲಿ ಸ್ಟಾಲಿನ್, ಪಳನಿಸ್ವಾಮಿ, ವಿಜಯ್ ಈ ಮೂವರಲ್ಲಿ ಯಾರಿಗೆ ಪಟ್ಟ ಎನ್ನುವುದನ್ನು ಮತದಾರರು ನಿರ್ಧರಿಸಲಿದ್ದಾರೆ.


ಸ್ಟಾಲಿನ್

ಆಡಳಿತಾರೂಢ ಡಿಎಂಕೆ ಸತತ ಎರಡನೆಯ ಅವಧಿಗೆ ಅಧಿಕಾರಕ್ಕೆ ಮರಳುವ ಮೂಲಕ ಇತಿಹಾಸ ನಿರ್ಮಿಸುವ ಉತ್ಸಾಹದಲ್ಲಿದೆ. ಪ್ರಮುಖ ವಿರೋಧ ಪಕ್ಷವಾದ ಎಐಎಡಿಎಂಕೆ ಕಳೆದುಹೋದ ವೈಭವ ಮರುಸ್ಥಾಪಿಸಿ, ಅಧಿಕಾರಕ್ಕೇರಲು ಪ್ರಯತ್ನಿಸುತ್ತಿದೆ.

ನಟ ವಿಜಯ್ ಅವರ ಹೊಸ ರಾಜಕೀಯ ಸಾಹಸವಾದ ತಮಿಳಿಗ ವೆಟ್ರಿ ಕಳಗಂ (ಟಿವಿಕೆ), ಯುವಜನರ ಬೆಂಬಲವನ್ನು ನಂಬಿಕೊಂಡು ಪವಾಡದ ನಿರೀಕ್ಷೆಯಲ್ಲಿದೆ. ಆದರೆ, ಚೊಚ್ಚಲ ಸಾರ್ವತ್ರಿಕ ಚುನಾವಣೆಯಲ್ಲೇ ಅಧಿಕಾರ ಹಿಡಿಯುವ 'ಎಂಜಿಆರ್' ಮ್ಯಾಜಿಕ್ ಅನ್ನು ಮರುಸೃಷ್ಟಿಸುವ ವಿಜಯ್ ಅವರ ಕನಸು ಅಂದುಕೊಂಡಷ್ಟು ಸುಲಭವಲ್ಲ ಎಂದು ತೋರುತ್ತದೆ.

ತಮಿಳುನಾಡಿನ ಎರಡು ಪ್ರಮುಖ ರಾಜಕೀಯ ಶಕ್ತಿಗಳಾದ ಡಿಎಂಕೆ ಮತ್ತು ಎಐಎಡಿಎಂಕೆಯ ಭವಿಷ್ಯವನ್ನು ಅಲ್ಲಿನ 5.67 ಕೋಟಿಯಷ್ಟು ಮತದಾರರು ನಿರ್ಧರಿಸಲಿದ್ದಾರೆ. ತೃತೀಯ ರಾಜಕೀಯ ಶಕ್ತಿಯಾಗಿ ಟಿವಿಕೆ ಹೊರಹೊಮ್ಮುತ್ತದೆಯೇ ಎನ್ನುವುದನ್ನು ನೋಡಬೇಕಿದೆ. ಡಿಎಂಕೆ ಮತ್ತು ಎಐಎಡಿಎಂಕೆ ಎರಡರಲ್ಲಿ ಯಾವ ಪಕ್ಷಕ್ಕೆ ಟಿವಿಕೆ ಹೆಚ್ಚಿನ ಹಾನಿ ಮಾಡಲಿದೆ ಎನ್ನುವುದರ ಕುರಿತು ಚರ್ಚೆಗಳು ನಡೆಯುತ್ತಿವೆ. ಡಿಎಂಕೆನ ಪ್ರಮುಖ ಎದುರಾಳಿ ಟಿವಿಕೆ ಎಂದು ವಿಜಯ್ ಈಗಾಗಲೇ ಘೋಷಿಸಿಕೊಂಡಿದ್ದಾರೆ. ಆಡಳಿತ ವಿರೋಧಿ ಮತಗಳ ಬಹುಪಾಲನ್ನು ಟಿವಿಕೆ ಕೊಯಿಲು ಮಾಡುವ ಸಾಧ್ಯತೆ ಹೆಚ್ಚಿದೆ. ಟಿವಿಕೆ ಶೇ 15ರಿಂದ 20ರಷ್ಟು ಮತ ಗಳಿಸಬಹುದು ಎಂದು ಕೆಲವು ಆಂತರಿಕ ಸಮೀಕ್ಷೆಗಳು ಹೇಳಿವೆ.

ಸ್ಟಾಲಿನ್ ಅವರು ಕಳೆದ 5 ವರ್ಷಗಳಲ್ಲಿ ಮಾಡಿರುವ 'ಒಳ್ಳೆಯ ಕೆಲಸ'ವನ್ನೇ ಮುಂದಿಟ್ಟುಕೊಂಡು ಮತಯಾಚಿಸುತ್ತಿದ್ದಾರೆ. ಸ್ಟಾಲಿನ್ ಅವರು ಈ ಬಾರಿಯೂ ಡಿಎಂಕೆಯನ್ನು ಗೆಲುವಿನ ದಡ ದಾಟಿಸಿದರೆ, ಸತತ 5 ವರ್ಷಗಳ ಪೂರ್ಣ ಆಡಳಿತದ ಬಳಿಕ ಮರಳಿ ಪಕ್ಷವನ್ನು ಅಧಿಕಾರಕ್ಕೆ ತಂದ ಕೆ. ಕಾಮರಾಜ್, ಎಂ. ಜಿ ರಾಮಚಂದ್ರನ್ ಮತ್ತು ಜೆ. ಜಯಲಲಿತಾ ಅವರ ಸಾಲಿಗೆ ಸೇರ್ಪಡೆ ಆಗಲಿದ್ದಾರೆ.

ಎಐಎಡಿಎಂಕೆಯ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಈ ಚುನಾವಣೆಯನ್ನು ಮಾಡು ಇಲ್ಲವೇ ಮಡಿ ಎಂದು ಹೇಳಿದ್ದಾರೆ. ಜೆ. ಜಯಲಲಿತಾ ಅವರ ನಿಧನದ (2016) ಬಳಿಕ, ಎಐಎಡಿಎಂಕೆ ಯಾವುದೇ ಚುನಾವಣೆಯನ್ನು ಗೆದ್ದಿಲ್ಲ. ರಾಜ್ಯದಲ್ಲಿ ಪಕ್ಷಕ್ಕೆ ಮರುಜೀವ ನೀಡುವ ದೃಷ್ಟಿಯಿಂದಲೂ 53 ವರ್ಷಗಳಷ್ಟು ಹಳೆಯ ಪಕ್ಷವಾದ ಎಐಎಡಿಎಂಕೆಗೆ ಈ ಚುನಾವಣೆ ಮಹತ್ವದ್ದು.

ಟಿವಿಕೆ ಜೊತೆಗೆ ಮೈತ್ರಿ ಇಲ್ಲ: ಪಳನಿಸ್ವಾಮಿ

ಚೆನ್ನೈ (ಪಿಟಿಐ): 'ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಜೊತೆಗೆ ಯಾವುದೇ ಮೈತ್ರಿ ಮಾಡಿಕೊಳ್ಳುವುದಿಲ್ಲ' ಎಂದು ಎಐಎಡಿಎಂಕೆ ಪಕ್ಷದ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಸ್ಪಷ್ಟಪಡಿಸಿದ್ದಾರೆ.

'ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ.ಅಣ್ಣಾಮಲೈ ಜೊತೆಗೆ ಯಾವುದೇ ಭಿನ್ನಾಭಿಪ್ರಾಯ ಹೊಂದಿಲ್ಲ' ಎಂದು ಹೇಳಿದ್ದಾರೆ.


ಪಳನಿಸ್ವಾಮಿ

'ಎನ್‌ಡಿಎ ಜೊತೆಗೆ ಟಿವಿಕೆ ಮೈತ್ರಿ ಮಾಡಿಕೊಳ್ಳಲಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ವಿಚಾರಕ್ಕೆ ಸಂಬಂಧಿಸಿ ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಟಿವಿಕೆ ಜೊತೆಗೆ ಯಾವುದೇ ಮಾತುಕತೆ ನಡೆಸಿಲ್ಲ. ಹಾಗಿದ್ದ ಮೇಲೆ ಮೈತ್ರಿಕೂಟ ಹೇಗೆ ರಚಿಸಲು ಸಾಧ್ಯ? ಈ ಕುರಿತು ಮಾಧ್ಯಮಗಳೇ ದೊಡ್ಡದಾಗಿ ಹೇಳುತ್ತಿವೆ. ಟಿವಿಕೆ ಜೊತೆಗೆ ಎಐಎಡಿಎಂಕೆ ಯಾವುದೇ ನಂಟು ಹೊಂದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಮಮತಾ ಭರಪೂರ ಘೋಷಣೆ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸುದೀರ್ಘ ಅವಧಿಯಿಂದ ಬಾಕಿ ಉಳಿದಿದ್ದ ರಾಜ್ಯ ಸರ್ಕಾರಿ ನೌಕರರ ತುಟ್ಟಿ ಭತ್ಯೆ (ಡಿಎ) ಬಾಕಿಯನ್ನು ಪಾವತಿ ಮಾಡುವುದಾಗಿ ಘೋಷಿಸಿದ್ದಾರೆ.


ಮಮತಾ ಬ್ಯಾನರ್ಜಿ

ಚುನಾವಣಾ ಆಯೋಗವು ವಿಧಾನಸಭಾ ಚುನಾವಣೆಯ ದಿನಾಂಕವನ್ನು ಪ್ರಕಟಿಸುವ 55 ನಿಮಿಷಕ್ಕೂ ಮುನ್ನ ಅವರು ಈ ಘೋಷಣೆ ಮಾಡಿದ್ದಾರೆ.

ಆಯೋಗದ ಪತ್ರಿಕಾಗೋಷ್ಠಿಗೂ ಮುನ್ನ ಮಮತಾ ಬ್ಯಾನರ್ಜಿ ಅವರು 'ಎಕ್ಸ್‌'ನಲ್ಲಿ 'ಭತ್ಯೆ ಪರಿಷ್ಕರಣೆ ನಿಯಮ–2009ರ (ಆರ್‌ಒಪಿಎ) ಪ್ರಕಾರ ಬಾಕಿ ಇರುವ ಡಿಎ ಹಣವನ್ನು ಮಾರ್ಚ್ ತಿಂಗಳಿನಿಂದಲೇ ನೌಕರರ ಖಾತೆಗೆ ಜಮಾ ಮಾಡಲಾಗುವುದು' ಎಂದು ತಿಳಿಸಿದ್ದಾರೆ.

ಮತ್ತೊಂದು 'ಎಕ್ಸ್' ಪೋಸ್ಟ್‌ನಲ್ಲಿ ಅವರು, ಅರ್ಚಕರು ಹಾಗೂ ಮುಝಿನ್‌ಗಳ ಗೌರವಧನವನ್ನು ₹500 ಹೆಚ್ಚಳ ಮಾಡುವುದಾಗಿ ಘೋಷಿಸಿದ್ದಾರೆ.

'ಪರಿಷ್ಕರಣೆ ಬಳಿಕ ಅವರು ತಿಂಗಳಿಗೆ ₹2,000 ಗೌರವಧನ ಪಡೆಯಲಿದ್ದಾರೆ. ಅರ್ಚಕರು ಹಾಗೂ ಮುಝಿನ್‌ಗಳು ವಿಳಂಬವಾಗಿ ಸಲ್ಲಿಸಿದ ಅರ್ಜಿಗಳನ್ನೂ ಸರ್ಕಾರ ಅನುಮೋದಿಸಿದೆ' ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರಿ ನೌಕರರಂತೆಯೇ ತುಟ್ಟಿ ಭತ್ಯೆ ನೀಡಬೇಕು ಎಂದು ಪಶ್ಚಿಮ ಬಂಗಾಳ ರಾಜ್ಯ ಸರ್ಕಾರಿ ನೌಕರರು ಒತ್ತಾಯಿಸಿದ್ದರು. ಇದಕ್ಕೆ ಸಂಬಂಧಿಸಿದಂತೆ ಕಲ್ಕತ್ತಾ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿ, ನ್ಯಾಯಾಲಯವು ನೌಕರರ ಒಕ್ಕೂಟದ ಪರವಾಗಿ ತೀರ್ಪು ಪ್ರಕಟಿಸಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಆರ್‌ಒಪಿಎ ಸೂತ್ರದ ಪ್ರಕಾರ ರಾಜ್ಯ ಸರ್ಕಾರಿ ನೌಕರರ 2008ರಿಂದ 2019ರವರೆಗಿನ ತುಟ್ಟಿ ಭತ್ಯೆಯನ್ನು ಮರುನಿಗದಿ ಮಾಡುವಂತೆ ಸುಪ್ರೀಂ ಕೋರ್ಟ್ ಕಳೆದ ತಿಂಗಳು ಆದೇಶಿಸಿತ್ತು.

ವಿಧಾನಸಭಾ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರು ಸರ್ಕಾರದ ಈ ನಿರ್ಧಾರವನ್ನು 'ಕ್ಲಾಸಿಕ್ ಟಿಎಂಸಿ ಡ್ರಾಮಾ' ಎಂದು ಟೀಕಿಸಿದ್ದಾರೆ.

ಮುಖ್ಯಾಂಶಗಳು
- ನೀತಿ ಸಂಹಿತೆಗೂ ಮುನ್ನ ಮತದಾರರ ಮನ ಗೆಲ್ಲಲು ಕಸರತ್ತು
- ಸರ್ಕಾರಿ ನೌಕರರ ಡಿಎ ಬಾಕಿ ಪಾವತಿ ಅರ್ಚಕರು, ಮುಝಿನ್‌ಗಳ ಗೌರವಧನ ಹೆಚ್ಚಳ

ಉಪ ಚುನಾವಣೆ ಗೆಲ್ಲಲು ಕೈ-ಕಮಲ ತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಉಪ ಚುನಾವಣೆಗಳು ಕಾಂಗ್ರೆಸ್ ಮತ್ತು ಬಿಜೆಪಿಗೆ ಪ್ರತಿಷ್ಠೆಯಾಗಿ ಪರಿಣಮಿಸಿದೆ.

ಎರಡೂ ಕ್ಷೇತ್ರವನ್ನು ತನ್ನ ಬಳಿಯಲ್ಲೇ ಉಳಿಸಿಕೊಳ್ಳಲು ಆಡಳಿತಾರೂಢ ಕಾಂಗ್ರೆಸ್ ಪಕ್ಷ ಪಣ ತೊಟ್ಟಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಎಐಸಿಸಿ ಮಾರ್ಗದರ್ಶನದಂತೆ ಅಭ್ಯರ್ಥಿಗಳ ಆಯ್ಕೆ ಮತ್ತು ಗೆಲುವಿನ ರಣತಂತ್ರ ರೂಪಿಸಲು ಸಚಿವರನ್ನು ಒಳಗೊಂಡ ಪ್ರಬಲ ಉಸ್ತುವಾರಿ ಸಮಿತಿಗಳನ್ನು ರಚಿಸಿ ಅಖಾಡಕ್ಕೆ ಇಳಿದಿದ್ದಾರೆ.

ಬಾಗಲಕೋಟೆಯಲ್ಲಿ ಕುರುಬ, ಲಿಂಗಾಯತ ಮತ್ತು ಪರಿಶಿಷ್ಟ ಜಾತಿಯ ಮತಗಳು ನಿರ್ಣಾಯಕವಾಗಿದ್ದು, ಇಲ್ಲಿಗೆ 15 ಸದಸ್ಯರ ಉಸ್ತುವಾರಿ ಸಮಿತಿಯನ್ನು ಕಾಂಗ್ರೆಸ್ ನೇಮಿಸಿದೆ. ಈ ಸಮಿತಿಯಲ್ಲಿ ಎಂಟು ಮಂದಿ ಪ್ರಭಾವಿ ಸಚಿವರಿದ್ದು, ಆರ್.ಬಿ. ತಿಮ್ಮಾಪುರ, ಎಂ.ಬಿ. ಪಾಟೀಲ ಮತ್ತು ಸತೀಶ ಜಾರಕಿಹೊಳಿ ಅವರಿಗೆ ಸ್ಥಾನ ನೀಡಿರುವುದು, ಕ್ಷೇತ್ರದಲ್ಲಿ ಪ್ರಾಬಲ್ಯ ಹೊಂದಿರುವ ಸಮುದಾಯಗಳನ್ನು ಸೆಳೆಯುವ ತಂತ್ರವೆಂದೇ ವಿಶ್ಲೇಷಿಸಲಾಗಿದೆ. ದಾವಣಗೆರೆಯಲ್ಲಿ ಲಿಂಗಾಯತ ಮತ್ತು ಅಲ್ಪಸಂಖ್ಯಾತ ಮತಗಳ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್, 16 ಜನರ ಸಮಿತಿಯನ್ನು ರಚಿಸಿದ್ದು, ಅದರಲ್ಲಿ 10 ಮಂದಿ ಸಚಿವರಿದ್ದಾರೆ. ಇಲ್ಲಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್ ಮತ್ತು ಜಮೀರ್ ಅಹ್ಮದ್ ಖಾನ್ ಅವರನ್ನು ಮುಂಚೂಣಿಯಲ್ಲಿ ನಿಲ್ಲಿಸಿದೆ.

ಸರ್ಕಾರದ ವಿರುದ್ಧ ನಿರಂತರ ಹೋರಾಟ ನಡೆಸುತ್ತಾ ಬಂದಿರುವ ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಎರಡೂ ಸ್ಥಾನಗಳನ್ನು ಗೆಲ್ಲಬೇಕಾದ ಅಗ್ನಿಪರೀಕ್ಷೆ ಎದುರಾಗಿದೆ.

ಈ ಹಿಂದೆ ನಡೆದಿದ್ದ ಸಂಡೂರು, ಶಿಗ್ಗಾವಿ ಮತ್ತು ಚನ್ನಪಟ್ಟಣ ಕ್ಷೇತ್ರದ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿತ್ತು. ಶಿಗ್ಗಾವಿಯನ್ನು ಬಿಜೆಪಿಯಿಂದ (ಬಸವರಾಜ ಬೊಮ್ಮಾಯಿ) ಮತ್ತು ಚನ್ನಪಟ್ಟಣವನ್ನು ಜೆಡಿಎಸ್‌ನಿಂದ (ಎಚ್.ಡಿ. ಕುಮಾರಸ್ವಾಮಿ) ಕಾಂಗ್ರೆಸ್ ಕಸಿದುಕೊಂಡಿತ್ತು.

ಈ ಕ್ಷೇತ್ರಗಳಿಗೆ ಬಿಜೆಪಿ–ಜೆಡಿಎಸ್ ಹೊಂದಾಣಿಕೆಯಿಂದ ಪೈಪೋಟಿ ನೀಡಿದರೆ ಕಾಂಗ್ರೆಸ್‌ಗೆ ಸ್ಪರ್ಧೆ ಕಠಿಣವಾಗಲಿದೆ. ಬಾಗಲಕೋಟೆಗೆ ಬಿಜೆಪಿಯು ಮಾಜಿ ಸಚಿವ ವೀರಣ್ಣ ಚರಂತಿಮಠ ಅವರಿಗೆ ಟಿಕೆಟ್ ನೀಡುವುದು ಬಹುತೇಕ ಖಚಿತವಾಗಿದೆ. ದಾವಣಗೆರೆಯಲ್ಲಿ ಟಿಕೆಟ್‌ಗಾಗಿ ಹಲವರು ಪೈಪೋಟಿ ನಡೆಸಿದ್ದಾರೆ. ಆಕಾಂಕ್ಷಿಗಳ ಹೆಸರುಗಳನ್ನು ಈಗಾಗಲೇ ವರಿಷ್ಠರಿಗೆ ಕಳುಹಿಸಲಾಗಿದೆ. ಯಾರಿಗೇ ಟಿಕೆಟ್ ಕೊಟ್ಟರೂ ಕ್ಷೇತ್ರವನ್ನು ಗೆಲ್ಲಿಸಿಕೊಂಡು ಬರಬೇಕು ಎಂಬ ಸಂದೇಶವನ್ನು ವರಿಷ್ಠರು ನೀಡಿದ್ದಾರೆ.

ಮುಖ್ಯಾಂಶಗಳು
- 2 ಕ್ಷೇತ್ರಗಳನ್ನು ತನ್ನಲ್ಲೇ ಉಳಿಸಿಕೊಳ್ಳಲು ಕಾಂಗ್ರೆಸ್ ಪಣ
- ಮೈತ್ರಿಕೂಟಕ್ಕೆ ಗೆಲ್ಲುವ ಅಗ್ನಿಪರೀಕ್ಷೆ

ಬಜೆಟ್ ಹಣ 'ಕೈ' ಜೇಬಿಗೆ: ಶಾ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಕಳೆದ 15 ವರ್ಷ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವು ರಾಜ್ಯದ ಆರೋಗ್ಯ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಮೀಸಲಿಟ್ಟ ಹಣದಲ್ಲಿ ವಾರ್ಷಿಕ ₹150 ಕೋಟಿಯನ್ನು ತನ್ನ ಜೇಬಿಗೆ ಇಳಿಸಿಕೊಂಡಿತ್ತು ಎಂದು ಗೃಹ ಸಚಿವ ಅಮಿತ್ ಶಾ ಅವರು ಆರೋಪಿಸಿದರು.

ಅಸ್ಸಾಂನಲ್ಲಿ ₹2,092 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ, ಆರೋಗ್ಯಕ್ಕೆ ಸಂಬಂಧಿಸಿದ ಯೋಜನೆಗಳ ಉದ್ಘಾಟನೆ ಮತ್ತು ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು. ಸಮಾಜದ ಎಲ್ಲ ವರ್ಗಗಳಿಗೆ ಕೈಗೆಟುಕುವ ದರದಲ್ಲಿ ಆರೋಗ್ಯ ಸೌಲಭ್ಯ ಒದಗಿಸಲು ಬಿಜೆಪಿ ಮತ್ತು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಶ್ರಮಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

10 ವರ್ಷಗಳ ಹಿಂದೆ ಅಸ್ಸಾಂ ಆರೋಗ್ಯ ಕ್ಷೇತ್ರವು ಅವ್ಯವಸ್ಥೆಯ ಬೀಡಾಗಿತ್ತು. ಪಕ್ಷದ ನಾಯಕರ ಕುಟುಂಬಗಳ ಆರ್ಥಿಕ ಆರೋಗ್ಯದ ಬಗ್ಗೆ ಮಾತ್ರ ಕಾಂಗ್ರೆಸ್ ಚಿಂತಿಸುತ್ತಿತ್ತು ಎಂದರು.

ಬಾರಾಮತಿ: ಸುನೇತ್ರಾ ಪವಾರ್ ಅವಿರೋಧ ಆಯ್ಕೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಮುಂಬೈ: ಅಜಿತ್ ಪವಾರ್ ಅವರ ನಿಧನದ ಬಳಿಕ ತೆರವಾದ ಬಾರಾಮತಿ ಕ್ಷೇತ್ರದ ಉಪಚುನಾವಣೆಯಲ್ಲಿ ಅವರ ಪತ್ನಿ, ಉಪ ಮುಖ್ಯಮಂತ್ರಿ ಸುನೇತ್ರಾ ಪವಾರ್ ಅವರು ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ಹೆಚ್ಚಳವಾಗಿದೆ.


ಸುನೇತ್ರಾ ಪವಾರ್

ಬಾರಾಮತಿ ಮತ್ತು ರಾಹುರಿ ಕ್ಷೇತ್ರದ ಉಪಚುನಾವಣೆಯು ಏಪ್ರಿಲ್ 23ರಂದು ನಡೆಯಲಿದೆ.

ಬಾರಾಮತಿ ಕ್ಷೇತ್ರದಿಂದ ಎಂಟು ಬಾರಿ ಶಾಸಕರಾಗಿದ್ದ ಮತ್ತು ಆರು ಬಾರಿ ಉಪ ಮುಖ್ಯಮಂತ್ರಿಯಾಗಿದ್ದ ಅಜಿತ್ ಪವಾರ್ ಅವರು ಜನವರಿ 28ರಂದು ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಅವರು 1991, 1995, 1999, 2004, 2009, 2014, 2019 ಮತ್ತು 2024ರಲ್ಲಿ ಬಾರಾಮತಿ ಕ್ಷೇತ್ರದಿಂದ ಆಯ್ಕೆಯಾಗಿದ್ದು, ಈ ಕ್ಷೇತ್ರದೊಂದಿಗೆ ಬಲವಾದ ನಂಟು ಹೊಂದಿದ್ದರು.

ಶರದ್ ಪವಾರ್ ನೇತೃತ್ವದ ಎನ್‌ಸಿಪಿಯು ಉಪ ಚುನಾವಣೆಯಲ್ಲಿ ಬಾರಾಮತಿ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸುವುದಿಲ್ಲ ಎಂಬ ಸುಳಿವು ನೀಡಿದೆ.

ಎನ್‌ಸಿಪಿ (ಎಸ್‌ಪಿ) ನಾಯಕ ರೋಹಿತ್ ಪವಾರ್ ಅವರು, 'ಬಾರಾಮತಿ ಕ್ಷೇತ್ರದಿಂದ ಸುನೇತ್ರಾ ಪವಾರ್ ಅವರು ಅವಿರೋಧವಾಗಿ ಆಯ್ಕೆಯಾಗಲಿ ಎಂದು ಎಲ್ಲ ರಾಜಕೀಯ ನಾಯಕರು ಮತ್ತು ಪಕ್ಷಗಳಲ್ಲಿ ಮನವಿ ಮಾಡುತ್ತೇನೆ. ಪಕ್ಷದೊಂದಿಗೆ ಮಾತುಕತೆ ನಡೆಸದೇ ಈ ಹೇಳಿಕೆ ನೀಡುತ್ತಿರುವುದಕ್ಕೆ ಕ್ಷಮೆಯಾಚಿಸುತ್ತೇನೆ. ಆದರೂ ಇದು ಎಲ್ಲ ಆಕಾಂಕ್ಷೆ' ಎಂದು ಕಳೆದ ತಿಂಗಳು ಹೇಳಿದ್ದರು.

ಎನ್‌ಡಿಎ–ಇಂಡಿಯಾ ಬಣಗಳ ನಡುವೆ ತೀವ್ರ ಪೈಪೋಟಿ • ಅಡ್ಡ ಮತದಾನ, ಪಕ್ಷಾಂತರದ ಭೀತಿಯಲ್ಲಿ ಕಾಂಗ್ರೆಸ್

ರಾಜ್ಯಸಭೆ: ಮೂವರ ಗೆಲುವಿಗೆ ಬಿಜೆಪಿ ಕಸರತ್ತು

• ಶಮಿನ್ ಜಾಯ್

ನವದೆಹಲಿ: ಬಿಹಾರ, ಹರಿಯಾಣ ಮತ್ತು ಒಡಿಶಾದಲ್ಲಿ ಸೋಮವಾರ ರಾಜ್ಯಸಭಾ ಚುನಾವಣೆಗಳು ನಡೆಯಲಿದ್ದು, ಗೆಲುವಿಗಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ಕಾಂಗ್ರೆಸ್ ರಾಜಕೀಯ ತಂತ್ರಗಳನ್ನು ಹೆಣೆದಿವೆ.

ಕೇಸರಿ ಪಕ್ಷಕ್ಕೆ ಸಂಬಂಧಿಸಿದ ಇಬ್ಬರು ಸ್ವತಂತ್ರ ಅಭ್ಯರ್ಥಿಗಳು ಮತ್ತು ಆರ್‌ಎಲ್‌ಎಂ ಮುಖ್ಯಸ್ಥ ಉಪೇಂದ್ರ ಕುಶ್ವಾಹ ಅವರನ್ನು ಬೆಂಬಲಿಸುವ ಮೂಲಕ ಮೂರು ಸ್ಥಾನಗಳಲ್ಲಿ ವಿರೋಧ ಪಕ್ಷದ ಗೆಲುವಿನ ಸಾಧ್ಯತೆಯನ್ನು ಕಡಿಮೆಗೊಳಿಸಲು ಎನ್‌ಡಿಎ ತಂತ್ರ ರೂಪಿಸಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕಾರದಲ್ಲಿ ಈ ಮೂರು ರಾಜ್ಯಗಳಲ್ಲಿ ಅವರ ಗೆಲುವಿಗೆ ವಿರೋಧ ಪಕ್ಷದ ಕೆಲ ಸದಸ್ಯರ ಅಡ್ಡ ಮತದಾನದ ಅಗತ್ಯವಿದೆ.

ಅಡ್ಡ ಮತದಾನ ಅಥವಾ ಪಕ್ಷಾಂತರದ ಭಯದಿಂದ ಕಾಂಗ್ರೆಸ್, ಒಡಿಶಾದಲ್ಲಿನ ತನ್ನ 14 ಶಾಸಕರಲ್ಲಿ ಹೆಚ್ಚಿನವರನ್ನು ಬೆಂಗಳೂರಿಗೆ ಮತ್ತು ಹರಿಯಾಣದಲ್ಲಿನ 37 ಶಾಸಕರ ಪೈಕಿ 31 ಜನರನ್ನು ಹಿಮಾಚಲ ಪ್ರದೇಶಕ್ಕೆ ಸ್ಥಳಾಂತರಿಸಿದೆ.



ಈಗಾಗಲೇ ರಾಜ್ಯಸಭೆ ಚುನಾವಣೆಗೆ ಏಳು ರಾಜ್ಯಗಳಲ್ಲಿ 26 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇದರಲ್ಲಿ ಬಿಜೆಪಿಯ 7 ಮಂದಿ, ಕಾಂಗ್ರೆಸ್‌ನ ಐವರು, ತೃಣಮೂಲ ಕಾಂಗ್ರೆಸ್‌ನ ನಾಲ್ವರು, ಡಿಎಂಕೆಯ ಮೂವರು, ಶಿವಸೇನಾ, ಆರ್‌ಪಿಐ (ಎ), ಎನ್‌ಸಿಪಿ, ಎನ್‌ಸಿಪಿ (ಎಸ್‌ಪಿ), ಎಐಎಡಿಎಂಕೆ, ಪಿಎಂಕೆ ಮತ್ತು ಯುಪಿಪಿಎಲ್‌ನ ತಲಾ ಒಬ್ಬರು ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ಒಡಿಶಾ ಕಾಂಗ್ರೆಸ್ ಶಾಸಕ ನಾಪತ್ತೆ: ಒಡಿಶಾದ ಕಾಂಗ್ರೆಸ್ ಶಾಸಕ ದಶರಥಿ ಗಮಾಂಗ್ ನಾಪತ್ತೆಯಾಗಿರುವುದು, ಕಾಂಗ್ರೆಸ್‌ನಲ್ಲಿ ತಳಮಳ ಉಂಟುಮಾಡಿದೆ. ಈಗಾಗಲೇ ಪಕ್ಷ ಅವರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಿದೆ. ಅದರ ಜತೆಗೆ ಕಾಂಗ್ರೆಸ್ ಶಾಸಕಿ ಸೋಫಿಯಾ ಫಿರ್ದೌಸ್ ಅವರೂ ಪಕ್ಷದ ವಿರುದ್ಧ ಅಸಮಾಧಾನಗೊಂಡಿದ್ದಾರೆ.

'ಬಿಜೆಪಿಯ ಬಿ–ಟೀಂ ನಂತಿರುವ ಬಿಜೆಡಿ ಜತೆ ಕಾಂಗ್ರೆಸ್ ಕೈಜೋಡಿಸಿರುವುದು ನೋವು ಉಂಟುಮಾಡಿದೆ. ಅಲ್ಲದೆ, ಚುನಾವಣಾ ಸಿದ್ಧತೆಗಳಿಂದ ನನ್ನನ್ನು ಹೊರಗಿಡಲಾಗಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಒಡಿಶಾದಲ್ಲಿ ಮನಮೋಹನ್ ಸಮಲ್ ಮತ್ತು ಸುಜೀತ್ ಕುಮಾರ್ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಎಸ್. ಮಿಶ್ರಾ ಅವರನ್ನು ಬಿಜೆಡಿ ಅಭ್ಯರ್ಥಿಯನ್ನಾಗಿಸಿದೆ. ಅಲ್ಲದೆ, ಕಾಂಗ್ರೆಸ್ ಜತೆಗೂಡಿ ಬಿಜೆಡಿಯು ದತ್ತೇಶ್ವರ ಹೋಟಾ ಅವರನ್ನು ಬೆಂಬಲಿಸಿದೆ. ಸ್ವತಂತ್ರ ಅಭ್ಯರ್ಥಿಯಾಗಿ ಕೇಂದ್ರದ ಮಾಜಿ ಸಚಿವ ದಿಲೀಪ್ ರಾಯ್ ಅವರು ಕಣದಲ್ಲಿದ್ದಾರೆ. ಬಿಜೆಪಿಯ ಇಬ್ಬರು, ಬಿಜೆಡಿಯ ಒಬ್ಬರ ಗೆಲುವು ನಿಶ್ಚಿತವಾಗಿದೆ. ಆದರೆ ಹೋಟಾ ಗೆಲುವು ಅನಿಶ್ಚಿತವಾಗಿದೆ.

ಬಿಹಾರದಲ್ಲಿ ಕುಶ್ವಾಹ–ಸಿಂಗ್ ನಡುವೆ ಪೈಪೋಟಿ: ಬಿಹಾರದಲ್ಲಿ ನಡೆಯುವ ಚುನಾವಣೆಯಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್, ಬಿಜೆಪಿ ಅಧ್ಯಕ್ಷ ನಿತಿನ್ ನವೀನ್, ಕೇಂದ್ರ ಸಚಿವ ರಾಮ್‌ನಾಥ್ ಠಾಕೂರ್ (ಜೆಡಿಯು) ಮತ್ತು ಬಿಜೆಪಿ ಶಿವೇಶ್ ಕುಮಾರ್ ರಾಜ್ಯಸಭೆ ಪ್ರವೇಶಿಸುವುದು ಖಚಿತವಾಗಿದೆ. ಆದರೆ ಆರ್‌ಎಲ್‌ಎಂನ ಉಪೇಂದ್ರ ಕುಶ್ವಾಹ ಅವರ ಆಯ್ಕೆಗೆ ಅಗತ್ಯವಿರುವ 41 ಮೊದಲ ಪ್ರಾಶಸ್ತ್ಯದ ಮತಗಳು ಎನ್‌ಡಿಎ ಬಳಿಯಿಲ್ಲ. ಅದಕ್ಕೆ ಮೂರು ಮತಗಳ ಕೊರತೆಯಿದೆ. ಇದಕ್ಕಾಗಿ ಅಡ್ಡ ಮತದಾನ ಅಥವಾ ಎರಡನೇ ಪ್ರಾಶಸ್ತ್ಯ ಮತಗಳನ್ನು ಅವಲಂಬಿಸಬೇಕಾಗಿದೆ.

'ಇಂಡಿಯಾ' ಬಣವು ಆರ್‌ಜೆಡಿ ಸಂಸದ ಎ.ಡಿ.ಸಿಂಗ್ ಅವರನ್ನು ಅಭ್ಯರ್ಥಿಯಾಗಿ ಕಣಕ್ಕಿಸಿದೆ. ಆದರೆ ಇವರ ಗೆಲುವಿಗೆ ಆರು ಮತಗಳ ಕೊರತೆಯಿದೆ. ಹೀಗಾಗಿ ಅದು ಎಐಎಂಐಎಂ ಪಕ್ಷದ ಐವರು ಶಾಸಕರು ಮತ್ತು ಬಿಎಸ್‌ಪಿಯ ಒಬ್ಬರು ಶಾಸಕರನ್ನು ಅವಲಂಬಿಸಿದೆ.

ಹರಿಯಾಣ–ಕರಮ್‌ವೀರ್‌ಗೆ ನಂದಲ್ ಪೈಪೋಟಿ: ಹರಿಯಾಣದಲ್ಲಿ ಬಿಜೆಪಿ ಅಭ್ಯರ್ಥಿ, ಮಾಜಿ ಸಂಸದ ಸಂಜಯ್ ಭಾಟಿಯಾ (ಕೇಂದ್ರ ಸಚಿವ ಎಂ.ಎಲ್. ಖಟ್ಟರ್ ಆಪ್ತ) ಗೆಲುವು ಖಚಿತವಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಕರಮ್‌ವೀರ್ ಬೌಧ್ ಅವರನ್ನು ಆಯ್ಕೆ ಮಾಡಲು ಅಗತ್ಯವಿರುವಷ್ಟು ಸಂಖ್ಯೆಯೂ ಕಾಂಗ್ರೆಸ್ ಬಳಿಯಿದೆ. ಆದರೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಬಿಜೆಪಿ ನಾಯಕ ಸತೀಶ್ ನಂದಲ್ ಅವರು ಕರಮ್‌ವೀರ್ ಅವರಿಗೆ ತೀವ್ರ ಸ್ಪರ್ಧೆಯೊಡ್ಡಿದ್ದಾರೆ. ಹೀಗಾಗಿ ಶಾಸಕರ ಖರೀದಿ ಆತಂಕದಿಂದ ಕಾಂಗ್ರೆಸ್ ತನ್ನ 31 ಶಾಸಕರನ್ನು ಹಿಮಾಚಲ ಪ್ರದೇಶಕ್ಕೆ ಕಳುಹಿಸಿದೆ.

ಹರಿಯಾಣದಲ್ಲಿ ಮೂವರು ಸ್ವತಂತ್ರ ಶಾಸಕರ ಬೆಂಬಲದ ಜತೆಗೆ ಬಿಜೆಪಿ 48 ಶಾಸಕರನ್ನು ಹೊಂದಿದೆ. ಇದರಲ್ಲಿ ಹೆಚ್ಚುವರಿ ಮತಗಳನ್ನು ನಂದಲ್ ಅವರ ಕಡೆಗೆ ತಿರುಗಿಸಲು ಪಕ್ಷ ಯೋಜಿಸಿದೆ

prajavani.net prajavani
ಸೋಮವಾರ, ಮಾರ್ಚ್ 16, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 75 | ಪುಟ 14
www.prajavani.net

ರಾಹುಲ್ ದ್ರಾವಿಡ್‌ಗೆ ಗೌರವ
ನವದೆಹಲಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರಿಗೆ ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿಯನ್ನು ಐಸಿಸಿ ಮುಖ್ಯಸ್ಥ ಜಯ್ ಶಾ ಪ್ರದಾನ ಮಾಡಿದರು



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

‘ಖೋಟಾನೋಟು’ ಹೆಸರಿನಲ್ಲಿ ವಂಚನೆ 5
ಅಮೆರಿಕ, ಅದರ ಮಿತ್ರರಿಗೆ ಇರಾನ್ ಎಚ್ಚರಿಕೆ 8

ಐದು ವಿಧಾನಸಭೆ ಅಖಾಡ ಸಜ್ಜು

ಪಶ್ಚಿಮ ಬಂಗಾಳದಲ್ಲಿ ಎರಡು ಹಂತ, ಉಳಿದ ರಾಜ್ಯಗಳಲ್ಲಿ ಒಂದೇ ಹಂತದಲ್ಲಿ ಮತದಾನ

ಪ್ರಜಾ ಮತ 2026 ಜನತಂತ್ರದ ಹಬ್ಬ

	ಅಸ್ಸಾಂ	ಕೇರಳ	ಪುದುಚೇರಿ	ತಮಿಳುನಾಡು	ಪಶ್ಚಿಮ ಬಂಗಾಳ
ಮತದಾನ ನಡೆಯುವ ದಿನ	ಏಪ್ರಿಲ್ 9	ಏಪ್ರಿಲ್ 9	ಏಪ್ರಿಲ್ 9	ಏಪ್ರಿಲ್ 23	ಏಪ್ರಿಲ್ 23 1ನೇ ಹಂತ (152 ಸ್ಥಾನಗಳು); ಏಪ್ರಿಲ್ 29 2ನೇ ಹಂತ (142 ಸ್ಥಾನಗಳು)
ಸ್ಥಾನಗಳು	126 ಸ್ಥಾನಗಳು (9 ಎಸ್‌ಸಿ / 19 ಎಸ್‌ಟಿ ಮೀಸಲು)	140 ಸ್ಥಾನಗಳು (14 ಎಸ್‌ಸಿ / 2 ಎಸ್‌ಟಿ)	30 ಸ್ಥಾನಗಳು (5 ಪರಿಶಿಷ್ಟ ಪಂಗಡಗಳಿಗೆ)	234 ಸ್ಥಾನಗಳು (44 ಎಸ್‌ಸಿ / 2 ಎಸ್‌ಟಿ)	294 ಸ್ಥಾನಗಳು (68 ಎಸ್‌ಸಿ / 16 ಎಸ್‌ಟಿ)
ಮತದಾರರು	2.50 ಕೋಟಿ	2.70 ಕೋಟಿ	9.44 ಲಕ್ಷ	5.67 ಕೋಟಿ	6.44 ಕೋಟಿ

ಒಟ್ಟು ಮತದಾರರು 17.4 ಕೋಟಿ | ಮತದಾನ ನಡೆಯುವ ದಿನ | ಒಟ್ಟು ಕ್ಷೇತ್ರಗಳು 824 | ಮತ ಎಣಿಕೆ: ಮೇ 4

• ಮಂಜುನಾಥ ಹೆಬ್ಬಾರ್

ನವದೆಹಲಿ: ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಚುನಾವಣೆಗಳ ವೇಳಾಪಟ್ಟಿಯನ್ನು ಭಾರತೀಯ ಚುನಾವಣಾ ಆಯೋಗ ಭಾನುವಾರ ಪ್ರಕಟಿಸಿದೆ. ಈ ಮೂಲಕ ಪಕ್ಷಗಳ ನಡುವಣ ಸ್ಪರ್ಧೆಗೆ ವೇದಿಕೆ ಸಜ್ಜಾಗಿದೆ.

ದೇಶದ ಸುಮಾರು 17 ಕೋಟಿ ಮತದಾರರನ್ನು ಪ್ರತಿನಿಧಿಸುವ ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಪುದುಚೆರಿಯಲ್ಲಿ ಗದ್ದುಗೆಗಾಗಿ ಹೋರಾಟ ನಡೆಯಲಿದೆ. 2024ರ ಲೋಕಸಭಾ ಚುನಾವಣೆಯ ಬಳಿಕ ನಡೆಯುತ್ತಿರುವ ಬಹು ದೊಡ್ಡ ಪೈಪೋಟಿ ಇದು.

ಕೊಲ್ಲಿ ಯುದ್ಧದಿಂದಾಗಿ ವಿದೇಶಾಂಗ ನೀತಿಯ ಕಡು ಕಠಿಣ ಸವಾಲುಗಳನ್ನು ಪ್ರಧಾನಿ ನರೇಂದ್ರ ಮೋದಿ ಎದುರಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರ ಪಕ್ಷಕ್ಕೆ ನಿರ್ಣಾಯಕ ಹೋರಾಟವಿದು. ಪಶ್ಚಿಮ ಏಷ್ಯಾ ಸಂಘರ್ಷದ ಕಿಡಿಗಳು ಪರ್ಷಿಯನ್ ಕೊಲ್ಲಿಯನ್ನು ಮೀರಿ ಭಾರತದ ನೆಲದಲ್ಲಿ ಅಗಾಧ ಪರಿಣಾಮ ಸೃಷ್ಟಿಸಿವೆ. ಸ್ಥಳೀಯ ವಿಚಾರಗಳ ಜತೆಗೆ ಹೆಚ್ಚುತ್ತಿರುವ ಇಂಧನ ಬೆಲೆಗಳು ಮತ್ತು ಅನಿಲ ಕೊರತೆಯಿಂದ ದೇಶದಲ್ಲಿ ಉಂಟಾಗಿರುವ ತಲ್ಲಣಗಳು ಬಿಜೆಪಿ ಪಾಲಿಗೆ ಬಹು ದೊಡ್ಡ ಸವಾಲು. ಬಿಜೆಪಿಗೆ ನಕಾರಾತ್ಮಕ ಆಗಬಹುದಾದ ಈ ಅಂಶವನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಇಂಡಿಯಾ ಮೈತ್ರಿಕೂಟದ ಪಕ್ಷಗಳು ಪ್ರಯತ್ನ ಆರಂಭಿಸಿವೆ. ಸಂಸತ್ ಅಧಿವೇಶನದ ಒಳಗೆ ಹಾಗೂ ಹೊರಗೆ ಗಟ್ಟಿ ಧ್ವನಿಯಲ್ಲಿ ಸರ್ಕಾರದ ವೈಫಲ್ಯವನ್ನು ಬೊಟ್ಟು ಮಾಡುತ್ತಿವೆ.

ಇಲ್ಲಿ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ‘ಪಶ್ಚಿಮ ಬಂಗಾಳದಲ್ಲಿ ಎರಡು ಹಂತಗಳಲ್ಲಿ ಹಾಗೂ ಉಳಿದ ರಾಜ್ಯಗಳಲ್ಲಿ ಒಂದೇ ಹಂತಗಳಲ್ಲಿ ಮತದಾನ ನಡೆಯಲಿದೆ. ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಎಲ್ಲ 824 ಸ್ಥಾನಗಳ ಮತ ಎಣಿಕೆ ಮೇ 4ರಂದು ಜರುಗಲಿದೆ’ ಎಂದು ಹೇಳಿದರು. ಚುನಾವಣಾ ವೇಳಾಪಟ್ಟಿ ಘೋಷಣೆಯೊಂದಿಗೆ ಮಾದರಿ ನೀತಿ ಸಂಹಿತೆ ತಕ್ಷಣ ಜಾರಿಗೆ ಬಂದಿದೆ.

ಪಶ್ಚಿಮ ಬಂಗಾಳ, ಕೇರಳ ಹಾಗೂ ತಮಿಳುನಾಡಿನಲ್ಲಿ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳು ಅಧಿಕಾರದಲ್ಲಿವೆ. ಈಶಾನ್ಯ ರಾಜ್ಯ ಅಸ್ಸಾಂನಲ್ಲಿ ದಶಕದಿಂದ ಆಡಳಿತ ನಡೆಸುತ್ತಿರುವ ಬಿಜೆಪಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯುವ ಎಣಿಕೆಯಲ್ಲಿದೆ. ಈ ರಾಜ್ಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಹೆಚ್ಚು ಕಡಿಮೆ ನೇರ ಸ್ಪರ್ಧೆಗಳು. ಮೂರನೇ ಪಕ್ಷ ಅಥವಾ ರಾಜಕೀಯ ಶಕ್ತಿ ಈ ರಾಜ್ಯದಲ್ಲಿ ಇನ್ನೂ ಬೆಳೆದು ನಿಂತಿಲ್ಲ.

ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರನ್ನು ಮಣಿಸಲು ಮೋದಿ– ಅಮಿತ್ ಶಾ ಜೋಡಿ ಮತ್ತೊಮ್ಮೆ ಶತಾಯಗತಾಯ ಪ್ರಯತ್ನ ನಡೆಸಲಿದೆ. ಮಹಿಳಾ ಮತಗಳ ಮೇಲೆ ಕಣ್ಣಿಟ್ಟು ಮಮತಾ ವಿರುದ್ಧ ಬಿಜೆಪಿ ವಾಗ್ದಾಳಿ ನಡೆಸುತ್ತಿದೆ. ‘ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗಾದ ಅವಮಾನ’ದ ಸುತ್ತ ಚುನಾವಣಾ ವಿಷಯ ರೂಪಿಸಲು ಬಿಜೆಪಿ ಪ್ರಬಲ ಪ್ರಯತ್ನ ನಡೆಸುತ್ತಿದೆ.

ಚುನಾವಣೆ ನಡೆಯುತ್ತಿರುವ ರಾಜ್ಯಗಳಲ್ಲಿ ಕೇಂದ್ರ ಬಿಂದು ಪಶ್ಚಿಮ ಬಂಗಾಳವೇ ಆಗಿರಲಿದೆ. ಕೇರಳ ಹಾಗೂ ಅಸ್ಸಾಂನಲ್ಲಿ ಕಾಂಗ್ರೆಸ್ ಪಕ್ಷವು ದಶಕದ ಬಳಿಕ ಕಮಾಲ್ ಮಾಡುವ ವಿಶ್ವಾಸದಲ್ಲಿದೆ. ಹರಿಯಾಣ ಹಾಗೂ ಮಹಾರಾಷ್ಟ್ರದಲ್ಲಿ ಕೊನೆಯ ಕ್ಷಣದಲ್ಲಿ ಎಡವಿದ ಕೈ ಪಾಳಯವು ಈ ಸಲ ಸ್ವಲ್ಪ ಎಚ್ಚರಿಕೆಯ ನಡೆ ಇಟ್ಟಿದೆ. ಅಸ್ಸಾಂನಲ್ಲಿ ಪ್ರಮುಖ ನಾಯಕರ ಪಕ್ಷಾಂತರ ಹಾಗೂ ಕೇರಳದಲ್ಲಿ ಪಕ್ಷದ ನಾಯಕರ ಆಂತರಿಕ ಕಚ್ಚಾಟವೇ ಕಾಂಗ್ರೆಸ್‌ಗೆ ತಲೆ ಬೇನೆಯಾಗಿದೆ.

ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಕಾಂಗ್ರೆಸ್ ಆಧಿಪತ್ಯ ಮುಂದುವರಿಕೆಯ ತವಕದಲ್ಲಿವೆ. ದಕ್ಷಿಣ ರಾಜ್ಯದಲ್ಲಿ ಎಲ್ಲರ ಕಣ್ಣು ಇರುವುದು ಪ್ರಖ್ಯಾತ ಸಿನಿಮಾ ನಟ ವಿಜಯ್ ಮೇಲೆ. ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ ಸ್ಥಾಪಿಸಿದ ವಿಜಯ್ ಸಭೆಗಳಿಗೆ ಭಾರಿ ಸಂಖ್ಯೆಗಳಲ್ಲಿ ಜನರು ಸೇರುತ್ತಿದ್ದಾರೆ. ಆದರೆ, ಈ ಅಲೆ ವಿಜಯ್ ಪರ ಮತವಾಗಿ ಪರಿವರ್ತನೆಯಾಗುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ. ದಕ್ಷಿಣದ ಇನ್ನೊಂದು ರಾಜ್ಯ ಕೇರಳದಲ್ಲಿ ಭಾರಿ ಪ್ರಯತ್ನದ ನಂತರವೂ ಬಿಜೆಪಿ ವರ್ಚಸ್ಸು ಹೆಚ್ಚಾದಂತಿಲ್ಲ. ಈಗಿನ ವಾತಾವರಣ ಗಮನಿಸಿದರೆ, 5ರಿಂದ 10 ಸ್ಥಾನಗಳನ್ನು ಗೆದ್ದರೆ ಬಿಜೆಪಿ ಪಾಲಿಗೆ ಬಲು ದೊಡ್ಡ ಸಾಧನೆ ಆಗಲಿದೆ.

ಕಮ್ಯುನಿಸ್ಟ್ ಪಕ್ಷಗಳ ಮೈತ್ರಿಕೂಟ ಎಲ್‌ಡಿಎಫ್ 2021ರಲ್ಲಿ ಸತತ ಎರಡನೇ ಬಾರಿಗೆ ಅಧಿಕಾರದ ಚುಕ್ಕಾಣಿ ಹಿಡಿದು ಅಚ್ಚರಿ ಮೂಡಿಸಿತ್ತು. ಈ ಸಲವೂ ಅದೇ ಫಲಿತಾಂಶ ಪುನರಾವರ್ತಿಸುವ ವಿಶ್ವಾಸದಲ್ಲಿ ಮೈತ್ರಿಕೂಟ ಇದೆ. ▶9

ರಾಜ್ಯದ ಎರಡು ಕ್ಷೇತ್ರಗಳಿಗೆ ಉಪ ಚುನಾವಣೆ ಏ.9ಕ್ಕೆ

ಕರ್ನಾಟಕದ ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ಏಪ್ರಿಲ್ 9ರಂದು ನಡೆಯಲಿದೆ. ಈ ಎರಡೂ ಕ್ಷೇತ್ರಗಳು ಸೇರಿದಂತೆ ಆರು ರಾಜ್ಯಗಳ ಎಂಟು ಕ್ಷೇತ್ರಗಳ ಉಪ ಚುನಾವಣೆ ದಿನಾಂಕವನ್ನು ಆಯೋಗ ಪ್ರಕಟಿಸಿದೆ.

ಈ ಎರಡೂ ಕ್ಷೇತ್ರಗಳ ಜತೆಗೆ ಗೋವಾದ ಪೋಂಡಾ, ನಾಗಾಲ್ಯಾಂಡ್‌ನ ಕೊರಿಡಾಂಗ್ ಮತ್ತು ತ್ರಿಪುರಾದ ಧರ್ಮನಗರ ಉಪ ಚುನಾವಣೆ ಏಪ್ರಿಲ್ 9ರಂದು ನಡೆಯಲಿದ್ದು, ಗುಜರಾತ್‌ನ ಉಮ್ರೇತ್ ಮತ್ತು ಮಹಾರಾಷ್ಟ್ರದ ರಾಹುರಿ ಮತ್ತು ಬಾರಾಮತಿಗೆ ಏಪ್ರಿಲ್ 23ರಂದು ಮತದಾನ ನಡೆಯಲಿದೆ.

ವೇಳಾಪಟ್ಟಿ	
ಅಧಿಸೂಚನೆ ಪ್ರಕಟ	ಮಾರ್ಚ್ 16
ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ	ಮಾರ್ಚ್ 23
ನಾಮಪತ್ರ ಪರಿಶೀಲನೆ	ಮಾರ್ಚ್ 24
ನಾಮಪತ್ರ ವಾಪಸ್‌ಗೆ ಕಡೆಯ ದಿನ	ಮಾರ್ಚ್ 26
ಮತದಾನ	ಏಪ್ರಿಲ್ 9
ಮತ ಎಣಿಕೆ	ಮೇ 4

ಮದ್ದೂರಮ್ಮ ದೇವಿ ಜಾತ್ರೆ

ಪ್ರಜಾವಾಣಿ ಚಿತ್ರ



ಆನೇಕಲ್ ತಾಲ್ಲೂಕಿನ ಹೆಬ್ಬಗೋಡಿ ಹೋಬಳಿಯ ಹುಸ್ಕೂರು ಮದ್ದೂರಮ್ಮ ಜಾತ್ರೆಯ ಪ್ರಮುಖ ಆಕರ್ಷಣೆಯಾಗಿರುವ ವಿವಿಧ ಗ್ರಾಮಗಳ ತೇರುಗಳು (ಕುರ್ಜು) ಒಂದೆಡೆ ನಿಂತಿದ್ದು ಮನಸೂರೆಗೊಳ್ಳುವಂತಿತ್ತು

ಒಡಿಶಾ ‘ಕೈ’ ಶಾಸಕರಿಗೆ ಲಂಚದ ಆಮಿಷ: ಇಬ್ಬರು ವಶಕ್ಕೆ

ಶಾಸಕರ ಖರೀದಿಗೆ ಬಿಜೆಪಿ ಯತ್ನ: ಕಾಂಗ್ರೆಸ್ ಆರೋಪ

ಪ್ರಜಾವಾಣಿ ವಾರ್ತೆ

ರಾಮನಗರ: ರಾಜ್ಯಸಭೆ ಚುನಾವಣೆಯಲ್ಲಿ ‘ಆಪರೇಷನ್ ಕಮಲ’ದ ಭೀತಿಯಿಂದ ಬಿಡದಿ ಬಳಿಯ ವಂಡರ್‌ಲಾ ರೆಸಾರ್ಟ್‌ನಲ್ಲಿ ಬೀಡುಬಿಟ್ಟಿರುವ ಒಡಿಶಾದ ಕಾಂಗ್ರೆಸ್ ಶಾಸಕರಿಗೆ ₹5 ಕೋಟಿ ಲಂಚದ ಆಮಿಷವೊಡ್ಡಿದ ಆರೋಪದ ಮೇಲೆ ಸ್ಥಳೀಯ ಕಾಂಗ್ರೆಸ್ ಮುಖಂಡರು ಭಾನುವಾರ ಇಬ್ಬರನ್ನು ಹಿಡಿದು ಬಿಡದಿ ಪೊಲೀಸರಿಗೆ ಒಪ್ಪಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಒಡಿಶಾ ಕಾಂಗ್ರೆಸ್ ಶಾಸಕಾಂಗ ಪಕ್ಷದ ಉಪ ನಾಯಕ ಅಶೋಕ್ ಕುಮಾರ್ ದಾಸ್ ನೀಡಿದ ದೂರಿನ ಮೇರೆಗೆ ಒಡಿಶಾದ ಮೂವರು ಮತ್ತು ಬೆಂಗಳೂರಿನ ಒಬ್ಬರು ಸೇರಿದಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ. ▶5

‘ಬಿಜೆಪಿಯಿಂದ ‘ಆಪರೇಷನ್ ಕಮಲ’ ಯತ್ನ’



ಶಿವಕುಮಾರ್

ಬೆಂಗಳೂರು: ‘ಬಿಡದಿಯ ವಂಡರ್ ಲಾ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿರುವ ಒಡಿಶಾದ ನಮ್ಮ ಪಕ್ಷದ ಶಾಸಕರನ್ನು ನಾಲ್ವರು ಭೇಟಿ ಮಾಡಿ, ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡಮತದಾನಕ್ಕೆ ತಲಾ ₹5 ಕೋಟಿ ಆಮಿಷ ಒಡ್ಡಿದ್ದಾರೆ. ಆದರೆ, ನಮ್ಮ ಶಾಸಕರು ಮಾರಾಟಕ್ಕೆ ಸಿದ್ಧರಿಲ್ಲ ಎಂದು ಹೇಳಿ ಕಳುಹಿಸಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಅವರು ಮಾತನಾಡಿದರು.

‘ಆಮಿಷ ಒಡ್ಡಿರುವ ಬಗ್ಗೆ ಶಾಸಕರು ಮನವರಿಕೆ ಮಾಡಿದ್ದಾರೆಯೇ’ ಎಂಬ ಪ್ರಶ್ನೆಗೆ, ‘ಆಪರೇಷನ್ ಕಮಲ’ ಪ್ರಯತ್ನದ ಬಗ್ಗೆ ಶಾಸಕರು ವಿವರಿಸಿದ್ದಾರೆ. ಆಮಿಷ ಒಡ್ಡಿದವರ ವಿರುದ್ಧ ಈಗಾಗಲೇ ದೂರು ನೀಡಲಾಗಿದೆ. ಆಮಿಷ ಒಡ್ಡಲು ನೀಡಿದ್ದ ಚೆಕ್ ಅನ್ನು ವಶಪಡಿಸಿಕೊಂಡಿರುವ ಪೊಲೀಸರು, ಪರಾರಿಯಾಗಿರುವ ಇಬ್ಬರನ್ನು ಹುಡುಕುತ್ತಿದ್ದಾರೆ’ ಎಂದರು.

ಒಡಿಶಾದ ಶಾಸಕರ ಜೊತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭಾನುವಾರ ಬೆಳಿಗ್ಗೆ ಡಿ.ಕೆ. ಶಿವಕುಮಾರ್ ಭೇಟಿ ಮಾಡಿದರು.

ಈ ಬಗ್ಗೆ ಕೇಳಿದಾಗ, ‘ಶಾಸಕರು ತಮ್ಮ ಆಸೆಯಂತೆ ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿದ್ದಾರೆ. ಅವರ ಜೊತೆ ಫೋಟೊ ತೆಗೆಸಿಕೊಂಡಿದ್ದು, ಸೋಮವಾರ ಬೆಳಿಗ್ಗೆ ಎಲ್ಲರೂ ಒಡಿಶಾಕ್ಕೆ ಪ್ರಯಾಣ ಬೆಳೆಸಲಿದ್ದಾರೆ’ ಎಂದರು.

ಫಾಸ್ಟ್ಯಾಗ್ ಪಾಸ್ ಶುಲ್ಕ ಹೆಚ್ಚಳ



ನವದೆಹಲಿ (ಪಿಟಿಐ): ಏಪ್ರಿಲ್ 1ರಿಂದ ಅನ್ವಯ ಆಗುವಂತೆ ವಾರ್ಷಿಕ ಫಾಸ್ಟ್ಯಾಗ್ ಪಾಸ್ ದರವನ್ನು ₹75ರಷ್ಟು ಹೆಚ್ಚಿಸಲಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (ಎನ್‌ಎಚ್ ಎಐ) ಹೇಳಿದೆ. ಹೆಚ್ಚಳದ ನಂತರ ಪಾಸ್‌ನ ದರವು ₹3,075 ಆಗಲಿದೆ. ▶8

ಚಿನಕುರುಳಿ ಪ್ರಕಾಶ್ ಶೆಟ್ಟಿ



ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಆದೇಶ

ಪಿಎನ್‌ಜಿ ಗ್ರಾಹಕರಿಗೆ ಎಲ್‌ಪಿಜಿ ಇಲ್ಲ

ನವದೆಹಲಿ (ಪಿಟಿಐ): ಕೊಳವೆ ಮೂಲಕ ಮನೆಗೆ ಅಡುಗೆ ಅನಿಲದ (ಪಿಎನ್‌ಜಿ) ಸಂಪರ್ಕ ಹೊಂದಿರುವವರು ಸಬ್ಸಿಡಿ ಇರುವ ಅಡುಗೆ ಅನಿಲ ಸಿಲಿಂಡರ್ (ಎಲ್‌ಪಿಜಿ) ಸಂಪರ್ಕ ಹೊಂದುವಂತಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ.

ಇದೇ ವೇಳೆ, ನಗರ ಅನಿಲ ವಿತರಣಾ ಕಂಪನಿಗಳು (ಸಿಜಿಡಿ) ಪಿಎನ್‌ಜಿ ಸಂಪರ್ಕ ಕಲ್ಪಿಸುವುದನ್ನು ಚುರುಕುಗೊಳಿಸಬೇಕು ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿಯು (ಪಿಎನ್‌ಜಿಆರ್‌ಬಿ) ಹೇಳಿದೆ.

ಎಲ್‌ಪಿಜಿ ಸಂಪರ್ಕದ ವಿಚಾರವಾಗಿ ‘ಎಲ್‌ಪಿಜಿ (ಪೂರೈಕೆ ಮತ್ತು ವಿತರಣೆ ನಿಯಂತ್ರಣ) ಆದೇಶ 2000’ಕ್ಕೆ ಬದಲಾವಣೆ ತಂದ ಅಧಿಸೂಚನೆಯನ್ನು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಶನಿವಾರ ಹೊರಡಿಸಿದೆ. ಪಿಎನ್‌ಜಿ ಸಂಪರ್ಕ ಹೊಂದಿರುವವರು ತಮ್ಮ ಮನೆಬಳಕೆ ಎಲ್‌ಪಿಜಿ ಸಿಲಿಂಡರ್ ಮರಳಿಸುವುದನ್ನು ಕಡ್ಡಾಯ ಮಾಡಲಾಗಿದೆ.

ಪಿಎನ್‌ಜಿ ಸಂಪರ್ಕ ಈಗಾಗಲೇ ಇರುವವರಿಗೆ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಮತ್ತು ಅವುಗಳ ವಿತರಕರು ಮನೆಬಳಕೆಯ ಎಲ್‌ಪಿಜಿ ಸಂಪರ್ಕ ನೀಡಬಾರದು ಹಾಗೂ ಸಿಲಿಂಡರ್ ಮರುಪೂರಣ ಸೇವೆಯನ್ನು ಒದಗಿಸಬಾರದು ಎಂದು ಕೂಡ ತಿದ್ದುಪಡಿ ಆದೇಶವು ಹೇಳಿದೆ.

ಪಿಎನ್‌ಜಿ ಸಂಪರ್ಕ ಇಲ್ಲದ ಮನೆಗಳಿಗೆ ಎಲ್‌ಪಿಜಿ ಸಿಲಿಂಡರ್ ಪೂರೈಕೆಗೆ ಆದ್ಯತೆ ನೀಡುವ ಗುರಿಯೊಂದಿಗೆ ಈ ಕ್ರಮ ಕೈಗೊಳ್ಳಲಾಗಿದೆ.

ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ಸಮರ ಆರಂಭಿಸಿದ ನಂತರದಲ್ಲಿ ದೇಶದಲ್ಲಿ ತಲೆದೋರಿರುವ ಎಲ್‌ಪಿಜಿ ಕೊರತೆಯನ್ನು ಸರಿದೂಗಿಸಲು ಕೈಗಾರಿಕೆಗಳಿಗೆ ಎಲ್‌ಪಿಜಿ ಪೂರೈಕೆಗೆ ನಿಯಂತ್ರಣ ಹೇರಲಾಗಿದೆ. ವಾಣಿಜ್ಯ ಬಳಕೆ ಎಲ್‌ಪಿಜಿ ಪೂರೈಕೆಯನ್ನು ಕಡಿಮೆ ಮಾಡಲಾಗಿದೆ.

ಮನೆಗಳಲ್ಲಿ ಅಡುಗೆ ಮಾಡಲು ಎಲ್‌ಪಿಜಿ ಬಳಸುವವರಿಗೆ ಆದ್ಯತೆ ನೀಡುವುದನ್ನು ಮುಂದುವರಿಸಲಾಗಿದೆ, ಅವರಿಗೆ ಎಲ್‌ಪಿಜಿ ಪೂರೈಕೆ ಸರಾಗವಾಗಿ ಇರುವಂತೆ ಖಾತರಿಪಡಿಸಲಾಗಿದೆ ಎಂದು ಈ ನಡುವೆ ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಪಿಎನ್‌ಜಿ ಮೂಲಸೌಕರ್ಯಕ್ಕೆ ವೇಗ: ಕಂಪನಿಗಳಿಗೆ ಸೂಚನೆ



ಈ ವರ್ಷದ ಜನವರಿ 31ರ ಅಂಕಿ–ಅಂಶದ ಪ್ರಕಾರ ಸಿಜಿಡಿ ಕಂಪನಿಗಳು ಒಟ್ಟು 1.65 ಕೋಟಿ ಮನೆಗಳಿಗೆ ಪಿಎನ್‌ಜಿ ಸಂಪರ್ಕ ಕಲ್ಪಿಸಿವೆ. ಈ ಪೈಕಿ 1.03 ಕೋಟಿ ಗ್ರಾಹಕರು ಸಕ್ರಿಯವಾಗಿ ಪಿಎನ್‌ಜಿ ಬಳಕೆ ಮಾಡುತ್ತಿದ್ದಾರೆ.

ಪಿಎನ್‌ಜಿ ಸಂಪರ್ಕ ಒದಗಿಸುವುದಕ್ಕೆ ಆದ್ಯತೆ ನೀಡುವುದರಿಂದ ಎಲ್‌ಪಿಜಿ ಮೇಲಿನ ಒತ್ತಡ ಕಡಿಮೆ ಆಗುತ್ತದೆ ಎಂದು ಪಿಎನ್‌ಜಿಆರ್‌ಬಿ ಹೇಳಿದೆ.

ಕಂಪನಿಗಳು ಪಿಎನ್‌ಜಿ ಪೂರೈಕೆ ಮಾಡಲು ಅಗತ್ಯವಿರುವ ಮೂಲಸೌಕರ್ಯ ಕಲ್ಪಿಸುವ ಕೆಲಸಕ್ಕೂ ವೇಗ ನೀಡಬೇಕು ಎಂಬ ಸೂಚನೆಯನ್ನು ಅದು ನೀಡಿದೆ. ಸೂಚನೆಯು ಸಲಹಾ ಸ್ವರೂಪದ್ದಾಗಿದೆ.

ಹೆಚ್ಚಿನ ಜನರನ್ನು ಮೂಲ ಸೌಕರ್ಯ ಕಲ್ಪಿಸುವ ಕೆಲಸಕ್ಕೆ ನಿಯೋಜನೆ ಮಾಡಬೇಕು. ಪಿಎನ್‌ಜಿ ಸಂಪರ್ಕ ಬಯಸಿ ಅರ್ಜಿ ಸಲ್ಲಿಸಿದ ನಂತರ ಅದು ಲಭ್ಯವಾಗುವವರೆಗಿನ ಅವಧಿಯನ್ನು ಕಡಿಮೆ ಮಾಡಬೇಕು ಎಂದು ಮಂಡಳಿ ಹೇಳಿದೆ.

ಪಿಎನ್‌ಜಿ ಸಂಪರ್ಕದ ವ್ಯಾಪ್ತಿಯನ್ನು ಹೆಚ್ಚು ಮಾಡಿದಲ್ಲಿ, ಜಾಗತಿಕ ಸಂಘರ್ಷಗಳ ಸಂದರ್ಭದಲ್ಲಿ ಪೂರೈಕೆ ವ್ಯವಸ್ಥೆಯಲ್ಲಿ ಕಂಡುಬರುವ ಸಮಸ್ಯೆಗಳಿಂದ ಆಗುವ ದುಷ್ಪರಿಣಾಮವನ್ನು ತಗ್ಗಿಸಲು ನೆರವಾಗುತ್ತದೆ ಎಂದು ಅದು ವಿವರಿಸಿದೆ.

ರಾಜ್ಯ ಸರ್ಕಾರಗಳು, ನಗರ ಆಡಳಿತ ಸಂಸ್ಥೆಗಳ ಜೊತೆ ನಿಕಟ ಸಮನ್ವಯವು ತ್ವರಿತವಾಗಿ ಅಗತ್ಯ ಅನುಮೋದನೆಗಳನ್ನು ಪಡೆಯುವಲ್ಲಿ, ಪಿಎನ್‌ಜಿ ಜಾಲವನ್ನು ವೇಗವಾಗಿ ಅಳವಡಿಸುವಲ್ಲಿ ಮಹತ್ವದ್ದಾಗುತ್ತದೆ ಎಂದು ಕಿವಿಮಾತು ಹೇಳಿದೆ.

4ನೇ ಹಡಗು ಯುಎಇಯಿಂದ ಭಾರತದತ್ತ

ನವದೆಹಲಿ (ಪಿಟಿಐ): ಕಚ್ಚಾ ತೈಲವನ್ನು ಹೊತ್ತಿರುವ ಭಾರತದ ಹಡಗು ಯುಎಇ ದೇಶದ ಫುಜೈರಾ ಬಂದರಿನಿಂದ ಭಾರತದತ್ತ ಪ್ರಯಾಣ ಆರಂಭಿಸಿದೆ.

‘ಜಗ್ ಲಾಡಕಿ’ ಹೆಸರಿನ ಈ ಹಡಗು 80,800 ಟನ್ ಕಚ್ಚಾ ತೈಲವನ್ನು ಹೊತ್ತಿದೆ. ಫುಜೈರಾದ ತೈಲ ಟರ್ಮಿನಲ್ ಮೇಲೆ ದಾಳಿ ನಡೆದಿದೆ. ಆದರೆ ಹಡಗಿನ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ. ಯುದ್ಧಪೀಡಿತ ಪ್ರದೇಶದಿಂದ ಸುರಕ್ಷಿತವಾಗಿ ಹೊರ ಬಂದಿರುವ ಭಾರತದ ನಾಲ್ಕನೆಯ ಹಡಗು ಇದು. ಪಶ್ಚಿಮ ಏಷ್ಯಾದಲ್ಲಿನ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವುದಾಗಿ ಕೇಂದ್ರ ಸರ್ಕಾರ ಹೇಳಿದೆ.

‘ಜಗ್ ಲಾಡಕಿ ಹಡಗು ಶನಿವಾರ ಕಚ್ಚಾ ತೈಲವನ್ನು ಭರ್ತಿ ಮಾಡಿಕೊಳ್ಳುತ್ತಿದ್ದಾಗ, ಫುಜೈರಾ ತೈಲದ ಟರ್ಮಿನಲ್ ಮೇಲೆ ದಾಳಿ ಆಗಿದೆ. ಆದರೆ ಹಡಗು ಅಲ್ಲಿಂದ ಸುರಕ್ಷಿತವಾಗಿ ಭಾನುವಾರ ಹೊರಟಿದೆ’ ಎಂದು ಕೇಂದ್ರ ಸರ್ಕಾರ ತಿಳಿಸಿದೆ.



ಎಲ್‌ಪಿಜಿ ಹೊತ್ತ ಭಾರತದ ಹಡಗುಗಳಾದ ‘ಶಿವಾಲಿಕ್’ ಮತ್ತು ‘ನಂದಾದೇವಿ’ ಶನಿವಾರ ಹೊರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿದ್ದವು.

ರಾಜ್ಯದಲ್ಲಿ ಯೋಜನೆ ಜಾರಿಗೆ ಕಳೆದ ವರ್ಷವೇ ಆದೇಶವಾದರೂ ಅನುಷ್ಠಾನವಿಲ್ಲ

‘ವಯೋ ವಂದನಾ’ದಡಿ ವೃದ್ಧರಿಗಿಲ್ಲ ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ‘ಆಯುಷ್ಮಾನ್ ವಯೋ ವಂದನಾ’ ಯೋಜನೆ ಜಾರಿಗೆ ಸಂಬಂಧಿಸಿದಂತೆ ಕಳೆದ ವರ್ಷವೇ ಆದೇಶ ಹೊರಡಿಸಲಾಗಿದ್ದರೂ ಈವರೆಗೂ ಯೋಜನೆ ಅನುಷ್ಠಾನಗೊಂಡಿಲ್ಲ. ಇದರಿಂದಾಗಿ ಯೋಜನೆಯಡಿ ಕಾರ್ಡ್ ಪಡೆದಿರುವ 70 ವರ್ಷ ಮೇಲ್ಪಟ್ಟ ಫಲಾನುಭವಿಗಳು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಅಲೆದಾಟ ನಡೆಸುತ್ತಿದ್ದಾರೆ.

ಕೇಂದ್ರ ಸರ್ಕಾರವು 2024ರಲ್ಲಿ ಜಾರಿ ಮಾಡಿದ ಈ ಯೋಜನೆಯಡಿ ನಿಗದಿತ ಅನುದಾನದ ಖಚಿತತೆ ಇಲ್ಲದ ಕಾರಣ, ರಾಜ್ಯ ಸರ್ಕಾರ ಅನುಷ್ಠಾನಕ್ಕೆ ಹಿಂದೇಟು ಹಾಕಿತ್ತು. 2025ರ ಸೆಪ್ಟೆಂಬರ್ ತಿಂಗಳಲ್ಲಿ ಸಚಿವ ಸಂಪುಟದ ಅನುಮೋದನೆ ದೊರೆತ ಬಳಿಕ, ಯೋಜನೆ ಜಾರಿಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿತ್ತು. ಆದರೆ, ಸೂಕ್ತ ದತ್ತಾಂಶದ ಕೊರತೆ ಹಾಗೂ ಹೆಚ್ಚುವರಿ ಅನುದಾನ ಕೇಂದ್ರದಿಂದ ದೊರೆಯದ ಕಾರಣ ಯೋಜನೆಯನ್ನು ಇನ್ನೂ ಅನುಷ್ಠಾನ ಮಾಡಿಲ್ಲ. ಇದರ ಅರಿವಿಲ್ಲದ ವೃದ್ಧರು ಯೋಜನೆಯಡಿ ಚಿಕಿತ್ಸೆ ನಿರಾಕರಿಸಿರುವ ಆಸ್ಪತ್ರೆಗಳ ಪ್ರತಿನಿಧಿಗಳ ಜತೆಗೆ ವಾಗ್ವಾದಕ್ಕೆ ಇಳಿಯುತ್ತಿದ್ದಾರೆ.

‘ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ’ಯನ್ನು (ಎಬಿ–ಪಿಎಂಜೆಎವೈ) ಕೇಂದ್ರ ಸರ್ಕಾರವು ವಿಸ್ತರಿಸಿ 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಅನ್ವಯವಾಗುವಂತೆ ರೂಪಿಸಿತ್ತು. ಇದು ₹5 ಲಕ್ಷದವರೆಗೆ ಆರೋಗ್ಯ ವಿಮೆಯ ಭರವಸೆ ಒದಗಿಸಲಿದೆ. ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರವು (ಎನ್‌ಎಚ್‌ಎ) ದೇಶದಲ್ಲಿ ಈ ಯೋಜನೆಯ ಅನುಷ್ಠಾನದ ಹೊಣೆ ಹೊತ್ತಿದೆ.

2 ಲಕ್ಷ ಕಾರ್ಡ್: ಎನ್‌ಎಚ್‌ಎ ಪೋರ್ಟಲ್ ಮೂಲಕವೇ 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಕಾರ್ಡ್ ಪಡೆಯುವ ಅವಕಾಶ ನೀಡಲಾಗಿದೆ. ರಾಜ್ಯದಲ್ಲಿ ಎರಡು ಲಕ್ಷಕ್ಕೂ ಅಧಿಕ ಮಂದಿ ‘ವಯೋ ವಂದನಾ’ ಕಾರ್ಡ್ ಪಡೆದಿದ್ದಾರೆ. ಆದರೆ, ಯೋಜನೆ ಜಾರಿಯಾಗದ ಪರಿಣಾಮ ಈ ಕಾರ್ಡ್‌ಗಳು ನಿರರ್ಥಕವಾಗುತ್ತಿವೆ. ಕಾರ್ಡ್ ಹೊಂದಿದ್ದರೂ ಚಿಕಿತ್ಸೆ ಸಿಗದ ಪರಿಣಾಮ ಲಕ್ಷಾಂತರ ರೂಪಾಯಿ ಚಿಕಿತ್ಸಾ ವೆಚ್ಚ ಭರಿಸುವುದು ಅನಿವಾರ್ಯವಾಗಿದೆ.

‘ವಯೋ ವಂದನಾ ಯೋಜನೆ ಜಾರಿಗೆ ಆದೇಶವಾದರೂ ಅನುಷ್ಠಾನವಾಗಿಲ್ಲ. ಆದರೆ, ಕಾರ್ಡ್ ವಿತರಣೆ ಮುಂದುವರಿದ ಪರಿಣಾಮ ಫಲಾನುಭವಿಗಳು ಯೋಜನೆಯಡಿ ಚಿಕಿತ್ಸೆ ಪಡೆಯಲು ಬರುತ್ತಿದ್ದಾರೆ. ಯೋಜನೆ ಜಾರಿಯಾಗಿಲ್ಲ ಎಂದರೂ ಅವರು ನಂಬುತ್ತಿಲ್ಲ. ನಾವು ಅಸಹಾಯಕರಾಗಿದ್ದು, ಅವರಿಗೆ ಮನವರಿಕೆ ಮಾಡಿಸುವುದು ಕಷ್ಟಸಾಧ್ಯ’ ಎಂದು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವೈದ್ಯರೊಬ್ಬರು ತಿಳಿಸಿದರು.

ಅಂಕಿ ಅಂಶಗಳು

2,16,388 ವಯೋ ವಂದನಾ ಯೋಜನೆಯಡಿ ಕಾರ್ಡ್‌ಗೆ ಅರ್ಜಿ ಸಲ್ಲಿಕೆ

2,16,265 ಯೋಜನೆಯಡಿ ಈಗಾಗಲೇ ಕಾರ್ಡ್ ಪಡೆದವರು

> ಯೋಜನೆಗೆ ಸಂಬಂಧಿಸಿದಂತೆ ದತ್ತಾಂಶ, ಅನುದಾನದ ವಿಷಯದಲ್ಲಿ ಕೆಲ ಗೊಂದಲಗಳಿವೆ. ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಈ ಬಗ್ಗೆ ಪತ್ರ ಬರೆಯಲಾಗಿದೆ
>
> **ಹರ್ಷ ಗುಪ್ತ**, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ

ಒಬ್ಬರಿಗೆ ₹5 ಲಕ್ಷ ವಿಮೆ

ರಾಜ್ಯದಲ್ಲಿ ಸದ್ಯ ಜಾರಿಯಲ್ಲಿರುವ ‘ಆಯುಷ್ಮಾನ್ ಭಾರತ್- ಆರೋಗ್ಯ ಕರ್ನಾಟಕ’ ಯೋಜನೆಯಡಿ ಬಿಪಿಎಲ್ ಕುಟುಂಬದ ಎಲ್ಲ ಸದಸ್ಯರಿಗೆ ಸೇರಿ ₹5 ಲಕ್ಷದವರೆಗೆ ಆರೋಗ್ಯ ವಿಮೆ ಒದಗಿಸಿದರೆ, ‘ಆಯುಷ್ಮಾನ್ ವಯೋ ವಂದನಾ’ ಯೋಜನೆಯಡಿ 70 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರಿಗೂ ₹5 ಲಕ್ಷದವರೆಗೆ ಆರೋಗ್ಯ ವಿಮೆ ನೀಡಲಾಗುತ್ತದೆ. 70 ವರ್ಷ ಮೇಲ್ಪಟ್ಟ ಎಲ್ಲರೂ ಈ ಯೋಜನೆಯಡಿ ಬರಲಿದ್ದು, ನೋಂದಣಿಗೆ ಆಧಾರ್ ಕಾರ್ಡ್ ಮಾತ್ರ ಅಗತ್ಯ. ಯೋಜನೆಯಡಿ ಚಿಕಿತ್ಸೆಗೆ ‘ವಯೋ ವಂದನಾ’ ಕಾರ್ಡ್ ಕಡ್ಡಾಯವಾಗಿದೆ. ಆದ್ದರಿಂದ, ರಾಜ್ಯದಲ್ಲಿಯೂ 70 ವರ್ಷ ಮೇಲ್ಪಟ್ಟವರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಡ್ ಪಡೆದಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಇಂದು ಶುಭ್ರ ಆಕಾಶ ಇರಲಿದೆ

‘ಸತ್ಯ ದರ್ಶನ: ಲೇಖಕರ ಜವಾಬ್ದಾರಿ’

‘ಜನ ಚಳವಳಿಗಳು ಮತು ಸಾಹಿತ್ಯ’ ವಿಚಾರ ಸಂಕಿರಣದಲ್ಲಿ ಬರಗೂರು ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಾರತಮ್ಯದ, ಅಮಾನವೀಯ ಸಮಾಜದ ಬಗ್ಗೆ ಲೇಖಕರಾದವರು ಜನಸಾಮಾನ್ಯರಿಗೆ ಮನವರಿಕೆ ಮಾಡಿಸಬೇಕು. ಇಲ್ಲವಾದಲ್ಲಿ ಲೇಖಕರಾಗಿ ನಾವು ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯು ‘ಬಂಡಾಯ ಸಾಹಿತ್ಯ: ಹೊಸ ತಲೆಮಾರು’ ಅಭಿಯಾನದ ಭಾಗವಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಜನ ಚಳವಳಿಗಳು ಮತ್ತು ಸಾಹಿತ್ಯ’ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

‘ದೇಶದಲ್ಲಿ ಬಡತನ ಹಾಗೇ ಇದ್ದು, ಕೋಟ್ಯಾಧೀಶರ ಸಂಖ್ಯೆ ಜಾಸ್ತಿಯಾಗಿದೆ. ದಲಿತರು ಮತ್ತು ಮಹಿಳೆಯರ ಮೇಲೆ ದೌರ್ಜನ್ಯ ಮುಂದುವರಿದಿದೆ. ಇದನ್ನು ಕೇಂದ್ರ ಸರ್ಕಾರದ ಅಂಕಿ–ಅಂಶಗಳೇ ಹೇಳುತ್ತವೆ. ದೇಶದಲ್ಲಿ ಶೇಕಡ 24ಕ್ಕಿಂತ ಹೆಚ್ಚು ಮಂದಿ ಕಡುಬಡವರಾಗಿದ್ದಾರೆ. ಸಾಮಾಜಿಕ ಹಾಗೂ ಆರ್ಥಿಕ ಸಮಾನತೆ ಸಾಧಿಸುವ ದಿಕ್ಕಿನಲ್ಲಿ ಸಾಗಬೇಕಾದ ದಾರಿ ಬಹಳ ದೂರವಿದೆ. ಆದರೆ, ಈ ಸಮಸ್ಯೆಗಳನ್ನು ಹಿನ್ನೆಲೆಗೆ ಸರಿಸಿ, ಧರ್ಮದ ಹೆಸರನ್ನು ಮುಂದೆ ತರುವ ಮೂಲಕ ಯುವಜನರ ದಾರಿ ತಪ್ಪಿಸಲಾಗುತ್ತಿದೆ. ಆದ್ದರಿಂದ ನಮ್ಮ ಯುವ ತಲೆಮಾರಿಗೆ ತಾರತಮ್ಯ ತೊರೆಯುವ ತಾತ್ವಿಕತೆಯನ್ನು ಬೆಳೆಸಬೇಕಾದ ಅಗತ್ಯವಿದೆ’ ಎಂದರು.

‘ತಾತ್ವಿಕತೆ ಬೆಳೆಸುವಿಕೆಗೆ ಸಂಬಂಧಿಸಿದಂತೆ ಲೇಖಕರು ಒಂದೊಂದು ರೀತಿ ಭಾಗವಹಿಸಲು ಸಾಧ್ಯ. ಕೆಲವರು ನೇರವಾಗಿ ಹೋರಾಟಗಳಲ್ಲಿ ಭಾಗವಹಿಸಿದರೆ, ಇನ್ನೂ ಕೆಲವರು ಕವಿತೆ, ಕಥೆ, ಲೇಖನಗಳ ಮೂಲಕ ಅಭಿವ್ಯಕ್ತಿಪಡಿಸಬಹುದಾಗಿದೆ. ಪ್ರಸ್ತುತ ಸನ್ನಿವೇಶದ ಬಗ್ಗೆ ತಿಳಿವಳಿಕೆ ಹಾಗೂ ಅರಿವು ನೀಡಿ, ಈ ಮೂಲಕ ಹೆಚ್ಚು ಹೆಚ್ಚು ಜನರನ್ನು ತೊಡಗಿಸಿಕೊಳ್ಳುವುದು ಸಾಹಿತಿಗಳ ಜವಾಬ್ದಾರಿಯಾಗಿದೆ. ಲಿಂಗ, ಜಾತಿ, ವರ್ಗ ಹಾಗೂ ಧರ್ಮ ತಾರತಮ್ಯ ಮೀರಿದ ಸಮಾನತೆಯ ಸಮಾಜ ಕಟ್ಟಲು ಬೇಕಿರುವ ಮನೋಭೂಮಿಕೆ ಸಿದ್ಧಪಡಿಸಬೇಕು’ ಎಂದು ಅಭಿಪ್ರಾಯಪಟ್ಟರು.



ನಗಾರಿ ಬಾರಿಸುವ ಮೂಲಕ ಬರಗೂರು ರಾಮಚಂದ್ರಪ್ಪ ಅವರು ವಿಚಾರಸಂಕಿರಣಕ್ಕೆ ಚಾಲನೆ ನೀಡಿದರು. ಕಿರಣ್ ಎಂ. ಗಾಜನೂರು, ಎಚ್.ಎಲ್. ಪುಷ್ಪ, ವಿಕ್ರಮ್ ವಿಸಾಜಿ, ಬಿ. ರಾಜಶೇಖರಮೂರ್ತಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಜನ ಚಳವಳಿಗಳು ಮತ್ತು ಸೃಜನಶೀಲ ಸವಾಲುಗಳು’ ಎಂಬ ವಿಷಯದ ಬಗ್ಗೆ ಮಾತನಾಡಿದ ವಿಮರ್ಶಕ ವಿಕ್ರಮ್ ವಿಸಾಜಿ, ‘ಚಳವಳಿ ಜತೆಗಿನ ಆಳವಾದ ನೈತಿಕ ಸಂಬಂಧ ಲೇಖಕರಲ್ಲಿ ಸೃಜನಶೀಲತೆ ರೂಪಿಸುತ್ತದೆ. ಬರಹ ಹಾಗೂ ನುಡಿಗಟ್ಟನ್ನು ಬದಲಾಯಿಸುತ್ತದೆ. ಚಳವಳಿಯಿಂದ ಲೇಖಕರು ಕಲಿಯುವ, ಲೇಖಕರಿಂದ ಚಳವಳಿ ಕಲಿಯುವಂತಹ ವಾತಾವರಣ ನಿರ್ಮಾಣವಾಗಬೇಕು’ ಎಂದರು.

ಸಂಘಟನೆಯ ಬಿ. ರಾಜಶೇಖರ ಮೂರ್ತಿ, ‘ಸಂಘಟನೆಯು ಈ ವರ್ಷ ರಾಜ್ಯದ ವಿವಿಧೆಡೆ ಪ್ರಗತಿಪರ ವಿಚಾರ ಧಾರೆಯ ಕಾರ್ಯಕ್ರಮಗಳನ್ನು ನಡೆಸಲು ಮುಂದಾಗಿದೆ. ಹೊಸ ತಲೆಮಾರಿನವರನ್ನು ಹೆಚ್ಚು ತೊಡಗಿಸಿಕೊಳ್ಳಬೇಕು ಎಂಬುದು ಸಂಘಟನೆಯ ಆಶಯ’ ಎಂದರು.

‘ಜಾಗತಿಕ ಜನ ಚಳವಳಿಗಳು ಮತ್ತು ಸಾಹಿತ್ಯ’ ವಿಷಯದ ಬಗ್ಗೆ ಕಿರಣ್ ಎಂ. ಗಾಜನೂರು ಮಾತನಾಡಿದರು. ಲೇಖಕಿ ಎಚ್.ಎಲ್. ಪುಷ್ಪ ಅಧ್ಯಕ್ಷತೆ ವಹಿಸಿದ್ದರು.

ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ಕಿವಿಮಾತು

‘ಸಂಯಮದಿಂದ ಜೀವನ ಸಾಗಿಸಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮದುವೆ ಎನ್ನುವುದು ಪವಿತ್ರ ಬಂಧನವಾಗಿದೆ. ಕೌಟುಂಬಿಕ ಕಲಹ ಮಾಡಿಕೊಂಡು ನ್ಯಾಯಾಲಯದ ಕಟಕಟೆವರೆಗೆ ಬರದೆ, ಸಮಾಧಾನ ಮತ್ತು ಸುಖ ಚಿತ್ತರಾಗಿ ಬದುಕನ್ನು ಕಟ್ಟಿಕೊಳ್ಳಬೇಕು’ ಎಂದು ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ಕಿವಿಮಾತು ಹೇಳಿದರು.

ಅಕ್ಷಯ ವಿಪ್ರ ಮಹಾಸಭಾವು ತ್ರಿಮಸ್ಥ ಬ್ರಾಹ್ಮಣರಿಗಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಧು-ವರಾನ್ವೇಷಣ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ‘ಪೋಷಕರು ಮಕ್ಕಳಿಗೆ ಸೂಕ್ತ ಸಮಯದಲ್ಲಿ ವಿವಾಹ ಕಾರ್ಯಕ್ರಮ ನೆರವೇರಿಸಬೇಕು. ನವ ಜೋಡಿಗಳು ಯಾವುದೇ ಕಲಹ ಮಾಡಿಕೊಳ್ಳದೆ, ಸಂಯಮದಿಂದ ಜೀವನ ಸಾಗಿಸಬೇಕು’ ಎಂದರು.

‘ಒಂದು ಕಾಲದಲ್ಲಿ ಉತ್ತಮವಾದ ವರ ಸಿಗುತ್ತಾನಾ ಎನ್ನುವ ಪ್ರಶ್ನೆಯಿತ್ತು. ಈಗ ಪರಿಸ್ಥಿತಿ ಬದಲಾಗಿದ್ದು, ಒಳ್ಳೆಯ ಹುಡುಗಿ ಸಿಗುತ್ತಾಳಾ ಎಂದು ವಿಚಾರ ಮಾಡುವಂತಾಗಿದೆ. ಕೆಲ ಪಟ್ಟಭದ್ರರು ಹೆಣ್ಣು-ಗಂಡು ಜೋಡಿ ಮಾಡುವವರಿಗೆ ಮದುವೆ ದಲ್ಲಾಳಿಗಳೆಂದು ಕರೆಯುತ್ತಾರೆ. ಹಾಗೆ ಕರೆಯುವುದು ತಪ್ಪು. ನವ ಜೋಡಿಗಳೊಂದಿಗೆ ಎರಡು ಕುಟುಂಬಗಳನ್ನು ಬೆಸೆಯುವ ಕೆಲಸವನ್ನು ಅವರು ಮಾಡಿರುತ್ತಾರೆ. ಹೀಗಾಗಿ ದಲ್ಲಾಳಿ ಎನ್ನುವ ಪದ ಸಲ್ಲದು’ ಎಂದು ಹೇಳಿದರು.

‘ಮದುವೆಯಲ್ಲಿ ಬ್ರಹ್ಮ, ದೈವ, ಆರ್ಷ, ಪ್ರಜಾಪತ್ಯ, ಅಸುರ, ಗಂಧರ್ವ ಮತ್ತು ರಾಕ್ಷಸ ಎಂಬ ಎಂಟು ವಿಧಗಳಿವೆ. ಮದುವೆಗೆ ಮುಂಚೆ ಹುಡುಗ-ಹುಡುಗಿ ದೈಹಿಕ ಸಂಬಂಧ ಬೆಳೆಸಿಕೊಂಡರೆ ಅದು ರಾಕ್ಷಸ ವಿವಾಹವಾಗುತ್ತದೆ. ಮದುವೆ ಆಗದೇ ಇರುವವರಿಗೆ ಹಿಂಸೆ, ಸಾಮಾಜಿಕ ತುಮುಲಗಳು ಎದುರಾಗುತ್ತವೆ. ಹೀಗಾಗಿ, ಪೋಷಕರು ನೋಡುವ ಕನ್ಯೆ ಅಥವಾ ವರನನ್ನು ಒಪ್ಪಿಕೊಂಡು ಸಿಕ್ಕ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.



ಸಮಾರಂಭದಲ್ಲಿ ಮಹಾಸಭಾದ ವತಿಯಿಂದ ವಿ.ಶ್ರೀಶಾನಂದ ಅವರನ್ನು ಗೌರವಿಸಲಾಯಿತು. ಎನ್.ಕೆ.ರಾಮಚಂದ್ರರಾವ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು


ಅಕ್ಷಯ ವಿಪ್ರ ಮಹಾಸಭಾ ಅಧ್ಯಕ್ಷ ಎನ್.ಕೆ.ರಾಮಚಂದ್ರರಾವ್, ‘ಮಹಾಸಭಾದಲ್ಲಿ 2,500ಕ್ಕೂ ಹೆಚ್ಚು ಸದಸ್ಯರಿದ್ದಾರೆ. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ವಿದ್ಯಾರ್ಥಿ ವಸತಿ ನಿಲಯ, ಆರೋಗ್ಯ ಸೌಲಭ್ಯಕ್ಕಾಗಿ ವೈದ್ಯಕೀಯ ಸೇವೆ, ವಧು-ವರರ ಸಮಾವೇಶ, ಸಾಮೂಹಿಕ ಉಪನಯನ ಹೀಗೆ ಹತ್ತು ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದರು.

ಇದಕ್ಕೂ ಮೊದಲು ‘ಗಿರಿಜಾ ಕಲ್ಯಾಣ’ ಮತ್ತು ‘ಪದ್ಮಾವತಿ ಕಲ್ಯಾಣ’ ಮಹೋತ್ಸವಗಳನ್ನು ನೆರವೇರಿಸಲಾಯಿತು.

‘ರಮೇಶ್ ಬಂಡಿಸಿದ್ದೇಗೌಡ ಹೇಳಿಕೆ ಖಂಡನೀಯ’

ಬೆಂಗಳೂರು: ‘ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಕುರಿತು ಕಾಂಗ್ರೆಸ್ ಶಾಸಕ ರಮೇಶ್ ಬಂಡಿಸಿದ್ದೇಗೌಡ ಆಡಿರುವ ಮಾತು ಖಂಡನೀಯ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ರಮೇಶ್ ಅವರ ಮಾತು, ಹಿಂದೂ ಧರ್ಮ ಮತ್ತು ಧರ್ಮಗುರುಗಳ ಬಗ್ಗೆ ಕಾಂಗ್ರೆಸ್‌ಗೆ ಇರುವ ಧೋರಣೆಯನ್ನು ತೋರಿಸುತ್ತದೆ.



ಆರ್.ಅಶೋಕ

ಗುರುನಿಂದನೆ ಮಾಡಿರುವ ರಮೇಶ್ ಅವರು ಕೂಡಲೇ ಕ್ಷಮೆ ಕೇಳಬೇಕು. ಹಿಂದೂ ಧರ್ಮದ ಬಗ್ಗೆ ಗೌರವವಿದ್ದರೆ, ಕಾಂಗ್ರೆಸ್ ಕೂಡಲೇ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

‘ಒಕ್ಕಲಿಗ ಸಮಾಜದ ಕೆಂಗಣ್ಣಿಗೆ ಗುರಿಯಾದರೆ ಕಾಂಗ್ರೆಸ್ ಪಕ್ಷವು ದೂಳೀಪಟವಾಗುವುದು ನಿಶ್ಚಿತ. ಹೀಗಾಗಿ ತಕ್ಷಣವೇ ಕ್ರಮ ತೆಗೆದುಕೊಳ್ಳಲಿ’ ಎಂದು ಎಚ್ಚರಿಕೆ ನೀಡಿದ್ದಾರೆ.

ಮೃತ್ಯುಂಜಯ ದೊಡ್ಡವಾಡ ಅವರಿಗೆ ಗೌರಿಸುಂದರ್ ವಾರ್ಷಿಕ ಪ್ರಶಸ್ತಿ ಪ್ರದಾನ

‘ಸುಗಮ ಸಂಗೀತ ಕ್ಷೇತ್ರ ಉಳಿಸಲಿ’

ಬೆಂಗಳೂರು: ‘ಸುಗಮ ಸಂಗೀತ ಕ್ಷೇತ್ರವು ವಿಶಾಲವಾಗಿ ಬೆಳೆಯಲು ಹಲವರು ಶ್ರಮಿಸಿದ್ದು, ಯುವ ಪೀಳಿಗೆಯು ಇದನ್ನು ಉಳಿಸಿಕೊಂಡು ಹೋಗಲು ಮುಂದಾಗಬೇಕು’ ಎಂದು ಕವಿ ಬಿ.ಆರ್.ಲಕ್ಷ್ಮಣರಾವ್ ಹೇಳಿದರು.

ಸುಂದರ ಪ್ರಕಾಶನವು ಬಸವನಗುಡಿಯ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ‘ಗೌರಿಸುಂದರ್ ವಾರ್ಷಿಕ ಪ್ರಶಸ್ತಿ’ ಪ್ರದಾನ ಮಾಡಿ ಮಾತನಾಡಿದರು.

‘ಕನ್ನಡದಲ್ಲಿ ಸುಗಮ ಸಂಗೀತ ಕ್ಷೇತ್ರವು ಜನಮಾನಸವನ್ನು ತಲುಪಲು ವಿವಿಧ ಕ್ಷೇತ್ರದವರ ಕೊಡುಗೆ ಇದೆ. ಕವಿಗಳು, ಸ್ವರ ಸಂಯೋಜಕರ ಜತೆಗೆ ಗಾಯಕರ ಪಾತ್ರವೂ ಪ್ರಮುಖವಾದದ್ದು. ಇಂತಹ ಪ್ರಕಾರವನ್ನು ಜನ ಪ್ರೀತಿಯಿಂದ ಒಪ್ಪಿಕೊಂಡಿದ್ದರಿಂದಲೇ ಈಗಲೂ ಬೆಳೆಯುತ್ತಲೇ ಇದೆ’ ಎಂದು ನುಡಿದರು.

‘ಮೃತ್ಯುಂಜಯ ದೊಡ್ಡವಾಡ ಅವರು ಹೊಸ ತಲೆಮಾರಿನ ಗಾಯಕರು ಹಾಗೂ ಸಂಗೀತ ಸಂಯೋಜಕರು. ವಿಭಿನ್ನ ಕವಿಗಳ ಸಾಲುಗಳಿಗೆ ಸ್ವರ ಸಂಯೋಜನೆ ಮಾಡಿ ಹಾಡುತ್ತಾ ಮುಂದಿನ ಪೀಳಿಗೆಗೂ ತಲುಪಿಸುವ ಕೆಲಸ ಮಾಡುತ್ತಿದ್ದಾರೆ. ಯುವ ತಲೆಮಾರಿಗೆ ಇದೊಂದು ಮಾದರಿ’ ಎಂದು ಹೇಳಿದರು.

ಸಾಹಿತಿ ನಾ.ದಾಮೋದರ ಶೆಟ್ಟಿ ಮಾತನಾಡಿ, ‘ಯಾವುದೇ ಕ್ಷೇತ್ರದಲ್ಲಿಯಾದರೂ ಮನಃಪೂರ್ವಕವಾಗಿ ತೊಡಗಿಸಿಕೊಳ್ಳದೇ ಇದ್ದರೆ ಅದು ಜನರನ್ನು ತಲುಪುವುದು ಕಷ್ಟ. ಮೃತ್ಯುಂಜಯ ದೊಡ್ಡವಾಡ ಅವರು ಸುಗಮ ಸಂಗೀತ ಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡು ಈ ಮಟ್ಟಕ್ಕೆ ಬೆಳೆದಿದ್ದಾರೆ’ ಎಂದರು.

ಕರ್ನಾಟಕ ಸುಗಮ ಸಂಗೀತ ಪರಿಷತ್‌ನ ವೈ.ಕೆ.ಮುದ್ದುಕೃಷ್ಣ ಮಾತನಾಡಿ, ‘ಸುಗಮ ಸಂಗೀತ ಕ್ಷೇತ್ರ ಎನ್ನುವುದು ಜನರ ಜೀವನದ ಭಾಗವೇ ಆಗಿ ಹೋಗಿದೆ. ಅಷ್ಟರ ಮಟ್ಟಿಗೆ ಹಿರಿಯರು ಹಾಕಿಕೊಟ್ಟ ಪರಂಪರೆಯನ್ನು ಈಗಿನವರು ಮುಂದುವರಿಸಿಕೊಂಡು ಹೋಗುತ್ತಿರುವುದು ಸ್ತುತ್ಯಾರ್ಹ’ ಎಂದು ಹೇಳಿದರು.

ಸುಂದರ ಪ್ರಕಾಶನದ ಇಂದಿರಾ ಗೌರಿ ಸುಂದರ್ ಮಾತನಾಡಿ, ‘ಪ್ರತಿ ವರ್ಷವೂ ಸಾಹಿತ್ಯ, ಸಂಸ್ಕೃತಿ, ಪತ್ರಿಕೋದ್ಯಮ ಸಹಿತ ಒಂದೊಂದು ಕ್ಷೇತ್ರದ ಸಾಧಕರನ್ನು ಗುರುತಿಸಿ ಪ್ರಶಸ್ತಿಯನ್ನು ನೀಡುತ್ತಾ ಬಂದಿದ್ದೇವೆ. ಈ ಬಾರಿ ಸುಗಮ ಸಂಗೀತ ಕ್ಷೇತ್ರದ ಸಾಧಕರನ್ನು ಆಯ್ಕೆ ಮಾಡಲಾಗಿದೆ’ ಎಂದರು.

ಪ್ರಶಸ್ತಿ ಸ್ವೀಕರಿಸಿದ ಮೃತ್ಯುಂಜಯ ದೊಡ್ಡವಾಡ ಅವರು ಒಂದು ಗಂಟೆ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.



ಗಾಯಕ ಮೃತ್ಯುಂಜಯ ದೊಡ್ಡವಾಡ ಅವರಿಗೆ ಗೌರಿಸುಂದರ್ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಿ.ಆರ್. ಲಕ್ಷ್ಮಣರಾವ್, ವೈ.ಕೆ. ಮುದ್ದುಕೃಷ್ಣ, ನಾ. ದಾಮೋದರ ಶೆಟ್ಟಿ ಮತ್ತು ಇಂದಿರಾ ಸುಂದರ್ ಉಪಸ್ಥಿತರಿದ್ದರು

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಬೆಂಗಳೂರು ಪ್ರಾದೇಶಿಕ ಕೇಂದ್ರ-06 (ಸುಂಕದಕಟ್ಟೆ) 2025-26ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯ ವಿವಿಧ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ.

ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಎಸ್. ಡಬ್ಲ್ಯು, ಬಿ.ಬಿ.ಎ ಮತ್ತು ಬಿ.ಸಿ.ಎ (ಜನರಲ್ ಮತ್ತು ಐ.ಟಿ) ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಾದ ಎಂ.ಎ, ಎಂ.ಕಾಂ, ಎಂ.ಎಸ್ಸಿ, ಎಂ.ಎಸ್. ಡಬ್ಲ್ಯು, ಎಂ.ಸಿ.ಎ ಮತ್ತು ಎಂ.ಬಿ.ಎ ಸೇರಿದಂತೆ ಇತರೆ ಕೋರ್ಸ್‌ಗಳಿಗೆ ಅಭ್ಯರ್ಥಿಗಳು ಪ್ರವೇಶ ಪಡೆದುಕೊಳ್ಳಬಹುದು. www.ksoumysuru.ac.in ಜಾಲತಾಣಕ್ಕೆ ಭೇಟಿ ನೀಡಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ: ಪ್ರಾದೇಶಿಕ ನಿರ್ದೇಶಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಬೆಂಗಳೂರು ಪ್ರಾದೇಶಿಕ ಕೇಂದ್ರ-06, ನಂ.4 ಮತ್ತು 5, ಒಂದನೇ ಮಹಡಿ, ಶ್ರೀಲಕ್ಷ್ಮಿ ಕಾಲೇಜ್ ಆಫ್ ಸೈನ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಆವರಣ, ಶ್ರೀಗಂಧದಕಾವಲ್, ಮಾಗಡಿ ಮುಖ್ಯರಸ್ತೆ, ಸುಂಕದಕಟ್ಟೆ, ಬೆಂಗಳೂರು-560091, ದೂರವಾಣಿ ಸಂಖ್ಯೆ: 96323 32265, 9741197921.

ಬಿಜೆಪಿ ಅಭಿಯಾನಕ್ಕೆ ಚಾಲನೆ

ಬೆಂಗಳೂರು: ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ 14 ವಾರ್ಡ್‌ಗಳಲ್ಲಿ ‘ನಾನು ಮೋದಿ, ನಾನು ಬಿಜೆಪಿ’ ಎಂಬ ಸಂಕಲ್ಪದೊಂದಿಗೆ ಮನೆಗಳ ಮೇಲೆ ಬಿಜೆಪಿ ಬಾವುಟ ಕಟ್ಟುವ ಅಭಿಯಾನಕ್ಕೆ ಭಾನುವಾರ ಚಾಲನೆ ನೀಡಲಾಯಿತು.

ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ಎಚ್.ಸಿ. ತಮ್ಮೇಶ್‌ಗೌಡ ಮಾತನಾಡಿ, ‘ಅಭಿಯಾನದ ಮೊದಲ ದಿನವೇ ಬ್ಯಾಟರಾಯನಪುರ ಕ್ಷೇತ್ರದ ವಿವಿಧ ವಾರ್ಡ್‌ಗಳಲ್ಲಿ ಸುಮಾರು 16 ಸಾವಿರ ಮನೆಗಳ ಮೇಲೆ ಬಿಜೆಪಿ ಬಾವುಟ ಕಟ್ಟುವ ಮೂಲಕ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಹೊಸ ದಾಖಲೆ ಸೃಷ್ಟಿಸಿದ್ದಾರೆ’ ಎಂದರು. ‘ಯಾವುದೇ ರಾಜಕೀಯ ಪಕ್ಷ ಸುಭದ್ರವಾಗಿ ಬೆಳೆಯಲು ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಮುನ್ನಡೆಯುವ ಕಾರ್ಯಕರ್ತರ ಅಗತ್ಯವಿದೆ. ನಮ್ಮ ಕ್ಷೇತ್ರದಲ್ಲಿ ಪಕ್ಷದ ತತ್ವ ಸಿದ್ಧಾಂತಕ್ಕೆ ಶಿರಬಾಗಿ ಮುನ್ನಡೆವ ಸಹಸ್ರಾರು ಕಾರ್ಯಕರ್ತರು ಇದ್ದಾರೆ. ಪಕ್ಷ ಕೈಗೊಳ್ಳುವ ಯಾವುದೇ ತೀರ್ಮಾನವನ್ನು ಪಾಲಿಸುತ್ತಾರೆ ಮತ್ತು ಸೂಚಿಸುವ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಾರೆ’ ಎಂದರು.

ನೆರವಿಗೆ ಮುಂದಾದ ಪ್ರವಾಸೋದ್ಯಮ ಇಲಾಖೆ

ಬೆಂಗಳೂರು: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಅಂತರರಾಷ್ಟ್ರೀಯ ಪ್ರಯಾಣದ ಅಡಚಣೆ ಎದುರಿಸುತ್ತಿರುವ ರಾಜ್ಯದಲ್ಲಿರುವ ವಿದೇಶಿಯರಿಗೆ ನೆರವು ನೀಡಲು ಪ್ರವಾಸೋದ್ಯಮ ಇಲಾಖೆ ಸಿದ್ಧವಾಗಿದೆ ಎಂದು ರಾಜ್ಯ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ.

ಸಂಕಷ್ಟದಲ್ಲಿರುವ ವಿದೇಶಿ ಅತಿಥಿಗಳಿಗೆ ವೀಸಾ ನಿರ್ವಹಣೆ ಮತ್ತು ಅಗತ್ಯ ಸಹಾಯವನ್ನು ಒದಗಿಸಲಾಗುವುದು. **ದೂರವಾಣಿ ಸಂಖ್ಯೆ:** 89706 50021 ಸಂಪರ್ಕಿಸಬಹುದು ಎಂದು ಇಲಾಖೆಯ ಜಂಟಿ ನಿರ್ದೇಶಕ ಎಚ್.ಪಿ. ಜನಾರ್ದನ ಮಾಹಿತಿ ನೀಡಿದ್ದಾರೆ.

ರೇರಾ ವ್ಯಾಪ್ತಿಗೆ ಕೆಂಪೇಗೌಡ ಬಡಾವಣೆ

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದ ಬಿಡಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯು (ಎನ್‌ಕೆಪಿಎಲ್) ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ–ರೇರಾ) ವ್ಯಾಪ್ತಿಗೆ ಬರಲಿದೆ ಎಂದು ತೀರ್ಮಾನಿಸಿ ರೇರಾ ಮೇಲ್ಮನವಿ ನ್ಯಾಯಮಂಡಳಿ ಆದೇಶ ನೀಡಿದೆ. ಕೆ–ರೇರಾ ನೀಡಿದ್ದ ಆದೇಶದ ವಿರುದ್ಧ ಬಿಡಿಎ ನವೆಂಬರ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು.

ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ, 2016 ರ ಅಡಿ ಪ್ರಾಧಿಕಾರವು 'ಪ್ರವರ್ತಕ' ಎಂದು ಪರಿಗಣಿಸಬಹುದು ಎಂದು ನ್ಯಾಯಮಂಡಳಿ ಅಭಿಪ್ರಾಯ-ಪಟ್ಟಿದೆ.

ಮಾರ್ಚ್ 3 ರಂದು ಹೊರಡಿಸಿದ ಆದೇಶದಲ್ಲಿ ನ್ಯಾಯಮಂಡಳಿಯು, ರೇರಾ ಕಾಯ್ದೆಯ ನಿಬಂಧನೆಗಳು ಬಿಡಿಎಗೆ ಸಂಪೂರ್ಣವಾಗಿ ಅನ್ವಯಿಸುತ್ತವೆ ಎಂಬುದನ್ನು ತಿಳಿಸಿದೆ. ಅಲ್ಲದೆ ಕೆ–ರೇರಾದ ಆದೇಶವನ್ನು 'ಅಧಿಕಾರ ವ್ಯಾಪ್ತಿಯಿಲ್ಲದೆ ಹೊರಡಿಸಲಾಗಿದೆ' ಎಂಬ ಬಿಡಿಎ ವಾದವನ್ನು ಸಹ ಅದು ತಳ್ಳಿಹಾಕಿದೆ.

'ಪ್ರವರ್ತಕ ಎಂದು ಪರಿಗಣಿಸಬೇಕು'

'ರೇರಾ ಕಾಯ್ದೆಯ ಕಲಂ 2ಝಡ್‌ಕೆ (3) ಅನ್ವಯ, ಸಾರ್ವಜನಿಕರಿಗೆ ಮಾರಾಟಕ್ಕಾಗಿ ನಿವೇಶನ ಅಥವಾ ಕಟ್ಟಡಗಳನ್ನು ನಿರ್ಮಿಸುವ ಅಥವಾ ಅಭಿವೃದ್ಧಿ ಪಡಿಸುವ ಯಾವುದೇ ಅಭಿವೃದ್ಧಿ ಪ್ರಾಧಿಕಾರ ಅಥವಾ ಸಾರ್ವಜನಿಕ ಸಂಸ್ಥೆಯನ್ನು 'ಪ್ರವರ್ತಕ' ಎಂದು ಪರಿಗಣಿಸಬೇಕು. ಆದ್ದರಿಂದ, ಕೆಂಪೇಗೌಡ ಬಡಾವಣೆ ಯೋಜನೆಯನ್ನು ಬಿಡಿಎ ನೋಂದಾಯಿಸಿಕೊಳ್ಳಬೇಕು' ಎಂದು ರೇರಾ ಆದೇಶ ಹೊರಡಿಸಿತ್ತು.

ಕೆಂಪೇಗೌಡ ಬಡಾವಣೆಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ತನ್ನ ವಿರುದ್ಧ ರೇರಾದಲ್ಲಿ ಸಲ್ಲಿಸಿದ್ದ ಅರ್ಜಿಗೆ ಪ್ರತಿಕ್ರಿಯೆ ನೀಡಿದ ಸಂದರ್ಭದಲ್ಲಿ 'ಬಿಡಿಎ ಶಾಸನಬದ್ಧ ಸಂಸ್ಥೆಯಾಗಿದ್ದು, ರಿಯಲ್ ಎಸ್ಟೇಟ್ ಯೋಜನೆಗಳ ಪ್ರವರ್ತಕನಲ್ಲ. ಹಾಗಾಗಿ ರೇರಾ ವ್ಯಾಪ್ತಿಯಿಂದ ಹೊರಗಿಡಬೇಕು' ಎಂಬ ವಾದವನ್ನು ಮಂಡಿಸಿತ್ತು.



ಕೆಂಪೇಗೌಡ ಬಡಾವಣೆ

ಈ ಆದೇಶವನ್ನು ಪ್ರಶ್ನಿಸಿ ಬಿಡಿಎ, ಕಾಯ್ದೆಯ ಸೆಕ್ಷನ್ 44ರ ಅಡಿ ಮೇಲ್ಮನವಿ ಸಲ್ಲಿಸಿತು. ಪ್ರಾಧಿಕಾರವು ತಾನು ಶಾಸನಬದ್ಧ ಯೋಜನಾ ಸಂಸ್ಥೆಯಾಗಿದ್ದು, ಬಡಾವಣೆ ಅಭಿವೃದ್ಧಿ ಚಟುವಟಿಕೆಗಳ ಮೇಲೆ ಕೆ-ರೇರಾಗೆ ಅಧಿಕಾರವಿಲ್ಲ ಎಂದು ವಾದಿಸಿತ್ತು.

ನ್ಯಾಯಾಂಗ ಸದಸ್ಯ ಎನ್. ಸಂತೋಷ್ ಕುಮಾರ್ ಶೆಟ್ಟಿ ಮತ್ತು ಆಡಳಿತಾತ್ಮಕ ಸದಸ್ಯ ಮಹೇಂದ್ರ ಜೈನ್ ಒಳಗೊಂಡ ನ್ಯಾಯಮಂಡಳಿಯು, ಕೆ-ರೇರಾದ ಆದೇಶದಲ್ಲಿ ಯಾವುದೇ ದೋಷ ಕಂಡುಬಂದಿಲ್ಲ ಎಂದು ಹೇಳಿದೆ.

ಪರಿಸರ ಸಮತೋಲನ, ವಿಶ್ರಾಂತಿ, ಮನರಂಜನಾ ತಾಣವಾಗಿ ಅಭಿವೃದ್ಧಿ

ಹಲಸೂರು ಕೆರೆ: ಸಂರಕ್ಷಣೆಗೆ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲಸೂರು ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. ಕೆರೆಯ ಪರಿಸರ ಕಾಪಾಡುವುದು ಹಾಗೂ ಸಾರ್ವಜನಿಕ-ರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಕೆರೆಯಲ್ಲಿ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ 25 ವರ್ಷಗಳಿಂದ ಶೇಖರಣೆಯಾಗಿರುವ ಹೂಳನ್ನು ಎತ್ತಲಾಗುತ್ತಿದೆ. ಕೆರೆಯ ಆಳ, ನೀರಿನ ಸಂಗ್ರಹಣಾ ಸಾಮರ್ಥ್ಯ ಹೆಚ್ಚಾಗಲಿದೆ. ಕೆರೆಯ ಸುತ್ತಮುತ್ತ ಬಂಡ್ ರಕ್ಷಣೆಯೊಂದಿಗೆ ವಾಯುವಿಹಾರಿಗಳಿಗೆ ನಡಿಗೆ ಮಾರ್ಗ ನಿರ್ಮಾಣ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

'ಮನರಂಜನಾ ತಾಣ'

ಕೆರೆಯ ಪರಿಸರ ಸಮತೋಲನವನ್ನು ಕಾಪಾಡುವುದರ ಜೊತೆಗೆ ನಾಗರಿಕರಿಗೆ ವಿಶ್ರಾಂತಿ ಹಾಗೂ ಮನರಂಜನಾ ತಾಣ ಒದಗಿಸುವುದು ಮುಖ್ಯ ಉದ್ದೇಶವಾಗಿದೆ ಎಂದು ರಾಜೇಂದ್ರ ಚೋಳನ್ ತಿಳಿಸಿದರು.

ಕೆರೆಯ ಗಡಿ ಭಾಗದಲ್ಲಿ (ದಡದಲ್ಲಿ) ಸುರಕ್ಷತಾ ಕ್ರಮವಾಗಿ ಅಲಂಕಾರಿಕ ಗ್ರಿಲ್‌ಗಳನ್ನು ಅಳವಡಿಸುವ ಕೆಲಸ ನಡೆಯುತ್ತಿದೆ. ಕೆರೆಯ ಪ್ರದೇಶವನ್ನು ಸಮೀಪದ ಉದ್ಯಾನದೊಂದಿಗೆ ಸಂಪರ್ಕಿಸುವ ಸಂಪರ್ಕ ಸೇತುವೆ ನಿರ್ಮಾಣ ಕಾಮಗಾರಿಯನ್ನೂ ಕೈಗೊಳ್ಳಲಾಗುತ್ತಿದೆ. ಹೊಸ ಕಲ್ಯಾಣಿ ನಿರ್ಮಾಣ ಸೇರಿದಂತೆ ಇತರೆ ಅಭಿವೃದ್ಧಿ ಕಾಮಗಾರಿ-ಗಳನ್ನು ಆರಂಭಿಸಲಾಗುತ್ತಿದೆ ಎಂದರು.


ಹಲಸೂರು ಕೆರೆಯಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿ ನಡೆದಿದೆ

ಹಲಸೂರು ಕೆರೆಯಲ್ಲಿ ಮೂರು ದ್ವೀಪಗಳಿದ್ದು, ಅಲ್ಲಲ್ಲಿ ಕುಸಿದು ದುಃಸ್ಥಿತಿಯಲ್ಲಿವೆ. ಇವುಗಳನ್ನು ಪುನರ್ ನಿರ್ಮಾಣ ಮಾಡಲಾಗುವುದು. ಕೆರೆಯ ಹೂಳು ತೆಗೆದ ಬಳಿಕ ಒಂದು ಭಾಗದಲ್ಲಿ ಎನ್‌ಡಿಆರ್‌ಎಫ್ ಸಿಬ್ಬಂದಿ ತರಬೇತಿ ಕೈಗೊಳ್ಳಲು ಅನುಕೂಲ ಆಗಲಿದೆ.

'ರಾಜಾಧಿರಾಜ್ ಯಾತ್ರಾ' ನಾಟಕ ಮಾರ್ಚ್ 19ರಿಂದ

ಬೆಂಗಳೂರು: ಚಲನಚಿತ್ರ ನಿರ್ಮಾಣ ಸಂಸ್ಥೆ ಹೊಂಬಾಳೆ ಫಿಲ್ಮ್ಸ್, ಎಲ್‌ಡಬ್ಲ್ಯುಪಿ ಮತ್ತು ಕಲಾನೇಷನ್ ಫೌಂಡೇಷನ್ ಸಹಯೋಗದೊಂದಿಗೆ 'ರಾಜಾಧಿರಾಜ್ ಯಾತ್ರಾ: ಕೃಷ್ಣ ಲೀಲಾ ಆಫ್ ದ್ವಾರ್' ಎಂಬ ಭಕ್ತಿ ಪ್ರಧಾನ ನಾಟಕ ಮಾರ್ಚ್ 19ರಿಂದ ನಗರದಲ್ಲಿ ಪ್ರದರ್ಶನಗೊಳ್ಳಲಿದೆ.

ಶ್ರೀಕೃಷ್ಣನ ಜೀವನದ ಪಯಣವನ್ನು, ಗೋಕುಲ ಮತ್ತು ವೃಂದಾವನದ ಬೀದಿಗಳಿಂದ ಹಿಡಿದು ಮಥುರಾವರೆಗೆ ಹಾಗೂ ದ್ವಾರಕೆಯ ರಾಜಾಧಿರಾಜನಾಗಿ ನಡೆಸಿದ ಆಳ್ವಿಕೆಯನ್ನು ಈ ನಾಟಕವು ತೆರೆದಿಡಲಿದೆ. ವಿಶ್ವದಾದ್ಯಂತ ಈಗಾಗಲೇ 75ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆ ಎಂದು ಸಂಘಟಕರು ತಿಳಿಸಿದ್ದಾರೆ.ಕೋಣನಕುಂಟೆಯಲ್ಲಿರುವ ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ ಮಾರ್ಚ್ 19 ಮತ್ತು 20ರಂದು ಸಂಜೆ 7ಕ್ಕೆ, ಮಾರ್ಚ್ 21 ಮತ್ತು 22ರಂದು ಮಧ್ಯಾಹ್ನ 2 ಮತ್ತು ಸಂಜೆ 7ಕ್ಕೆ ನಾಟಕ ಪ್ರದರ್ಶನಗೊಳ್ಳಲಿದೆ ಎಂದು ಆಯೋಜಕರು ಮಾಹಿತಿ ನೀಡಿದ್ದಾರೆ.

'ಕಲ್ಯಾಣ ಶುಲ್ಕ ಜಾರಿ ಮುಂದೂಡಿ'

ಬೆಂಗಳೂರು: ಕೇಂದ್ರ ಸರ್ಕಾರದ ಸಾಮಾಜಿಕ ಭದ್ರತಾ ಸಂಹಿತೆ–2020ಕ್ಕೆ ಹೊಂದಿಕೆಯಾಗುವಂತೆ ಚೌಕಟ್ಟು ರೂಪಿಸುವವರೆಗೆ ಗಿಗ್ ಕಾರ್ಮಿಕರ ಕಲ್ಯಾಣ ಶುಲ್ಕ ಜಾರಿ ಮಾಡುವುದನ್ನು ರಾಜ್ಯ ಸರ್ಕಾರವು ಮುಂದೂಡಬೇಕು ಎಂದು ಪ್ಲ್ಯಾಟ್‌ಫಾರ್ಮ್ ಕೈಗಾರಿಕಾ ಸಂಘಗಳು ಮನವಿ ಮಾಡಿವೆ.

'ಕಲ್ಯಾಣದ ಹೆಸರಿನಲ್ಲಿ ನೀಡಲಾಗುವ ಪ್ರತಿ ರೂಪಾಯಿಯೂ ಗಿಗ್ ಕಾರ್ಮಿಕರ ಕೈಗೆ ತಲುಪುವಂತೆ ಇರಬೇಕು. ಅದಕ್ಕಾಗಿ ಸ್ಪಷ್ಟ, ಗೊಂದಲವಿಲ್ಲದ ಚೌಕಟ್ಟು ಅವಶ್ಯಕ' ಎಂದು ಇಂಡಿಯಾಟೆಕ್ ಡಾಟ್ ಒಆರ್‌ಜಿ ಅಧ್ಯಕ್ಷ ರಮೀಶ್ ಕೈಲಾಸಂ ತಿಳಿಸಿದ್ದಾರೆ.

ಜಿಬಿಎ ಮತದಾರರ ಪಟ್ಟಿಯಲ್ಲಿ ಲೋಪ: ಬಿಎನ್‌ಪಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಪಾಲಿಕೆಗಳ ಚುನಾವಣೆಗೆ ಸಿದ್ಧಪಡಿಸಿರುವ ಮತದಾರರ ಪಟ್ಟಿಯಲ್ಲಿ ದೊಡ್ಡ ಪ್ರಮಾಣದ ಲೋಪಗಳಿವೆ. ಒಂದೇ ಬೀದಿ, ಲೇಔಟ್, ಅಪಾರ್ಟ್‌ಮೆಂಟ್‌ಗಳ ನಿವಾಸಿಗಳನ್ನು ಬೇರೆ ಬೇರೆ ಮತಗಟ್ಟೆ-ಗಳಿಗೆ ಹಂಚಿಕೆ ಮಾಡಿರುವುದು ಕಂಡು ಬಂದಿದೆ ಎಂದು ಬೆಂಗಳೂರು ನವ ನಿರ್ಮಾಣ ಪಾರ್ಟಿ (ಬಿಎನ್‌ಪಿ) ಸಂಸ್ಥಾಪಕ ಶ್ರೀಕಾಂತ್ ನರಸಿಂಹನ್ ಆರೋಪಿಸಿದ್ದಾರೆ.

ಮತದಾರರು ಇರುವ ವಾರ್ಡ್‌ಗಳ ಬದಲು ಅವರು ವಾಸಿಸದ ವಾರ್ಡ್‌ಗಳಲ್ಲಿ ಮತದಾನ ಮಾಡುವಂತಾಗಿದೆ. ಇದು ಸ್ಥಳೀಯ ಪ್ರಜಾಪ್ರಭುತ್ವ ಪ್ರಕ್ರಿಯೆಯ ತಳಹದಿಗೆ ಧಕ್ಕೆ ತರುವಂತಿದೆ. ಈ ಸಮಸ್ಯೆಯನ್ನು ಪರಿಹರಿಸಲು ಬಿಎನ್‌ಪಿ ಚುನಾವಣಾ ಆಯೋಗಕ್ಕೆ ವಿವರವಾದ ಪೂರಕ ಮಾಹಿತಿಗಳನ್ನು ಸಲ್ಲಿಸಿದ್ದು, ಸರಿಯಾದ ವಿಂಗಡಣೆ ಇಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಭಾರತೀಯ ಚುನಾವಣಾ ಆಯೋಗದ ಕೈಪಿಡಿಯ ಪ್ರಕಾರ, ಒಂದೇ ಭೌಗೋಳಿಕ ಪ್ರದೇಶದ ನಿವಾಸಿಗಳನ್ನು ಮತಗಟ್ಟೆಯ ಒಂದೇ ವಿಭಾಗದ ಅಡಿಯಲ್ಲಿ ಗುಂಪು ಮಾಡುವುದು ಕಡ್ಡಾಯವಾಗಿದೆ ಎಂದು ತಿಳಿಸಿದ್ದಾರೆ.

'ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವಾರ್ಡ್ ಸಂಖ್ಯೆ 34 (ಚಿಕ್ಕತೋಗೂರು) ಮತ್ತು ವಾರ್ಡ್ ಸಂಖ್ಯೆ 33 (ನಾಗನಾಥಪುರ) ದತ್ತಾಂಶವನ್ನು ಪರಿಶೀಲನೆ ನಡೆಸಲಾಯಿತು. ಅಪಾರ್ಟ್‌ಮೆಂಟ್ ಹೆಸರುಗಳು ಮತ್ತು ಬೀದಿಗಳ ಗುರುತಿನ ಆಧಾರದ ಮೇಲೆ, ಬೇರೆ ವಾರ್ಡ್‌ಗಳಿಗೆ ಸೇರಬೇಕಾದ 47 ಜನರ ಹೆಸರುಗಳನ್ನು ನಾಗನಾಥಪುರ ವಾರ್ಡ್‌ಗೆ ತಪ್ಪಾಗಿ ಸೇರಿಸಲಾಗಿದೆ. 105 ಜನರನ್ನು ಚಿಕ್ಕತೋಗೂರು ವಾರ್ಡ್‌ಗೆ ತಪ್ಪಾಗಿ ಸೇರಿಸಲಾಗಿದೆ. ಸಾರ್ವಜನಿಕವಾಗಿ ಲಭ್ಯವಿರುವ ಮತದಾರರ ಪಟ್ಟಿಯಲ್ಲಿ ಪೂರ್ಣ ವಿಳಾಸದ ವಿವರ-ಗಳಿಲ್ಲದ ಕಾರಣ, ಪ್ರತಿ ವಾರ್ಡ್‌ನಲ್ಲಿ ಹೀಗೆ ತಪ್ಪಾಗಿ ದಾಖಲಾದ ಮತದಾರರ ಸಂಖ್ಯೆ 1,000ಕ್ಕೂ ಹೆಚ್ಚಿರಬಹುದು' ಎಂದು ಅವರು ಅಂದಾಜಿಸಿದ್ದಾರೆ.

'ಇದು ಸಣ್ಣ ಪುಟ್ಟ ತಪ್ಪಲ್ಲ, ಬದಲಾಗಿ ಮತದಾರರ ಪಟ್ಟಿ ಸಿದ್ಧಪಡಿಸುವಲ್ಲಿನ ಗಂಭೀರ ವೈಫಲ್ಯ. ಮತದಾರರಿಗೆ ತಾವು ಯಾವ ವಾರ್ಡ್‌ಗೆ ಸೇರಿದ್ದೇವೆ ಎಂಬುದನ್ನೇ ಪತ್ತೆಹಚ್ಚಲು ಸಾಧ್ಯವಾಗದೇ ಇರುವುದು ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆಯ ಬಗ್ಗೆ ಪ್ರಶ್ನೆ ಮೂಡುವಂತೆ ಮಾಡಿದೆ. ಮತದಾರರನ್ನು ಸರಿಯಾದ ವಾರ್ಡ್‌ಗಳಿಗೆ ಸೇರಿಸಲು ಆಯೋಗವೇ ವಿಫಲವಾದರೆ, ಮತದಾರರು ಮತಗಟ್ಟೆಯನ್ನು ಹೇಗೆ ತಾನೆ ಗುರುತಿಸಲು ಸಾಧ್ಯ' ಎಂದು ಮಹದೇವಪುರ ಬಿಎನ್‌ಪಿ ವಲಯ ಅಧ್ಯಕ್ಷ ವಿಷ್ಣು ರೆಡ್ಡಿ ಪ್ರಶ್ನಿಸಿದ್ದಾರೆ.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

'ಕಸ ವಿಲೇವಾರಿ ಮಾಡಿ'



ಅಮರಜ್ಯೋತಿನಗರದ ಐದನೇ ಅಡ್ಡರಸ್ತೆಯ ಮಕ್ಕಳ ಆಟದ ಮೈದಾನಕ್ಕೆ ಸಂಪರ್ಕ ಕಲ್ಪಿಸುವ ಪಾದಚಾರಿ ಮಾರ್ಗದಲ್ಲಿ ಕಸ ಹಾಕಲಾಗಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಸ್ಥಳೀಯ ನಿವಾಸಿಗಳು ತಮ್ಮ ಮನೆಗಳಲ್ಲಿ ಉತ್ಪತ್ತಿ-ಯಾಗುವ ಕಸವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಪಾಲಿಕೆಯ ಸಂಬಂಧಪಟ್ಟ ಸಿಬ್ಬಂದಿ ಕೂಡಲೇ ಈ ಕಸವನ್ನು ವಿಲೇವಾರಿ ಮಾಡಬೇಕು.

ಶಿವಲಿಂಗಯ್ಯ, ಅಮರಜ್ಯೋತಿನಗರ

'ಎನ್‌.ಆರ್‌. ಕಾಲೊನಿ: ರಸ್ತೆ ದುರಸ್ತಿಗೊಳಿಸಿ'



ಬಸವನಗುಡಿಯ ಎನ್‌.ಆರ್‌. ಕಾಲೊನಿಯ ಅಂಗಡಿ ಬೀದಿಯಲ್ಲಿ ಬೆಂಗಳೂರು ಜಲಮಂಡಳಿಯಿಂದ ನೀರಿನ ಕೊಳವೆಗಳನ್ನು ಜೋಡಿಸಲು ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇಡೀ ಪ್ರದೇಶ ದೂಳುಮಯ-ವಾಗಿದ್ದು, ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಈ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆ ಆಗಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಕೂಡಲೇ ಈ ರಸ್ತೆಯನ್ನು ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಬಸವರಾಜ್, ಎನ್‌.ಆರ್‌.ಕಾಲೊನಿ

'ಪಾದಚಾರಿ ಮಾರ್ಗ ದುರಸ್ತಿಗೊಳಿಸಿ'

ಮೆಜೆಸ್ಟಿಕ್‌ಗೆ ಸಂಪರ್ಕ ಕಲ್ಪಿಸುವ ಕೆಂಪೇಗೌಡ ವೃತ್ತದಲ್ಲಿರುವ ಸ್ಕೈವಾಕ್‌ನ ಪಾದಚಾರಿ ಮಾರ್ಗ ಸಂಪೂರ್ಣವಾಗಿ ಹಾಳಾಗಿದೆ. ಸಾರ್ವಜನಿಕರು ಈ ಪಾದಚಾರಿ ಮಾರ್ಗದ ಮೂಲಕವೇ ಮೆಜೆಸ್ಟಿಕ್ ಬಸ್ ನಿಲ್ದಾಣ ಹಾಗೂ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ತೆರಳುತ್ತಾರೆ. ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಕಿತ್ತು ಹೋಗಿದೆ. ಇದನ್ನು ದುರಸ್ತಿಗೊ-ಳಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸ್ಪಂದಿಸುತ್ತಿಲ್ಲ.



ಶಿವಪ್ರಸಾದ್ ಎಸ್., ಗಾಂಧಿನಗರ



'ರಸ್ತೆಯಲ್ಲಿನ ಕಸದ ರಾಶಿ ತೆರವುಗೊಳಿಸಿ'

ಕದಿರೇನಹಳ್ಳಿ ಅಂಡರ್ ಪಾಸ್ ಹತ್ತಿರದ ರಸ್ತೆಯಲ್ಲಿ ರಾಶಿಗಟ್ಟಲೇ ಕಸ ತಂದು ಹಾಕಲಾಗಿದೆ. ಬೀದಿ ನಾಯಿಗಳು, ಬೀಡಾಡಿ ದನಗಳು ಕಸವನ್ನು ರಸ್ತೆಗೆ ಎಳೆದು ತರುತ್ತಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದ್ದು, ವಾಹನ ಸವಾರರು ಮೂಗು ಮುಚ್ಚಿಕೊಂಡು ಸಂಚರಿಸುವ ಪರಿಸ್ಥಿತಿ ಎದುರಾಗಿದೆ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಕೂಡಲೇ ಕಸವನ್ನು ವಿಲೇವಾರಿ ಮಾಡಿ, ನಗರದ ಸೌಂದರ್ಯ ಕಾಪಾಡಬೇಕು.

ಸಂತೋಷ್, ವಾಹನ ಸವಾರ



ಅಹವಾಲಿಗೆ ಸ್ಪಂದನೆ

ಕೆ.ಆರ್‌. ಪುರ ವಾರ್ಡ್ ವ್ಯಾಪ್ತಿಗೆ ಬರುವ ಪಾದಚಾರಿ ಮೇಲ್ಸೇತುವೆ ಮೇಲೆ ಅಳವಡಿಸಿದ ಹಳೇ ಜಾಹಿರಾತು ಬ್ಯಾನರ್‌ ಅನ್ನು ಪಾಲಿಕೆ ಸಿಬ್ಬಂದಿ ವಿಲೇವಾರಿ ಮಾಡಿದ್ದಾರೆ.

'ಪ್ರಜಾವಾಣಿ'ಯ ಕುಂದು ಕೊರತೆ ವಿಭಾಗದಲ್ಲಿ ಮಾ.9ರಂದು 'ಬ್ಯಾನರ್ ವಿಲೇವಾರಿ ಮಾಡಿ' ಶೀರ್ಷಿಕೆ ಅಡಿಯಲ್ಲಿ ಅಹವಾಲು ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಪಾಲಿಕೆ ಸಿಬ್ಬಂದಿ ಮೇಲ್ಸೇತುವೆ-ಯನ್ನು ಸ್ವಚ್ಛಗೊಳಿಸಿದ್ದಾರೆ.



'ರಸ್ತೆ ಒತ್ತುವರಿ ತೆರವುಗೊಳಿಸಿ'

ದುಬಾಸಿಪಾಳ್ಯ ಮೂರನೇ ಅಡ್ಡರಸ್ತೆಯಲ್ಲಿನ ಕೆಲ ನಿವಾಸಿಗಳು ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿಕೊಂಡು, ಬೇಲಿ ಹಾಕಿದ್ದಾರೆ. ಕೆಲವರು ಶೆಡ್‌ಗಳನ್ನು ನಿರ್ಮಿಸಿಕೊಂಡಿದ್ದು, ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಆಗಿದೆ. ಒತ್ತುವರಿ ಮಾಡಿಕೊಂಡಿರುವ ರಸ್ತೆಯನ್ನು ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ತೆರವುಗೊಳಿಸಬೇಕು.

ದುಬಾಸಿಪಾಳ್ಯದ ನಿವಾಸಿಗಳು

ನಗರದಲ್ಲಿ ಇಂದು

'ಎಸ್‌ಐಆರ್' ಷಡ್ಯಂತ್ರವನ್ನು ವಿಫಲಗೊಳಿಸುವ ಕ್ರಿಯಾ ಯೋಜನೆ ರೂಪಿಸಲು ಸರ್ವ ಪಕ್ಷ, ಸಂಘಟನೆಗಳ ಸಭೆ: ಭಾಗವಹಿಸುವವರು: ಪರಕಾಲ ಪ್ರಭಾಕರ್, ಎಂ.ಜಿ. ದೇವಸಹಾಯಂ, ಥಾಮಸ್ ಫ್ರಾಂಕೊ, ನಿಖಿಲ್ ಡೆ, ಆಯೋಜನೆ: ಪ್ರಗತಿಪರ ಸಂಘಟನೆಗಳು, ಸ್ಥಳ: ಶಾಸಕರ ಭವನ-2, ವಿಧಾನಸೌಧದ ಹಿಂಭಾಗ, ಬೆಳಿಗ್ಗೆ 10

'ಆಳುವ ವರ್ಗವಾಗಲು ದಲಿತ ಜನಾಂಗಗಳು ಎದುರಿಸುತ್ತಿರುವ ಇಂದಿನ ಸವಾಲುಗಳು ಮತ್ತು ಪರಿಹಾರದ ಮುಂದಿನ ಮಾರ್ಗ' ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ: ಇಂದಿರಾ ಕೃಷ್ಣಪ್ಪ, ಅತಿಥಿಗಳು: ಎಂ. ನಾರಾಯಣಸ್ವಾಮಿ, ಎಚ್‌.ಆರ್‌. ಸುರೇಂದ್ರ , ಗೊಲ್ಲಹಳ್ಳಿ ಶಿವಪ್ರಸಾದ್, ಡಿ. ಶಿವಶಂಕರ್, ಬಾನಂದೂರು ಕೆಂಪಯ್ಯ, ಸುಬ್ಬು ಹೊಲೆಯಾರ್, ವಡ್ಡಗೆರೆ ನಾಗರಾಜಯ್ಯ, ಹೊನ್ನು ಸಿದ್ಧಾರ್ಥ, ಹ.ರಾ. ಮಹೇಶ್, ಹು.ಮು. ನಾರಾಯಣಸ್ವಾಮಿ, ಸಿ. ಹರಕುಮಾರ್, ರಘುಪತಿ, ಬಂಗವಾದಿ ನಾರಾಯಣಪ್ಪ, ಸುರೇಶ್ ಗೌತಮ್, ಭೀಮ್ ಶಾ ಆರ್ಯ, ಆಯೋಜನೆ: ದಲಿತ ಚಿಂತಕರ ಚಾವಡಿ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 11.30

ಯುಪಿಎಸ್‌ಸಿ–ಸಿಎಸ್‌ಇ ಸಾಧಕರಿಗೆ ಸನ್ಮಾನ ಕಾರ್ಯಕ್ರಮ: ಅತಿಥಿಗಳು: ಡಿ.ಕೆ. ಶಿವಕುಮಾರ್, ಈಶ್ವರ ಬಿ. ಖಂಡ್ರೆ, ಎನ್. ಚಲುವರಾಯಸ್ವಾಮಿ, ಸಿ.ಎಸ್. ಕೇದಾರ್, ಬಿ.ಎನ್. ಶ್ರೀಕಂಠಯ್ಯ, ಆಯೋಜನೆ: ಇಂಡಿಯಾ ಫಾರ್ ಐಎಎಸ್, ಸ್ಥಳ: ಪುರಭವನ, ಜೆ.ಸಿ.ರಸ್ತೆ, ಸಂಜೆ 4.30

ಹಂಸ ಸಾಂಸ್ಕೃತಿಕ ಸಂಭ್ರಮ, ಹಂಸ ಸಮ್ಮಾನ್ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಅತಿಥಿಗಳು: ಶ್ರೀನಾಥ್, ಡಾ.ಸಿ. ರಾಮಚಂದ್ರ, ಬಿ.ಆರ್. ಹಿರೇಮಠ, ಮೊಳಕಾಲ್ಮುರು ಶ್ರೀನಿವಾಸಮೂರ್ತಿ, ಕೆ. ಶಶಿಕಲಾ, ಎಸ್‌.ಟಿ. ಉದಯಕುಮಾರ್, ಜೆ. ಗುರುಪ್ರಸಾದ್, ಪ್ರಶಸ್ತಿ ಸ್ವೀಕರಿಸುವವರು: ಬಿ. ವೀರಪ್ಪ, ಸಿ. ಸೋಮಶೇಖರ ದೀಕ್ಷಿತ್, ಬಿ.ಎಸ್. ಮೋಹನಕುಮಾರ್, ಎಸ್. ಕೃಷ್ಣ, ಆಯೋಜನೆ: ಹಂಸಜ್ಯೋತಿ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30ರಿಂದ

ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ. nagaradalli_indu@prajavani.co.in

ನಿಧನ ವಾರ್ತೆ

ವಿಶ್ವನಾಥ



ಬೆಂಗಳೂರು: ಆನಂದನಗರದ ನಿವಾಸಿ ವಿಶ್ವನಾಥ ಏಕಬೋಟೆ (88) ಶನಿವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಹೆಬ್ಬಾಳದ ವಿದ್ಯುತ್ ಚಿತಾಗಾರದಲ್ಲಿ ಭಾನುವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.



ವಾಕ್‌-ಶ್ರವಣ ವಿಜ್ಞಾನ

ವೃತ್ತಿ, ಸಮಾಜಸೇವೆಗೊಂದು ಸಾಧನ

• ಪ್ರದೀಪ್ ಎಸ್. ವೆಂಕಟರಾಮ್

ಪಿಯುಸಿ ಮುಂದೇನು? ಭಾಗ -5

ಇತ್ತೀಚೆಗೆ ನಡೆದ ವಿಚಾರಗೋಷ್ಠಿಯೊಂದರಲ್ಲಿ, ನನ್ನೊಡನೆ ವೇದಿಕೆಯನ್ನು ಹಂಚಿಕೊಳ್ಳಲಿದ್ದ ಒಬ್ಬರಿಗೆ ಶ್ರವಣಶಕ್ತಿ ಸಂಪೂರ್ಣವಾಗಿ ನಷ್ಟವಾಗಿದೆ ಎಂದು ತಿಳಿದಾಗ ಆಶ್ಚರ್ಯವಾಯಿತು. ಅವರು ವಿಚಾರ ಗೋಷ್ಠಿಯಲ್ಲಿ ಹೇಗೆ ಭಾಗವಹಿಸುತ್ತಾರೋ ಎಂಬ ಕುತೂಹಲವೂ ಮೂಡಿತು. ಆದರೆ ಅವರು ಸುಲಲಿತವಾಗಿ ಮಾತನಾಡುತ್ತಾ, ಪ್ರಶ್ನೆಗಳಿಗೆ ಉತ್ತರಿಸುತ್ತಾ ವಿಚಾರಗೋಷ್ಠಿ ಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಮೇಲೆ ತಿಳಿದ ವಿಷಯವೆಂದರೆ: ಅವರ ಸಂವಹನ ಪ್ರಕ್ರಿಯೆ ನಮ್ಮೆಲ್ಲರಂತೆ ಸಹಜವಾಗಿಯೇ ಇದ್ದುದಕ್ಕೆ ಕಾರಣ, ಮಾತುಗಳನ್ನು ಪಠ್ಯಕ್ಕೆ ಪರಿವರ್ತಿಸುವ ಅಪ್ಲಿಕೇಷನ್‌ಗಳು ಎಂಬ ವಿಚಾರ.

ಇನ್ನೊಂದು ಉದಾಹರಣೆ, ಬೆಂಗಳೂರಿನ ಶಾಲೆಯೊಂದರಲ್ಲಿ ಓದುತ್ತಿದ್ದ ಏಳು ವರ್ಷದ ಅಕ್ಷಯ್‌ಗೆ ತರಗತಿಯಲ್ಲಿ ಶಿಕ್ಷಕರು ಮಾಡುವ ಪಾಠಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಆಗುತ್ತಿರಲಿಲ್ಲ. ಸ್ನೇಹಿತರ ಜೊತೆ ಮಾತನಾಡುವುದೂ ಅವನಿಗೆ ಕಷ್ಟವಾಗುತ್ತಿತ್ತು. ಮನೆಯವರು ಮೊದಲಿಗೆ ಇದನ್ನು ಸಾಮಾನ್ಯ ಸಮಸ್ಯೆ ಎಂದುಕೊಂಡಿದ್ದರು. ಆದರೆ ಅವನಿಗೆ ಶ್ರವಣದೋಷ ಇರುವುದು ವೈದ್ಯಕೀಯ ಪರೀಕ್ಷೆಯಿಂದ ಪತ್ತೆಯಾಯಿತು. ನಂತರ ಶ್ರವಣಶಕ್ತಿ, ವಾಕ್‌ಶಕ್ತಿ ತಜ್ಞರ ನೆರವಿನಿಂದ ಚಿಕಿತ್ಸೆ ಹಾಗೂ ತರಬೇತಿ ಆರಂಭವಾಯಿತು. ಕೆಲವೇ ತಿಂಗಳಲ್ಲಿ ಅಕ್ಷಯ್ ಸ್ನೇಹಿತರ ಜೊತೆ ಮಾತನಾಡಲು, ಶಾಲೆಯಲ್ಲಿ ಪಾಠವನ್ನು ಕೇಳಿಸಿಕೊಳ್ಳಲು ಸಾಧ್ಯವಾಗಿ, ಅವನ ಜೀವನದ ಗತಿಯೇ ಬದಲಾಯಿತು.

ವಿಶ್ವ ಆರೋಗ್ಯ ಸಂಸ್ಥೆಯ ಅಂದಾಜಿನ ಪ್ರಕಾರ, ವಿಶ್ವದಾದ್ಯಂತ ಸುಮಾರು 34 ಕೋಟಿ ಮಕ್ಕಳು ಸೇರಿದಂತೆ 43 ಕೋಟಿ ಜನ ವಿವಿಧ ಮಟ್ಟದ ಶ್ರವಣ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಭಾರತದಲ್ಲಿಯೂ 6.3 ಕೋಟಿ ಜನರಿಗೆ ಶ್ರವಣ ಸಮಸ್ಯೆ ಇದೆ ಎನ್ನಲಾಗಿದೆ. ಆದ್ದರಿಂದಲೇ, ಈ ಕ್ಷೇತ್ರಕ್ಕೆ ಸಂಬಂಧಿಸಿದ ವೃತ್ತಿಗಳ ಮಹತ್ವ ಮತ್ತು ಬೇಡಿಕೆ ನಿರಂತರವಾಗಿ ಹೆಚ್ಚುತ್ತಿದೆ.

ಇಂತಹ ಸಮಸ್ಯೆಗಳಿರುವ ಸಾವಿರಾರು ಮಕ್ಕಳು ಹಾಗೂ ವಯಸ್ಕರ ಆತ್ಮಸ್ಥೈರ್ಯವನ್ನು ಹೆಚ್ಚಿಸುವ, ಜೀವನದಲ್ಲಿ ಭರವಸೆಯನ್ನು ಮೂಡಿಸುವ ಕ್ಷೇತ್ರವೇ ಶ್ರವಣಶಕ್ತಿ ಮತ್ತು ವಾಕ್‌ಶಕ್ತಿ ವಿಜ್ಞಾನ (ಆಡಿಯಾಲಜಿ ಆ್ಯಂಡ್ ಸ್ಪೀಚ್ ಸೈನ್ಸಸ್).

ಈ ಕ್ಷೇತ್ರದ ಶಿಕ್ಷಣವನ್ನು ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ- (ಆರ್.ಸಿ.ಐ) ನಿಯಂತ್ರಿಸುತ್ತದೆ

ಮಾನವನ ಜೀವನದಲ್ಲಿ ಸಂವಹನ ಅತ್ಯಂತ ಮುಖ್ಯವಾದ ಸಾಮರ್ಥ್ಯ. ಆದರೆ ಜನ್ಮಜಾತವಾಗಿ ಅಥವಾ ನಂತರದಲ್ಲಿ ಹಲವರಿಗೆ ಕೇಳುವಿಕೆ, ಮಾತು, ಭಾಷೆ, ಸಂವಹನಕ್ಕೆ ಸಂಬಂಧಿಸಿದ ಸಮಸ್ಯೆಗಳು ಎದುರಾಗುತ್ತವೆ. ಇವುಗಳನ್ನು ಗುರುತಿಸಿ ಚಿಕಿತ್ಸೆ ನೀಡುವ ತಜ್ಞರನ್ನು ಆಡಿಯಾಲಜಿಸ್ಟ್ ಮತ್ತು ಸ್ಪೀಚ್ ಥೆರಪಿಸ್ಟ್ ಎಂದು ಕರೆಯಲಾಗುತ್ತದೆ. ಶ್ರವಣ ಮತ್ತು ವಾಕ್‌ಶಕ್ತಿಗೆ ಸಂಬಂಧಿಸಿದ ಸಮಸ್ಯೆಗಳ ಚಿಕಿತ್ಸೆಯಲ್ಲಿ ಸಾಮಾನ್ಯವಾಗಿ ಅಪ್ಲಿಕೇಷನ್‌ಗಳು, ಶ್ರವಣ ಸಾಧನಗಳು, ಔಷಧಿ, ಸ್ಪೀಚ್ ಥೆರಪಿ, ಶಸ್ತ್ರಚಿಕಿತ್ಸೆ ಇತ್ಯಾದಿಗಳನ್ನು ಬಳಸಲಾಗುತ್ತದೆ. ಇವುಗಳಿಗೆ ಸಂಬಂಧಿಸಿದ ಕೋರ್ಸ್‌ಗಳನ್ನು ಮಾಡುವ ಸಲುವಾಗಿ ಕಾಲೇಜನ್ನು ಆಯ್ಕೆ ಮಾಡಿಕೊಳ್ಳುವಾಗ ಆರ್.ಸಿ.ಐ ಮಾನ್ಯತೆ, ಮೂಲ ಸೌಕರ್ಯ, ಇಂಟರ್ನ್‌ಷಿಪ್ ಅವಕಾಶ, ಕ್ಯಾಂಪಸ್ ನೇಮಕಾತಿ, ಸ್ಪೆಷಲೈಸೇಷನ್, ಪಠ್ಯಕ್ರಮ, ಅಧ್ಯಾಪಕ ವೃಂದ, ಪ್ರಯೋಗಶಾಲೆ ಅಂತಹವುಗಳನ್ನು ಪರಿಶೀಲಿಸಿ, ಕಾಲೇಜುಗಳ ಪ್ರವೇಶ ಪರೀಕ್ಷೆಗಳಲ್ಲಿ ಭಾಗವಹಿಸಬೇಕು.

ಕೌಶಲ, ಉದ್ಯೋಗಾವಕಾಶ

ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಆಸಕ್ತಿ, ಅಭಿರುಚಿಯ ಜೊತೆಗೆ ಸೂಕ್ಷ್ಮ ಅವಲೋಕನ, ಸಂವಹನ, ಸಹಾನುಭೂತಿ, ಡೇಟಾ ವಿಶ್ಲೇಷಣೆಯ ಕೌಶಲಗಳಿರಬೇಕು. ಶ್ರವಣಶಕ್ತಿ ಮತ್ತು ವಾಕ್‌ಶಕ್ತಿ ತಜ್ಞರಿಗೆ ಆಸ್ಪತ್ರೆಗಳು, ವೈದ್ಯಕೀಯ ಕೇಂದ್ರಗಳು, ಪುನರ್ವಸತಿ ಕೇಂದ್ರಗಳು, ವಿಶೇಷ ಶಾಲೆಗಳು, ಸಂಶೋಧನಾ ಸಂಸ್ಥೆಗಳು, ಶ್ರವಣಶಕ್ತಿ ಕಂಪನಿಗಳು, ಬಾಲ ಅಭಿವೃದ್ಧಿ ಕೇಂದ್ರಗಳು, ಹಿರಿಯ ನಾಗರಿಕರ ಆರೈಕೆ ಕೇಂದ್ರಗಳಲ್ಲಿ ಉದ್ಯೋಗಾವಕಾಶ ಇರುತ್ತದೆ. ಸ್ವಂತ ಕ್ಲಿನಿಕ್‌ಗಳನ್ನೂ ಹೊಂದಬಹುದು.

ತಜ್ಞರಿಗೆ ಅಮೆರಿಕ, ಕೆನಡಾ, ಆಸ್ಟ್ರೇಲಿಯಾ, ಯುನೈಟೆಡ್ ಕಿಂಗ್ಡಂ, ಮಧ್ಯಪ್ರಾಚ್ಯ ದೇಶಗಳಲ್ಲಿ ಉತ್ತಮ ಅವಕಾಶಗಳಿವೆ. ಅನುಭವ, ವಿಶೇಷ ತರಬೇತಿ ಪಡೆದ ನಂತರ ಆದಾಯವೂ ಗಣನೀಯವಾಗಿ ಹೆಚ್ಚುತ್ತದೆ. ಆಸಕ್ತರು ಸಂಶೋಧನೆ, ಅಧ್ಯಾಪನ ಕ್ಷೇತ್ರಗಳಲ್ಲಿ ಮುಂದುವರಿಯಬಹುದು.

ಮಾತನಾಡಲಾರದ ಮಕ್ಕಳಿಗೆ ಮಾತಿನ ವಿಶ್ವವನ್ನು ಪರಿಚಯಿಸಿ, ಕೇಳಲಾರದವರಿಗೆ ಮತ್ತೆ ಶಬ್ದದ ಲೋಕವನ್ನು ತೆರೆದು, ಅವರ ಪರಿಸರವನ್ನು ಉತ್ತಮಗೊಳಿಸುವ ಮೂಲಕ ಅವರ ಜೀವನವನ್ನು ಸುಧಾರಿಸುವುದು ಅತ್ಯಂತ ಅರ್ಥಪೂರ್ಣವಾದ ಕೊಡುಗೆ. ಹಾಗಾಗಿ, ಶ್ರವಣಶಕ್ತಿ ಮತ್ತು ವಾಕ್‌ಶಕ್ತಿ ತಜ್ಞರಿಗೆ ಇದು ವೃತ್ತಿ ಮಾತ್ರವಲ್ಲ ಅತ್ಯಮೂಲ್ಯವಾದ ಸಮಾಜಸೇವೆಯೂ ಹೌದು.

ಲೇಖಕ: ಶಿಕ್ಷಣ ತಜ್ಞ, ವೃತ್ತಿ ಸಲಹೆಗಾರ

ಕೋರ್ಸ್, ಕಾಲೇಜು ಆಯ್ಕೆ

ಇಲ್ಲಿ ಕಲಿಸುವ ಪ್ರಮುಖ ವಿಷಯಗಳೆಂದರೆ, ಶ್ರವಣ ಚಿಕಿತ್ಸಾಶಾಸ್ತ್ರ, ಭಾಷಾ ಚಿಕಿತ್ಸಾಶಾಸ್ತ್ರ, ಭಾಷಾಶಾಸ್ತ್ರ, ಧ್ವನಿಶಾಸ್ತ್ರ, ಮನೋವಿಜ್ಞಾನ, ಎಲೆಕ್ಟ್ರಾನಿಕ್ಸ್, ಅಕೌಸ್ಟಿಕ್ಸ್...

ವೃತ್ತಿಪರರಾಗಲು ಪಿಯುಸಿ (ವಿಜ್ಞಾನ) ನಂತರ ಈ ಕೋರ್ಸ್‌ಗಳನ್ನು ಮಾಡಬಹುದು:

- ಬ್ಯಾಚಲರ್ ಇನ್ ಆಡಿಯಾಲಜಿ ಆ್ಯಂಡ್ ಸ್ಪೀಚ್ ಲ್ಯಾಂಗ್ವೇಜ್ ಪೆಥಾಲಜಿ (ಬಿ.ಎಎಸ್‌ಎಲ್‌ಪಿ, ಇಂಟರ್ನ್‌ಷಿಪ್ ಸೇರಿ ನಾಲ್ಕು ವರ್ಷ)
- ಮಾಸ್ಟರ್ಸ್ ಇನ್ ಆಡಿಯಾಲಜಿ ಆ್ಯಂಡ್ ಸ್ಪೀಚ್ ಲ್ಯಾಂಗ್ವೇಜ್ ಪೆಥಾಲಜಿ (ಎರಡು ವರ್ಷ)
- ಪಿಎಚ್.ಡಿ, ಅಲ್ಪಾವಧಿ/ದೀರ್ಘಾವಧಿ ವಿಶೇಷ ಡಿಪ್ಲೊಮಾ

ದೇಶದಾದ್ಯಂತ ಅನೇಕ ಕಾಲೇಜುಗಳಲ್ಲಿ ಈ ಕೋರ್ಸ್‌ಗಳಿವೆ. ಪ್ರಮುಖ ಸಂಸ್ಥೆಗಳೆಂದರೆ, ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಅರಿಂಗ್ ಮೈಸೂರು, ನಿಮ್ಹಾನ್ಸ್ ಬೆಂಗಳೂರು, ವಿವಿಧ ವೈದ್ಯಕೀಯ ಕಾಲೇಜುಗಳು, ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯಗಳು, ಬೆಂಗಳೂರು ವಿಶ್ವವಿದ್ಯಾಲಯ, ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಕೆಎಂಸಿ ಮಂಗಳೂರು...

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ನೆಕ್ಸ್ಟ್‌ಮೈಲ್ ಕಂಟೆಂಟ್ ಆ್ಯಂಡ್ ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ವಿದ್ಯಾರ್ಥಿಗಳು ಕ್ಯಾನ್ವಾ, ಕಮ್ಯುನಿಟಿ ಮ್ಯಾನೇಜ್‌ಮೆಂಟ್, ಕಂಟೆಂಟ್ ರೈಟಿಂಗ್, ಕಾಪಿ ರೈಟಿಂಗ್, ಕಸ್ಟಮರ್ ಸಪೋರ್ಟ್, ಇನ್‌ಸ್ಟಾಗ್ರಾಂ ಮಾರ್ಕೆಟಿಂಗ್, ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಮತ್ತು ವಿಡಿಯೊ ಎಡಿಟಿಂಗ್ ಬಗ್ಗೆ ಅರಿತಿರಬೇಕು. ಏಪ್ರಿಲ್ 11ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ₹9,000–₹13,000. ಸಂಪರ್ಕ: https://tinyurl.com/582437ya.

ಪಿಕಿಫಿಟ್ಸ್ ಅಫೀಷಿಯಲ್ (Pickyfits Official) ಶಾಪಿಫೈ ಡೆವಲಪ್‌ಮೆಂಟ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಸಿಎಸ್‌ಎಸ್, ಇ–ಕಾಮರ್ಸ್, ಎಚ್‌ಟಿಎಂಎಲ್, ಜಾವಾಸ್ಕ್ರಿಪ್ಟ್ ಮತ್ತು ಶಾಪಿಫೈ ಬಗ್ಗೆ ಜ್ಞಾನ ಇರುವ ವಿದ್ಯಾರ್ಥಿಗಳು ಏಪ್ರಿಲ್ 11ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹6,000–₹8,000. ಸಂಪರ್ಕ: https://tinyurl.com/2d5fu66s.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಹೋಮ್ ಕ್ಯಾನ್ವಾಸ್ ಸ್ಟುಡಿಯೊ ಮಾರ್ಕೆಟಿಂಗ್ ಎಕ್ಸಿಕ್ಯುಟಿವ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ವಿದ್ಯಾರ್ಥಿಗಳಿಗೆ ಎಂಎಸ್ ಎಕ್ಸೆಲ್, ಕ್ಲೈಂಟ್ ಇಂಟರ‍್ಯಾಕ್ಷನ್, ಕ್ಲೈಂಟ್ ರಿಲೇಷನ್‌ಷಿಪ್ ಬಗ್ಗೆ ಜ್ಞಾನ ಇರಬೇಕು, ಪರಿಣಾಮಕಾರಿ ಸಂವಹನ, ಇಂಗ್ಲಿಷ್‌ನಲ್ಲಿ ಮಾತನಾಡುವ ಸಾಮರ್ಥ್ಯ ಇರಬೇಕು. ಏಪ್ರಿಲ್ 8 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್–₹15,000–₹17,500. ಸಂಪರ್ಕ: https://tinyurl.com/4983mtjj.

ಕಾನ್‌ಫ್ಲ್ಯುಯೆನ್ಸರ್ (Confluencr) ಇನ್‌ಫ್ಲುಯೆನ್ಸರ್ ಸ್ಟ್ರ್ಯಾಟೆಜಿ ಟ್ರೇನಿಗಳನ್ನು ನೇಮಿಸಿಕೊಳ್ಳಲಿದೆ. ಇನ್‌ಫ್ಲುಯೆನ್ಸರ್ ಮಾರ್ಕೆಟಿಂಗ್ ಬಗ್ಗೆ ಅರಿತಿದ್ದು ಪರಿಣಾಮಕಾರಿ ಸಂವಹನ ಬಲ್ಲವರು ಏಪ್ರಿಲ್ 11ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್–₹12,000–₹12,500. ಸಂಪರ್ಕ: https://tinyurl.com/4u3h4nck.

ಗಣಿತ ಕಷ್ಟ, ಆದರೂ ಇಷ್ಟ!



ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

• ನನ್ನ ಮಗಳು ಎಸ್‌ಎಸ್‌ಎಲ್‌ಸಿ ಓದುತ್ತಿದ್ದಾಳೆ. ಅವಳಿಗೆ ಗಣಿತ ತುಸು ಕಷ್ಟ. ಆದರೆ, ಮುಂದೆ ಗಣಿತ ಟೀಚರ್ ಆಗುವೆ ಎನ್ನುತ್ತಾಳೆ. ಪಿಯುಸಿಗೂ ಗಣಿತವನ್ನೇ ಆಯ್ಕೆ ಮಾಡಿಕೊಳ್ಳುವೆ ಎನ್ನುತ್ತಿದ್ದಾಳೆ. ಕಷ್ಟ ಎನಿಸುತ್ತಿರುವ ವಿಷಯವನ್ನು ಬಿಟ್ಟು ಬೇರೆ ವಿಷಯ ಓದು ಎಂದು ಅವಳನ್ನು ಹೇಗೆ ಒಪ್ಪಿಸುವುದು ತಿಳಿಯುತ್ತಿಲ್ಲ.

ಲೋಹಿತಾಶ್ವ, ಮಾರೇನಹಳ್ಳಿ

ನಿಮ್ಮ ಆಕಾಂಕ್ಷೆಯಂತೆ ಸುಲಭವಾದ ವಿಷಯವನ್ನು ಆಯ್ಕೆ ಮಾಡಿಕೊ ಎಂದು ಅವಳಿಗೆ ಸಲಹೆಯನ್ನು ಕೊಡುವುದಕ್ಕಿಂತ, ಅವಳಿಗೆ ಇಷ್ಟವಾಗಿರುವುದನ್ನು ಕಲಿಯಲು ಪ್ರೋತ್ಸಾಹಿಸುವುದು ಒಳ್ಳೆಯದು. ಇನ್ನು, ಕೆಲವರಿಗೆ ಗಣಿತ ಕಷ್ಟ, ಕೆಲವರಿಗೆ ಇಂಗ್ಲಿಷ್ ಕಷ್ಟ ಎನ್ನುವುದು ಸರಿ. ಆದರೆ ಎಲ್ಲರಿಗೂ ಯಾವಾಗಲೂ ಒಂದು ವಿಷಯ ಕಷ್ಟವಾಗಿಯೇ ಇರುತ್ತದೆ ಎನ್ನುವುದನ್ನು ಒಪ್ಪಲಾಗದು. ಗಣಿತವನ್ನು ಕಲಿಸುವ ಮೇಷ್ಟ್ರು ಇಷ್ಟವಾದರೆ ಎಂಥವರಿಗಾದರೂ ಗಣಿತ ಸುಲಭವಾಗುವ ಸಾಧ್ಯತೆ ಇರುತ್ತದೆ. ಮಕ್ಕಳಿಗೆ ಏನನ್ನಾದರೂ ಕಲಿಯುವ ಸಹಜ ಸಾಮರ್ಥ್ಯ ಇರುತ್ತದೆ. ವಿಷಯದಲ್ಲಿ ಅವರಿಗೆ ಆಸಕ್ತಿ ಬರುವಂತೆ ಕಲಿಸುವ ಶಿಕ್ಷಕರ ಪಾತ್ರ ಇಲ್ಲಿ ಮಹತ್ವದ್ದಾಗಿರುತ್ತದೆ.

ಮಕ್ಕಳು ಆಯ್ಕೆ ಮಾಡಿಕೊಳ್ಳುವ ದಾರಿಯ ಬಗ್ಗೆ ಪಾಲಕರಿಗೆ ಕೆಲವೊಮ್ಮೆ ಅನುಮಾನಗಳು ಬರುತ್ತವೆ. ಇಂತಹ ಸಂದರ್ಭದಲ್ಲಿ ಆತಂಕಪಡುವುದಕ್ಕಿಂತ ಸಮಾಧಾನದಿಂದ ಮಾರ್ಗದರ್ಶನ ನೀಡುವುದು ಉತ್ತಮ. ಅವಳಿಗೆ ಗಣಿತ ಕಷ್ಟ ಎನ್ನುವ ನಿಮ್ಮ ಅನಿಸಿಕೆ ಎಷ್ಟು ಸರಿಯಾಗಿದೆಯೋ ನಿಮಗೆ ಚಿತ್ರಕಲೆ ಕಷ್ಟ ಎನ್ನುವ ನನ್ನ ಅನಿಸಿಕೆಯೂ ಅಷ್ಟೇ ಸರಿಯಾಗಿರಬಹುದು! ಗಣಿತ ಶಿಕ್ಷಕಿಯಾಗುವ ಆಸೆ ಏಕೆ ಬಂದಿದೆ ಎನ್ನುವುದನ್ನು ನೀವು ಸಮಾಧಾನದಿಂದ ಅವಳನ್ನು ಕೇಳಿ ತಿಳಿದುಕೊಳ್ಳಿ. ಅದರಿಂದ ನಿಮಗೂ ಸಮಾಧಾನ ಸಿಗಬಹುದು.

ಐನ್‌ಸ್ಟೀನ್, ಅಬ್ದುಲ್ ಕಲಾಂ, ಹೋಮಿ ಭಾಭಾ ಅವರಂತಹ ಮಹಾನ್ ವಿಜ್ಞಾನಿಗಳ ಪಾಲಕರು ಖಂಡಿತವಾಗಿಯೂ ಅವರಷ್ಟು ಪ್ರತಿಭಾವಂತರೇನೂ ಆಗಿರಲಿಲ್ಲ. ನಮ್ಮ ಮಕ್ಕಳು ನಮಗಿಂತಲೂ ವಿಶೇಷವಾದ ಶಕ್ತಿ, ಸಾಮರ್ಥ್ಯಗಳನ್ನು ಪಡೆದುಕೊಂಡು ಹುಟ್ಟಿರುವ ಸಾಧ್ಯತೆ ಇರುತ್ತದೆ. ಅದನ್ನು ಗುರುತಿಸುವಲ್ಲಿ ಎಡವುವ ಪಾಲಕರ ಸಂಖ್ಯೆ ಯಾವಾಗಲೂ ಹೆಚ್ಚಿದೆ. ಮಗಳು ರಿಸ್ಕ್ ತೆಗೆದುಕೊಂಡು ನಪಾಸಾಗಿಬಿಟ್ಟರೆ ಎಂದೆಲ್ಲಾ ನೀವು ನಕಾರಾತ್ಮಕವಾಗಿ ಆಲೋಚಿಸಬೇಡಿ. ಅದೇನಾದರೂ ಆಗಲಿ, ಅದರಿಂದ ಅವಳಿಗೆ ಒಂದು ಅನುಭವ ಸಿಗುತ್ತದೆ. ಅಕಸ್ಮಾತ್ ಒಮ್ಮೆ ನಪಾಸಾದರೆ ಅಂಥ ನಷ್ಟವೇನೂ ಆಗುವುದಿಲ್ಲ. ಮತ್ತೆ ಓದಿ ಪಾಸಾದರೆ ಆಯಿತು. ನಾಲ್ಕು ಸಲ ನಪಾಸಾಗಿ, ಮುಂದೆ ಪಾಸಾಗಿ ಅಧಿಕಾರಿಯಾದ ವ್ಯಕ್ತಿಯು ಅಧಿಕಾರಿಯೇ ಆಗಿರುತ್ತಾನೆ ತಾನೆ? ಯಶಸ್ವಿಯಾದ ವ್ಯಕ್ತಿಯನ್ನು ಯಾರಾದರೂ ಎಷ್ಟು ಸಲ ನಪಾಸಾಗಿದ್ದೆ ಎಂದು ಕೇಳುವುದುಂಟೆ? ಹಾಗೆಯೇ, ಯಾವಾಗಲೂ ಎಲ್ಲದರಲ್ಲೂ ಎಚ್ಚರಿಕೆಯಿಂದ, ಸಾಧ್ಯವಾದಷ್ಟೂ ಸುಲಭದ ಹಾದಿಯಲ್ಲಿ ಮುಂದುವರಿಯಬೇಕು ಎನ್ನುವ ಮನಃಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕು. ಏನೇ ಆದರೂ ಒಳ್ಳೆಯದಕ್ಕೇ ಆಗುತ್ತದೆ ಎನ್ನುವುದನ್ನು ನಂಬಬೇಕು.

ನಿಮ್ಮ ಮಗಳ ಭವಿಷ್ಯತ್ತಿನ ಬಗ್ಗೆ ನೀವು ಚಿಂತಿತರಾಗಬೇಕಿಲ್ಲ. ಅವಳಿಗೆ ಇಷ್ಟವಾದದ್ದನ್ನು ಓದಲಿ. ಮುಂದೆ ಕಷ್ಟವಾದ ಕಾಲಕ್ಕೆ ಅಲ್ಲಿಂದ ಮುಂದೇನು ಮಾಡಬೇಕು ಎಂದು ಆಲೋಚಿಸಿದರಾಯಿತು. ಅವಳಿಗೆ ಒಳ್ಳೆಯ ಭವಿಷ್ಯವಿದೆ ಹಾಗೂ ಆಕೆ ಒಳ್ಳೆಯ ವ್ಯಕ್ತಿ ಎನ್ನುವ ನಂಬಿಕೆ ನಿಮಗಿರಲಿ. ಅಂತಹ ನಂಬಿಕೆ ನಿಮಗಿದೆ ಎಂಬುದು ಅವಳಿಗೂ ಗೊತ್ತಿರಲಿ.

ಭೂಮಿ ಫೆಲೋಷಿಪ್

ಭೂಮಿ ಸಂಘಟನೆಯು ಸಮುದಾಯ ಅಭಿವೃದ್ಧಿ ಯೋಜನೆಗಳ ಮೂಲಕ ಸಾಮಾಜಿಕ ಪರಿಣಾಮ ಸೃಷ್ಟಿಸಲು ಬದ್ಧವಾಗಿರುವ ಉತ್ಸಾಹಿ ಯುವ ಸಮೂಹಕ್ಕೆ ನೀಡುವ ಫೆಲೋಷಿಪ್ ಇದಾಗಿದೆ.

ಅರ್ಹತೆ: 21ರಿಂದ 30 ವರ್ಷದ ವಯೋಮಿತಿಯಲ್ಲಿ ಇರುವವರು ಅರ್ಜಿ ಸಲ್ಲಿಸಬಹುದು. ಮಾನವಿಕ ವಿಭಾಗ, ಸಮಾಜವಿಜ್ಞಾನ, ಶಿಕ್ಷಣ, ಮ್ಯಾನೇಜ್‌ಮೆಂಟ್, ಕಾನೂನು, ಎಂಜಿನಿಯರಿಂಗ್, ಔಷಧಿ ಅಥವಾ ಸಂಬಂಧಿತ ಕ್ಷೇತ್ರಗಳಲ್ಲಿ ಪದವಿ ಪಡೆದಿರುವವರಿಗೆ ಆದ್ಯತೆ. ಅರ್ಜಿದಾರರಿಗೆ ಬೋಧನಾ ಸಾಮರ್ಥ್ಯ, ಶೈಕ್ಷಣಿಕ ತಂತ್ರಜ್ಞಾನದ ಬಗ್ಗೆ ಜ್ಞಾನ ಇರಬೇಕು. ಚೆನ್ನೈ, ಕೊಯಮತ್ತೂರು ಅಥವಾ ತಿರುಚಿಯಲ್ಲಿ ಕಾರ್ಯ ನಿರ್ವಹಿಸಲು ಸಿದ್ಧರಾಗಿರಬೇಕು.

ಆರ್ಥಿಕ ನೆರವು: ಪ್ರತಿ ತಿಂಗಳು ₹25,500 ಅನುದಾನ ನೀಡಲಾಗುತ್ತದೆ.

ಅರ್ಜಿ ಸಲ್ಲಿಸಲು ಕೊನೇ ದಿನ: 31-03-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್.

ಮಾಹಿತಿಗೆ: Short Url:www.b4s.in/praja/BHFP1

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ-ಸಿಇಟಿ ಪರೀಕ್ಷೆ ದಿಕ್ಸೂಚಿ


ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

66) ಈ ಚಿತ್ರದಲ್ಲಿ ಇರುವವರು ಯಾರು? ಇವರು ಬರೆದಿರುವ ಕೃತಿಗಳಲ್ಲಿ ಯಾವುದಾದರೂ ಒಂದನ್ನು ಹೆಸರಿಸಿ



ಉತ್ತರ:– ಬಾಲ ಗಂಗಾಧರ ತಿಲಕ

ಇವರು ಬರೆದಿರುವ ಕೃತಿ:– ಗೀತಾ ರಹಸ್ಯ

67) ಭಾರತ ಮತ್ತು ಚೀನಾದ ನಡುವೆ ಗಡಿವಿವಾದ ಇದ್ದರೂ ಕೂಡಾ ಅವುಗಳ ನಡುವಿನ ಸಂಬಂಧವನ್ನು ಹೇಗೆ ಉತ್ತಮ ಪಡಿಸಿಕೊಂಡಿವೆ.

ಉತ್ತರ:– ಭಾರತದ ಧೋರಣೆಯ ವಿರುದ್ಧ ಚೈನಾ ದೇಶವು ಟಿಬೆಟನ್ನು ವಶಪಡಿಸಿಕೊಂಡಿತು. 1962ರಲ್ಲಿ ಚೀನಾ ದೇಶವು ಭಾರತವನ್ನು ಆಕ್ರಮಿಸಿತು ಹಾಗೂ ಯುದ್ಧದಲ್ಲಿ ಭಾರತ ಸೋಲು ಅನುಭವಿಸಿತು.


ನಮ್ಮ ರಾಜ್ಯಗಳಲ್ಲೊಂದಾದ ಅರುಣಾಚಲ ಪ್ರದೇಶವನ್ನು ಚೈನಾ ತನ್ನದೆಂದು ಪ್ರತಿಪಾದಿಸುತ್ತಿದ್ದು ಈ ವಿಷಯ ಭಾರತ–ಚೈನಾಗಳ ಪರಸ್ಪರ ಸಂಬಂಧದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಮಾವೋವಾದಿಗಳು ಭಾರತದಲ್ಲಿ ನಕ್ಸಲವಾದವನ್ನು ಪಸರಿಸುವುದರಿಂದ ಈ ಎರಡು ರಾಷ್ಟ್ರಗಳ ಮಧ್ಯೆ ಮನಸ್ತಾಪವಿದೆ. ಭಾರತ ಚೈನಾದ ಮಧ್ಯೆ ಇರುವ ಗಡಿಯೂ ಅಂತಿಮವಾಗಿ ನಿರ್ಣಯವಾಗಿಲ್ಲ. ಹೀಗಾಗಿ ನಮ್ಮೆರಡು ರಾಷ್ಟ್ರಗಳ ಮಧ್ಯೆ ಗಡಿ ರೇಖೆ ನಿಖರವಾಗಿ ಇಲ್ಲ. ಭಾರತ ಮತ್ತು ಚೀನಾದ ನಡುವೆ, ಗಡಿಯಲ್ಲಿ ದೋಕ್ಲಾಮ್, ತವಾಂಗ್, ಆಕ್ಸಯ್ ಚೀನಾ ಮೊದಲಾದ ಸಮಸ್ಯೆಗಳಿದ್ದರೂ ನಮ್ಮ ಉತ್ತರ ಭಾಗದಲ್ಲಿರುವ ಬೃಹತ್ ನೆರೆಯ ರಾಷ್ಟ್ರವಾದ ಚೀನಾದೊಡನೆ ಇತಿಹಾಸದ ಉದ್ದಕ್ಕೂ ಪರಸ್ಪರ ಸಂಬಂಧಗಳನ್ನು ಬೆಳೆಸಿಕೊಂಡಿದೆ. ಅಕ್ಟೋಬರ್ 1949ರಲ್ಲಿ ಚೈನಾ ಕಮ್ಯುನಿಸ್ಟ್ ರಾಷ್ಟ್ರವೆಂದು ಉದಯಿಸಿದಾಗ ಅದನ್ನು ಮಾನ್ಯತೆ ಮಾಡಿದ ಪ್ರಪ್ರಥಮ ರಾಷ್ಟ್ರ ಭಾರತ. ಪಂಚಶೀಲ ಹಾಗೂ ಹಿಂದಿ–ಚೀನೀ ಭಾಯಿಭಾಯಿ ತತ್ವದ ಆಧಾರದಲ್ಲಿ ಪರಸ್ಪರ ಭಾರತ–ಚೀನಾ ಸಂಬಂಧವನ್ನು ಬೆಳೆಸಿಕೊಳ್ಳಲು ಯತ್ನಿಸಲಾಯಿತು.

68) ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ

ಎ) ಕೋಲ್ಕತ್ತಾ ಬಿ) ಕಾವೇರಿ ನದಿ


ಸಿ) 82 1/2° ಪೂರ್ವ ರೇಖಾಂಶ

ಉತ್ತರ:–



69) ಭಾರತದ ನಕ್ಷೆ ಬರೆದು ಇವುಗಳನ್ನು ಗುರುತಿಸಿ.

1. ಭಾರತದ ಪೂರ್ವ ಜಲಮೇರೆ 2. ದಾವಣಗೆರೆ 3. ಕಲ್ಪಾಕಂ




70) ಭಾರತದ ನಕಾಶೆಯನ್ನು ಬಿಡಿಸಿ, ಕೆಳಗಿನವುಗಳನ್ನು ಬಿಡಿಸಿ

ಎ) 23 1/2° ಉತ್ತರ ಅಕ್ಷಾಂಶ ಬಿ) ನರ್ಮದಾ ನದಿ

ಸಿ) ದೆಹಲಿ.

ಉತ್ತರ:–



71) ಬಬರ್ ಮಣ್ಣು ಎಲ್ಲಿ ನೋಡಬಹುದಾದಿದೆ?

ಉತ್ತರ:– ಹಿಮಾಲಯದ ತಪ್ಪಲಿನಲ್ಲಿ ನದಿಗಳು ಮೈದಾನವನ್ನು ಪ್ರವೇಶಿಸುವ ಕಡೆ ಅವುಗಳು ಹೊತ್ತು ತಂದ ದಪ್ಪ ಶಿಲಾ ಚೂರುಗಳನ್ನು ಸಂಚಯಿಸಿದೆ. ಇದನ್ನೆ ಬಬರ್ ಎಂದು ಕರೆಯುವರು. ಹೀಗಾಗಿ ಇಲ್ಲಿಯೇ ಬಬರ್ ಮಣ್ಣನ್ನು ನೋಡಬಹುದಾಗಿದೆ.

72) ಭಾರತದಲ್ಲಿ 6 ಪ್ರಮುಖ ವಿಧದ ಅರಣ್ಯಗಳನ್ನು ಹೆಸರನ್ನು ತಿಳಿಸಿ

ಉತ್ತರ:– ವಿಶಾಲವಾದ ಭಾರತದಲ್ಲಿ ಅನೇಕ ವಿಧದ ಅರಣ್ಯಗಳಿವೆ. ಅವುಗಳನ್ನು 6 ಪ್ರಮುಖ ವಿಧಗಳಾಗಿ ವಿಂಗಡಿಸಲಾಗಿದೆ.

1. ಉಷ್ಣವಲಯದ ನಿತ್ಯಹರಿದ್ವರ್ಣದ ಅರಣ್ಯಗಳು
2. ಉಷ್ಣವಲಯದ ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳು
3. ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು
4. ಮ್ಯಾಂಗ್ರೋವರ್ ಅರಣ್ಯಗಳು
5. ಮರುಭೂಮಿ ಸಸ್ಯವರ್ಗ
6. ಹಿಮಾಲಯದ ಅಲ್ಪೈನ್ ಅರಣ್ಯಗಳು

MATHS

MULTIPLE CHOICE QUESTIONS

13) How many numbers greater than 10,00,000 be formed from 2, 3, 0, 3, 4, 2, 3?

(A) 420 (B) 360
(C) 400 (D) 300

Ans: (B) 360

Expln:- Any number greater than 10,00,000 will contain all seven digits.

We have to arrange 7 digits out of which 2 occurs twice and 3 occurs thrice. The rest are distinct.

$\therefore$ Number of such arrangements $= \frac{7!}{2! \times 3!} = 420.$

These arrangements will also include those which contain 0 in the first place.

Keeping '0' in first place, remaining 6 digits out of which 2 occurs twice, 3 occurs thrice and rest can be arranged in $\frac{6!}{2! \times 3!} = 60$ ways.

$\therefore$ Required number of arrangements $= 420 - 60 = 360.$

14) The Set A has 4 elements and the set B has 5 elements then the number of injective mappings that can be defined from A to B is ....

A) 144 B) 72
C) 60 D) 120

Ans: (d)

Expln:-

No. of elements in set A = 4

No. of elements in set B = 5

No. of injective mapping $= {}^5P_4 = (5!/1!) = 120$

15) The solution of $\frac{6x}{4x-1} < \frac{1}{2}$ is

(A) $x < -\frac{1}{8}$ (B) $-\frac{1}{8} < x < \frac{1}{4}$

(C) $x < -\frac{1}{8}$ and $x > \frac{1}{4}$ (D) $x > \frac{1}{8}$

Ans : (B) $-\frac{1}{8} < x < \frac{1}{4}$

Expln : $\frac{6x}{4x-1} < \frac{1}{2} \Rightarrow \frac{6x}{4x-1} - \frac{1}{2} < 0$

$\frac{12x-(4x-1)}{2(4x-1)} < 0$

$\frac{8x+1}{2(4x-1)} < 0$

A fraction less than zero means Nr < 0 or Dr < 0

i.e., $8x+1<0$ or $4x-1<0$. Let $4x-1<0$ and $8x+1>0$.

Then $x < \frac{1}{4}$, $8x+1>0$ $\therefore 8x > -1$ i.e., $x > -\frac{1}{8}$.

$\therefore -\frac{1}{8} < x < \frac{1}{4}$.


16) The area of the region bounded by the line y= 3x and the curve $y = x^2$ in sq. units is........

(A) 10 (B) 9/ 2
(C) 9 (D) 5

Ans. B

Expl:-

$$A = \int_0^3 (3x - x^2)dx = 3\left(\frac{x^2}{2}\right) - \frac{x^3}{3}\Big|_0^3 = \frac{9}{2}$$



17) Everybody in a room shakes hands with everybody else. The total number of handshakes is 45. The total number of persons in the room is

A) 9 B) 10
C) 5 D) 15

Ans: (b)

Let the total number of handshake $= {}^nC_2$

We know $\Rightarrow {}^nC_2 = 45$

$\Rightarrow n!/2!\,!(n-2)! = 45$

$\Rightarrow n(n-1)/2 = 45$

$\Rightarrow n^2 - n - 90 = 0$

$\Rightarrow n = 10, \quad -9$ (not possible)

Total no. of persons in the room is 10

18) If $A = \begin{bmatrix} \cos\theta & -\sin\theta \\ \sin\theta & \cos\theta \end{bmatrix}$ and $A^T + A = I_2$, then

(A) $\theta = n\pi, n \in Z$ (B) $\theta = (2n+1)\frac{\pi}{2}, n \in Z$

(C) $\theta = 2n\pi \pm \frac{\pi}{3}, n \in Z$ (D) None of these

Ans : (C) $\theta = 2n\pi \pm \frac{\pi}{3}, n \in Z$

Expln :– $A = \begin{bmatrix} \cos\theta & -\sin\theta \\ \sin\theta & \cos\theta \end{bmatrix}$, $A^T = \begin{bmatrix} \cos\theta & \sin\theta \\ -\sin\theta & \cos\theta \end{bmatrix}$

$A^T + A = \begin{bmatrix} 2\cos\theta & 0 \\ 0 & 2\cos\theta \end{bmatrix} = \begin{bmatrix} 1 & 0 \\ 0 & 1 \end{bmatrix}$ (given)

$\therefore 2\cos\theta = 1 \Rightarrow \cos\theta = \frac{1}{2}$ i.e., $\cos\theta = \cos\frac{\pi}{3}$

$\therefore \theta = 2n\pi \pm \frac{\pi}{3}$.

19) If A and B are two matrices such that AB=A and BA = B, then B^2 is equal to...............

(A) B (B) A
(C) Zero matrix (D) 1

Ans: (A) B

Expln:- Consider BA = B.

$BAB = B^2 \therefore BA = B^2 \Rightarrow B = B^2$

20) Given 5 line segments of lengths 2, 3, 4, 5, 6 units. Then the number of triangles that can be formed by joining these segments is...................

(A) ${}^5C_3 - 3$ (B) ${}^5C_3$
(C) ${}^5C_3 - 1$ (D) ${}^5C_3 - 2$

Ans: (A) ${}^5C_3 - 3$

Expln:-

The line segments 2 and 4 added gives 6 units.

That of 2 and 3 added gives 5 units.

Thus, that of 4 units is not considered,

i.e., there are 3 lines.



250ಕ್ಕೂ ಅಧಿಕ ಸಿಲಿಂಡರ್ ಜಪ್ತಿ

ವಾಣಿಜ್ಯ ಉದ್ದೇಶಕ್ಕೆ ಗೃಹ ಬಳಕೆ ಸಿಲಿಂಡರ್ ಬಳಕೆ: ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದ ಆರೋಪದಡಿ ಪೊಲೀಸರು ಕಾರ್ಯಾಚರಣೆ ನಡೆಸಿ, ನಾಲ್ಕು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಪೀಣ್ಯದಲ್ಲಿ 45, ಚಿಕ್ಕಜಾಲದಲ್ಲಿ 209, ಆರ್.ಎಂ.ಸಿ. ಯಾರ್ಡ್ ಹಾಗೂ ಕೆಂಗೇರಿಯಲ್ಲೂ ಸಿಲಿಂಡರ್ ಗಳನ್ನು ಜಪ್ತಿ ಮಾಡಿ, ಅಗತ್ಯ ವಸ್ತುಗಳ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ.

ಕೆಂಗೇರಿ ಪೊಲೀಸ್ ಠಾಣೆ ವ್ಯಾಪ್ತಿಯ ಮೈಲಸಂದ್ರದ ಮಹಾಲಕ್ಷ್ಮೀ ಎಂಟರ್‌ಪ್ರೈಸಸ್ ಮೇಲೆ ಪೊಲೀಸರು ಶನಿವಾರ ದಾಳಿ ನಡೆಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಆಹಾರ ನಿರೀಕ್ಷಕ ಮಹಾಂತಗೌಡ ತಡ್ಲಗಿ ಹಾಗೂ ಪಿಎಸ್‌ಐ ಈಶ್ವರ್ ವಣ್ಣೂರು ಅವರು ಅಂಗಡಿ ಮೇಲೆ ದಾಳಿ ನಡೆಸಿದ ಸಂದರ್ಭ ವಿವಿಧ ಕಂಪನಿಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಅಕ್ರಮವಾಗಿ ಸಂಗ್ರಹ



ಮಾಡಿರುವುದು ಪತ್ತೆಯಾಗಿದೆ. ಕೃತಕ ಅಭಾವ ಸೃಷ್ಟಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶ ಹೊಂದಲಾಗಿತ್ತು. ಮಾಲೀಕನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಆಸ್ಪತ್ರೆ, ಶಾಲಾ ಶಿಕ್ಷಣ ಸಂಸ್ಥೆಗಳು, ವಿಮಾನ ನಿಲ್ದಾಣ, ರೈಲು ನಿಲ್ದಾಣ, ಬಸ್ ನಿಲ್ದಾಣಗಳ ಕ್ಯಾಂಟೀನ್, ಪ್ರಮುಖ ದೇವಸ್ಥಾನಗಳಲ್ಲಿ ಪ್ರಸಾದ ವಿನಿಯೋಗ ಮಾಡಲು ಮತ್ತು ಸರ್ಕಾರಿ ಕಚೇರಿ, ವೃದ್ಧಾಶ್ರಮ, ಖಾಸಗಿ ವಲಯದ ಪ್ರಮುಖ ಕಚೇರಿಗಳಿಗೆ ಆದ್ಯತೆ ಮೇಲೆ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ವಿತರಿಸಲು ಆಹಾರ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ.

ಯುದ್ಧದಿಂದಾಗಿ ಎಲ್‌ಪಿಜಿ ಸಿಲಿಂಡರ್ ಸರಬರಾಜಿನಲ್ಲಿ ವ್ಯತ್ಯಯ ಆಗುತ್ತಿದೆ. ಇದರಿಂದ ಆತಂಕಗೊಳ್ಳುತ್ತಿರುವ ನಾಗರಿಕರು, ಗೃಹ ಬಳಕೆಯ ಸಿಲಿಂಡರ್ ಬುಕ್ ಮಾಡುತ್ತಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಳ್ಳುತ್ತಿರುವ ಸೈಬರ್ ವಂಚಕರು, ಗ್ಯಾಸ್ ಏಜೆನ್ಸಿಗಳ ಸೋಗಿನಲ್ಲಿ ಲಿಂಕ್‌ಗಳನ್ನು ಕಳುಹಿಸಿ ವಂಚಿಸುವ ಸಾಧ್ಯತೆಯಿದೆ. ಈ ಬಗ್ಗೆ ಎಚ್ಚರದಿಂದ ಇರಬೇಕೆಂದು ಸಾಮಾಜಿಕ ಜಾಲತಾಣದ ಮೂಲಕ ಪೊಲೀಸರು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

115 ಖಾಲಿ ಎಲ್‌ಪಿಜಿ ಸಿಲಿಂಡರ್ ದಾಸ್ತಾನು: ಎಫ್‌ಐಆರ್

ವಿಜಯಪುರ (ದೇವನಹಳ್ಳಿ): ಹೋಬಳಿಯ ಹುರುಳುಗುರ್ಕಿ ಗ್ರಾಮದ ಅಲ್ಲಾಭಕ್ಷ ಎಂಬುವರಿಗೆ ಸೇರಿದ ಶೆಡ್‌ನಲ್ಲಿ ಪರವಾನಗಿ ಇಲ್ಲದೇ ಹಲವಾರು ಗೃಹ ಬಳಕೆಯ ಖಾಲಿ ಎಲ್‌ಪಿಜಿ ಸಿಲಿಂಡರ್ ದಾಸ್ತಾನು ಮಾಡಿಕೊಂಡಿದ್ದ ವ್ಯಕ್ತಿ ವಿರುದ್ಧ ಪ್ರಕರಣ ದಾಖಲಾಗಿದೆ.

ಯಲಹಂಕದ ಲಾಲ್‌ಸಿಂಗ್ (42) ವಿರುದ್ಧ ವಿಜಯಪುರ ಟೌನ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಆಹಾರ ಇಲಾಖೆ ಶಿರಸ್ತೇದಾರ ರವಿ ಸೂರ್ಯವಂಶಿ ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಶನಿವಾರ ಸ್ಥಳ ಪರಿಶೀಲನೆ ನಡೆಸಿದರು. ಸ್ಥಳದಲ್ಲಿ 5 ಕೆ.ಜಿಯ 15, 14 ಕೆ.ಜಿಯ 100 ಖಾಲಿ ಎಲ್‌ಪಿಜಿ ಸಿಲಿಂಡರ್ ಹಾಗೂ ತ್ರಿಚಕ್ರ ವಾಹನ ಪತ್ತೆಯಾಗಿವೆ. ಎಲ್ಲವನ್ನೂ ವಶಕ್ಕೆ ಪಡೆಯಲಾಗಿದೆ.

ಸ್ಫೋಟಕ ವಸ್ತುಗಳ ಬಗ್ಗೆ ನಿರ್ಲಕ್ಷ್ಯ ವಹಿಸಿ ಪರವಾನಿಗೆ ಪಡೆಯದೇ ಅಕ್ರಮವಾಗಿ ಖಾಲಿ ಎಲ್‌ಪಿಜಿ ಸಿಲಿಂಡರ್ ದಾಸ್ತಾನು ಮಾಡಿದ ಆರೋಪದ ಮೇಲೆ ಲಾಲ್ ಸಿಂಗ್ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆಹಾರ ಇಲಾಖೆ ಶಿರಸ್ತೇದಾರ ದೂರು ನೀಡಿದ್ದಾರೆ.

16 ಗೃಹಬಳಕೆ, 6 ವಾಣಿಜ್ಯ ಸಿಲಿಂಡರ್ ವಶ

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರ, ಬಂಗಾರಪೇಟೆ ಹಾಗೂ ಶ್ರೀನಿವಾಸಪುರದಲ್ಲಿ ಭಾನುವಾರ ತಾಲ್ಲೂಕು ಆಡಳಿತ, ಆಹಾರ ಇಲಾಖೆ ಹಾಗೂ ಪೊಲೀಸರು ವಿವಿಧ ಹೋಟೆಲ್, ಬೇಕರಿ ಹಾಗೂ ಜ್ಯೂಸ್ ಸೆಂಟರ್‌ಗಳ ಮೇಲೆ ದಾಳಿ ನಡೆಸಿದರು.

ನಿಯಮ ಬಾಹಿರವಾಗಿ ಗೃಹಬಳಕೆ ಸಿಲಿಂಡರ್ ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿರುವುದು ಪತ್ತೆಯಾಗಿದೆ. 16 ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ಹಾಗೂ 6 ವಾಣಿಜ್ಯ ಬಳಕೆ ಸಿಲಿಂಡರ್ ವಶಕ್ಕೆ ಪಡೆಯಲಾಗಿದೆ.

‘ಕೊರತೆ ನೆಪ; ಸಿಲಿಂಡರ್ ಮಾರಾಟಕ್ಕೆ ಕಳ್ಳಹಾದಿ!’ ಎಂಬ ವಿಶೇಷ ವರದಿ ‘ಪ್ರಜಾವಾಣಿ’ಯಲ್ಲಿ ಭಾನುವಾರ ಪ್ರಕಟವಾದ ಬೆನ್ನಲ್ಲೇ ಜಿಲ್ಲಾಧಿಕಾರಿ ಎಂ.ಆರ್.ರವಿ ಅವರ ಸೂಚನೆ ಮೇರೆಗೆ ಈ ದಾಳಿ ನಡೆದಿದೆ.

ಬಂಗಾರಪೇಟೆಯಲ್ಲಿ ತಹಶೀಲ್ದಾರ್ ಕೆ.ಎನ್.ಸುಜಾತಾ ನೇತೃತ್ವದಲ್ಲಿ ಹೋಟೆಲ್, ಬೇಕರಿ ಮೇಲೆ ದಾಳಿ ನಡೆಸಲಾಗಿದೆ. ಕೋಲಾರ ಹಾಗೂ ಶ್ರೀನಿವಾಸಪುರದಲ್ಲೂ ಹೋಟೆಲ್‌ಗಳ ಮೇಲೆ ತಹಶೀಲ್ದಾರ್ ನೇತೃತ್ವದಲ್ಲಿ ದಾಳಿ ನಡೆದಿದ್ದು ಪರಿಶೀಲನೆಯಲ್ಲಿ ತೊಡಗಿದ್ದಾರೆ. ಗೋದಾಮುಗಳನ್ನೂ ಪರಿಶೀಲಿಸಿ ಅಕ್ರಮ ದಾಸ್ತಾನು ಇದೆಯೇ ಎಂಬುದನ್ನು ಪರಿಶೀಲಿಸುತ್ತಿದ್ದಾರೆ. ದಾಳಿ ವೇಳೆ ಆಹಾರ ಇಲಾಖೆ ಅಧಿಕಾರಿಗಳು, ಪೊಲೀಸರು ಇದ್ದರು.

ತಿಂಡಿಗಾಗಿ ತಾಸು ಕಾಯುವ ಸ್ಥಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿನ ವ್ಯತ್ಯಯದಿಂದ ನಗರದಲ್ಲಿನ ಹೋಟೆಲ್‌ಗಳು ಮುಚ್ಚುತ್ತಿದ್ದರೆ, ಕಾರ್ಯ ನಿರ್ವಹಿಸುತ್ತಿರುವ ಹೋಟೆಲ್‌ಗಳ ಮುಂದೆ ಜನಸಂದಣಿ ಹೆಚ್ಚುತ್ತಿದೆ.

ಚಾಮರಾಜಪೇಟೆಯ ವ್ಯಾಪ್ತಿಯ ಹೋಟೆಲ್, ಗೋಬಿ ಮಂಚೂರಿ ಮತ್ತು ಬಜ್ಜಿ ಅಂಗಡಿಗಳು ಬಂದ್ ಆಗಿದ್ದರೆ, ಅಲ್ಲೇ ಕೂಗಳತೆ ದೂರದ ಸಿರಸಿ ವೃತ್ತದಲ್ಲಿರುವ ಬಜ್ಜಿ ಅಂಗಡಿಯ ಮುಂದೆ ಜನವೋ ಜನ. ಕೆಲವರು ಬಜ್ಜಿಗಾಗಿ ಸರದಿಯಲ್ಲಿ ಒಂದು ತಾಸಿಗೂ ಹೆಚ್ಚು ಕಾದು ನಿಂತಿದ್ದರು.

ವಿಜಯನಗರ ಸಮೀಪದ ಪಟ್ಟೆಗಾರ ಪಾಳ್ಯದಲ್ಲಿನ ಹೋಟೆಲ್, ಕಬಾಬ್ ಸೆಂಟರ್‌ಗಳು ಬಂದ್ ಆಗಿದ್ದರೆ, ತೆರೆದಿದ್ದ ಒಂದೇ ಗೋಬಿ ಮಂಚೂರಿ ಅಂಗಡಿ ಮುಂದೆ ಜನ ಕಿಕ್ಕಿರಿದು ನಿಂತಿದ್ದರು. ‘ಫ್ರೈಡ್‌ರೈಸ್ ಅಥವಾ ಗೋಬಿ ಮಂಚೂರಿ ಯಾವುದು ಇದ್ದರೂ ಕೊಡಿ’ ಎಂದು ಗ್ರಾಹಕರು ದುಂಬಾಲು ಬಿದ್ದಿದ್ದರು.

ಶೇಷಾದ್ರಿಪುರದ ಫುಡ್‌ಸ್ಟ್ರೀಟ್, ವಿಜಯನಗರದ ತಿಂಡಿಬೀದಿ, ಗಾಂಧಿ ಬಜಾರಿನ ಬೀದಿಯಲ್ಲಿನ ಹಲವು ಅಂಗಡಿಗಳು ಬಂದ್ ಆಗಿದ್ದವು. ತೆರೆದಿದ್ದ ಕೆಲವೇ ಅಂಗಡಿ–ಹೋಟೆಲ್‌ಗಳ ಮುಂದೆ ಜನರು ಕಿಕ್ಕಿರಿದು ನಿಂತಿರುವುದು ಎಲ್ಲೆಡೆ ಸಾಮಾನ್ಯ ಎಂಬಂತಾಗಿತ್ತು.

ಮುಚ್ಚಿದ ಇನ್ನಷ್ಟು ಬಂಕ್‌ಗಳು: ಆಟೊ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯ ಮುಂದುವರಿದಿರುವ ಕಾರಣ ನಗರದ ವಿವಿಧ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆಟೊ ಎಲ್‌ಪಿಜಿ ಬಂಕ್‌ಗಳಲ್ಲಿ ಮತ್ತಷ್ಟು ಭಾನುವಾರ ಬಂದ್ ಆಗಿವೆ. ಕೆಲವು ಬಂಕ್‌ಗಳ ಎದುರು ‘ನೋ ಸ್ಟಾಕ್’ ಎಂಬ ಫಲಕ ಹಾಕಿದ್ದರೆ, ಕೆಲವು ಬಂಕ್‌ಗಳಿಗೆ ಪ್ರವೇಶ ನಿರ್ಬಂಧಿಸಲು ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು.



ನಗರದ ಶೇಷಾದ್ರಿಪುರದ ಫುಡ್ ಸ್ಟ್ರೀಟ್‌ನಲ್ಲಿ ಭಾನುವಾರ ತೆರೆದಿದ್ದ ಕೆಲವೇ ಅಂಗಡಿಗಳ ಎದುರು ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು ಪ್ರಜಾವಾಣಿ ಚಿತ್ರ

ಕೆಲಸಕ್ಕೆ ಕತ್ತರಿ...

ನಗರದ ಕೆಲ ಸಣ್ಣ–ಪುಟ್ಟ ಹೋಟೆಲ್‌ಗಳಲ್ಲಿ ನೆಲ ಮತ್ತು ಟೇಬಲ್ ಸ್ವಚ್ಛಗೊಳಿಸುತ್ತಿದ್ದವರು ಈಗ ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಕೆಲವು ಹೋಟೆಲ್‌ಗಳ ಮಾಲೀಕರು, ತಾವು ಹೇಳಿದಾಗ ಬನ್ನಿ ಎಂದು ಕೆಲಸಗಾರರನ್ನು ವಾಪಸ್ ಕಳುಹಿಸಿದ್ದಾರೆ.

‘ನಮ್ಮ ಹೋಟೆಲ್‌ನಲ್ಲಿ ಟೇಬಲ್ ಒರೆಸುವವರನ್ನು ಒಂದು ವಾರ ಕೆಲಸಕ್ಕೆ ಬರಬೇಡಿ ಎಂದು ಮನೆಗೆ ಕಳುಹಿಸಿದ್ದಾರೆ. ಅಡುಗೆ ಮಾಡುವವರಿಗೆ, ಹೋಟೆಲ್ ಬಂದ್ ಆಗಿದ್ದರೂ ದಿನದ ಕೂಲಿ ಕೊಡುತ್ತಿದ್ದಾರೆ. ನಾನು ನೆಲ ಒರೆಸುವ ಕೆಲಸ ಮಾಡುತ್ತಿದ್ದೆ. ನನ್ನನ್ನು ಮನೆಗೆ ಕಳುಹಿಸಿದ್ದಾರೆ ಮತ್ತು ದಿನದ ಕೂಲಿ ಕೊಡುವುದಿಲ್ಲ ಎಂದೂ ಹೇಳಿದ್ದಾರೆ’ ಎಂದು ನಾಗರಬಾವಿ ಸಮೀಪದ ಮಾರುತಿನಗರದ ಶಾಂತಮ್ಮ ಅಳಲು ತೋಡಿಕೊಂಡರು.

ನಗರದಲ್ಲಿ 25ಕ್ಕೂ ಹೆಚ್ಚು ದೊಡ್ಡ ಹೋಟೆಲ್‌ಗಳು ಬಾಗಿಲು ಹಾಕಿದ್ದು, ಅಂದಾಜು 200 ಜನರು ಕೆಲಸ ಕಳೆದುಕೊಂಡಿದ್ದಾರೆ. ಹೋಟೆಲ್‌ಗಳಿಗೆ ತರಕಾರಿ ಮತ್ತು ಮಾಂಸವನ್ನು ಪೂರೈಸುತ್ತಿದ್ದ ವ್ಯಾಪಾರಿಗಳ ವಹಿವಾಟು ಗಣನೀಯ ಮಟ್ಟದಲ್ಲಿ ಕುಸಿದಿದೆ.

ಮತ್ತಿಕೆರೆ: ಶ್ರೀನಿವಾಸ ಕಲ್ಯಾಣೋತ್ಸವ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮತ್ತಿಕೆರೆಯ ಜೆ.ಪಿ. ಪಾರ್ಕ್ ಬಳಿಯ ಕ್ರೀಡಾಂಗಣದಲ್ಲಿ ಸಾಮಾಜಿಕ ಕಾರ್ಯಕರ್ತ ವೆಂಕಟೇಶ ಮೂರ್ತಿ, ಪಾಲಿಕೆ ಮಾಜಿ ಸದಸ್ಯ ವೇಲು ನಾಯಕರ್ ನೇತೃತ್ವದಲ್ಲಿ ಶ್ರೀನಿವಾಸ ಕಲ್ಯಾಣೋತ್ಸವ ನಡೆಯಿತು.

ಶ್ರೀ ಲಕ್ಷ್ಮೀವೆಂಕಟೇಶ್ವರಸ್ವಾಮಿಯ ದೇಗುಲದಿಂದ ಶ್ರೀ ಲಕ್ಷ್ಮೀವೆಂಕಟೇಶ್ವರ ಸ್ವಾಮಿ ರಥೋತ್ಸವ, ಉತ್ಸವ ಮೂರ್ತಿಯ ಮೆರವಣಿಗೆ ಮತ್ತಿಕೆರೆ, ಯಶವಂತಪುರ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಸಾಗಿ ಬಂದಾಗ ಭಕ್ತರು ದೇವರ ದರ್ಶನ ಪಡೆದರು.

ಪೂಜಾ ಕುಣಿತ, ಜಾನಪದ ಕಲೆಗಳ ಪ್ರದರ್ಶನ ನೋಡಿ ಕಣ್ತುಂಬಿಕೊಂಡರು.

ತಿರುಮಲ ದೇವಾಲಯದಿಂದ ಅರ್ಚಕರು ಬಂದಿದ್ದರು. ಶ್ರೀನಿವಾಸ ಕಲ್ಯಾಣೋತ್ಸವ ಪ್ರಾರಂಭವಾಗುತ್ತಿದ್ದಂತೆ ಭಕ್ತರು ಶ್ರೀನಿವಾಸನ ಸ್ಮರಣೆ ಮಾಡಿದರು. ಹಿಂದೂಗಳ ಜೊತೆಗೆ ನೂರಾರು ಮುಸ್ಲಿಮರೂ ಸ್ವಯಂಸೇವಕರಾಗಿ ಕೆಲಸ ಮಾಡಿದರು.

ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್, ಶಾಸಕರಾದ ಎಸ್.ಟಿ.ಸೋಮಶೇಖರ್, ಎಚ್.ಡಿ. ರಂಗನಾಥ್, ಪುಟ್ಟಣ್ಣ, ಕೆಪಿಸಿಸಿ ವಕ್ತಾರರಾದ ಎಚ್.ಕುಸುಮಾ, ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ, ಪಾಲಿಕೆಯ ಮಾಜಿ ಸದಸ್ಯರಾದ ಬಿ.ಆರ್.ನಂಜುಂಡಪ್ಪ, ರೂಪಲಿಂಗೇಶ್, ಲಗ್ಗೆರೆ ನಾರಾಯಣಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋಪಾಲಕೃಷ್ಣ, ಬಿಎಂಐಸಿಪಿ ಅಧ್ಯಕ್ಷ ರಘುನಂದನ್ ರಾಮಣ್ಣ, ಕರವೇ ಅಧ್ಯಕ್ಷ ಟಿ.ಎ.ನಾರಾಯಣಗೌಡ, ಮತ್ತಿಕೆರೆ ಮಸೀದಿ ಅಧ್ಯಕ್ಷ ಸಮೀವುಲ್ಲಾ ಖಾನ್, ಚಲನಚಿತ್ರ ನಿರ್ಮಾಪಕ ಚಿನ್ನೇಗೌಡ ಭಾಗವಹಿಸಿದ್ದರು.



ಮತ್ತಿಕೆರೆಯ ಜೆ.ಪಿ.ಪಾರ್ಕ್ ಬಳಿಯ ಕ್ರೀಡಾಂಗಣದಲ್ಲಿ ಶ್ರೀನಿವಾಸ ಕಲ್ಯಾಣೋತ್ಸವ ನೆರವೇರಿಸಲಾಯಿತು

ವ್ಯಾಲಿ ನೀರು ಸಂಸ್ಕರಣೆಗಾಗಿ ಚಿಕ್ಕಬಳ್ಳಾಪುರ ಬಂದ್

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಕೆ.ಸಿ. ವ್ಯಾಲಿ ಯೋಜನೆಯ ನೀರನ್ನು ಮೂರು ಹಂತದಲ್ಲಿ ಸಂಸ್ಕರಿಸಿ ಕೆರೆಗಳಿಗೆ ತುಂಬಿಸಬೇಕು ಎಂದು ಆಗ್ರಹಿಸಿ ವಿವಿಧ ಸಂಘಟನೆಗಳು ಭಾನುವಾರ ಕರೆ ನೀಡಿದ್ದ ಚಿಕ್ಕಬಳ್ಳಾಪುರ ಬಂದ್ ಶಾಂತಿಯುತವಾಗಿ ನಡೆಯಿತು.

ಚಿಕ್ಕಬಳ್ಳಾಪುರ ಬಂದ್‌ಗೆ ಕರೆ ನೀಡಿದ್ದ ಭಗತ್‌ಸಿಂಗ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಸಂದೀಪ್ ರೆಡ್ಡಿ ನೇತೃತ್ವದಲ್ಲಿ ಬೆಳಿಗ್ಗೆಯೇ ನಗರದಲ್ಲಿ ಬೈಕ್ ರ್‍ಯಾಲಿ ನಡೆಯಿತು.

ಬಿ.ಬಿ ರಸ್ತೆ, ಎಂ.ಜಿ ರಸ್ತೆ, ಗಂಗಮ್ಮನಗುಡಿ ರಸ್ತೆ, ಬಜಾರ್ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿನ ಅಂಗಡಿಗಳು ಬಾಗಿಲು ಮುಚ್ಚಿದ್ದವು. ಬಂದ್ ಮತ್ತು ಮೆರವಣಿಗೆಯ ನಂತರ ಅಂಗಡಿಗಳು ಬಾಗಿಲು ತೆರೆದವು. ಹಳ್ಳಿಗಳಿಂದ ಬಂದ ಜನರು ಶಿಡ್ಲಘಟ್ಟ ವೃತ್ತದಲ್ಲಿ ಸಮಾವೇಶಗೊಂಡರು. ಅಲ್ಲಿಂದ ಪ್ರತಿಭಟನಾ ಮೆರವಣಿಗೆ ಆರಂಭವಾಯಿತು. ನಾನಾ ಘೋಷಣೆಗಳೊಂದಿಗೆ ಫ್ಲೆಕ್ಸ್‌ಗಳನ್ನು ಹಿಡಿದ ಜನರು ಹೋರಾಟದಲ್ಲಿ ಭಾಗಿಯಾದರು.

‘ಹೆಗಲ ಮೇಲೆ ಹೊತ್ತುಕೊಳ್ಳುತ್ತೇವೆ’: ‘ಮೂರನೇ ಹಂತದ ಶುದ್ಧೀಕರಣದ ವಿಚಾರವಾಗಿ ಮುಖ್ಯಮಂತ್ರಿ ಬಳಿಗೆ ನಿಯೋಗ ಹೋಗೋಣ ಎಂದು ಶಾಸಕರು ಹೇಳಿದ್ದರು. ಹೀಗೆ ಹೇಳಿಯೇ 10 ದಿನಗಳ ಮೇಲಾಗಿದೆ. ಸೌಜನ್ಯಕ್ಕೂ ನೀರಾವರಿ ಹೋರಾಟಗಾರರನ್ನು ಕರೆದು ಈ ಬಗ್ಗೆ ಚರ್ಚಿಸಿಲ್ಲ’ ಎಂದು ಸಂದೀಪ್ ರೆಡ್ಡಿ ತಿಳಿಸಿದರು.

‘ಒಂದಿಷ್ಟು ಜನರನ್ನು ಮುಂದೆ ಬಿಟ್ಟು ಶಾಸಕರು ಅಹಿಂದ ಪರದೆ ಹಿಂದೆ ಬಚ್ಚಿಟ್ಟುಕೊಳ್ಳುತ್ತಿದ್ದಾರೆ. ನೀವು ಮಾತ್ರ ಶುದ್ಧ ನೀರು ಕುಡಿಯಬೇಕು. ನಮ್ಮ ಅಹಿಂದ ಜನರು ಕೊಳಚೆ ನೀರು ಕುಡಿಯಬೇಕೆ. ನೀವು ಕ್ಷೇತ್ರಕ್ಕೆ ಶುದ್ಧ ನೀರು ತಂದರೆ, ಎಚ್.ಎನ್.ವ್ಯಾಲಿ ನೀರನ್ನು ಮೂರು ಹಂತದಲ್ಲಿ ಶುದ್ಧೀಕರಿಸಿ ಪೂರೈಸಿದರೆ ನಿಮ್ಮನ್ನು ಹೆಗಲ ಮೇಲೆ ಹೊತ್ತುಕೊಳ್ಳುತ್ತೇವೆ’ ಎಂದರು.

ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಹೋಬಳಿಯ ಬೆಟ್ಟದ ಸಾಲು

ಸಾಸಲು ಬೆಟ್ಟದಲ್ಲಿ ಕೊಂಬಿನ ಗೂಬೆ

• ನಟರಾಜ ನಾಗಸಂದ್ರ

ದೊಡ್ಡಬಳ್ಳಾಪುರ: ತಾಲ್ಲೂಕಿನ ಸಾಸಲು ಹೋಬಳಿಯ ಬೆಟ್ಟದ ಸಾಲಿನಲ್ಲಿ ಅಪರೂಪದ ಕೊಂಬಿನ ಗೂಬೆಯ ಕುಟುಂಬ ಕಂಡು ಬಂದಿದೆ.

ಮರಿಯನ್ನು ಪೋಷಣೆ ಮಾಡುತ್ತಿರುವ ತಾಯಿ ಹಾಗೂ ಆಹಾರ ತಂದು ಕೊಡುತ್ತ ಸಮೀಪದ ಮರದಲ್ಲಿ ಕುಳಿತು ಕಾವಲು ಕಾಯುತ್ತಿರುವ ಗಂಡು ಗೂಬೆ ಕಂಡು ಬಂದಿದೆ.

ಸ್ಥಳೀಯವಾಗಿ ಕೊಂಬಿನ ಗುಮ್ಮ ಎಂದು ಕರೆಯಲಾಗುವ ಈ ಗೂಬೆ ಇಂಡಿಯನ್ ಗ್ರೇಟ್ ಹಾರನ್ಸ್ ಔಲ್ ಅಥವಾ ಇಂಡಿಯನ್ ಈಗಲ್ ಔಲ್ ಎಂದು ಚಿರಪರಿಚಿತ. ವಾಮಾಚಾರದಲ್ಲಿ ಬಳಸಲು ಕೊಂಬಿನ ಗೂಬೆಗಳನ್ನು ಬೇಟೆಯಾಡುವ ಕಾರಣ ಇದರ ಸಂತತಿ ಕ್ಷೀಣಿಸುತ್ತಿದೆ.

ಸಾಮಾನ್ಯವಾಗಿ ಗರುಡನ ಗಾತ್ರದ ಕೊಂಬಿನ ಗೂಬೆ ಬಯಲು ಪ್ರದೇಶದ ಕಲ್ಲು ಬೆಟ್ಟ, ಕುರುಚಲು ಪ್ರದೇಶದ ಕಾಡುಗಳಲ್ಲಿ ಕಾಣಿಸುವ ನಿಶಾಚರಿ.

ಪಾದಗಳವರೆಗೂ ಪುಕ್ಕ ಮುಚ್ಚಿಕೊಂಡಿದ್ದು, ಬೂದು ಬಣ್ಣದ ಎದೆಯ ಮೇಲೆ ಕಪ್ಪು ಗೀರುಗಳ ಮಚ್ಚೆ ಇರುತ್ತದೆ.

ರಾತ್ರಿ ಇಲಿ, ಹಾವು, ನಿದ್ರಿಸುತ್ತಿರುವ ಹಕ್ಕಿ, ನೀರಿನ ಬಳಿಯ ಕಪ್ಪೆ, ಮೀನು, ಏಡಿ ಇತ್ಯಾದಿ ಜಲಚರಗಳನ್ನು ಹಿಡಿದು ತಿನ್ನುತ್ತದೆ.

ನವೆಂಬರ್‌ನಿಂದ ಏಪ್ರಿಲ್‌ವರೆಗೆ ಗೂಡು ಕಟ್ಟಿ ಮೊಟ್ಟೆ ಇಟ್ಟು, ಮರಿ ಮಾಡುತ್ತದೆ.



ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಹೋಬಳಿಯ ಬೆಟ್ಟದ ಸಾಲಿನಲ್ಲಿ ಅಮ್ಮನ ಮಡಲಿನಲ್ಲಿ ಕೊಂಬಿನ ಗೂಬೆ ಮರಿ

ಯುವತಿಗೆ ಕಿರುಕುಳ: ಬಂಧನ

ಕೋ-ಲಿವಿಂಗ್ ಪಿ.ಜಿ.ಯಲ್ಲಿ ವಾಸ: ಹಲ್ಲೆ ಯತ್ನದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋ-ಲಿವಿಂಗ್ ಪಿ.ಜಿ.ಯಲ್ಲಿ ವಾಸವಾಗಿದ್ದ ಯುವತಿಗೆ ಕಿರುಕುಳ ನೀಡಿದ ಆರೋಪಿಯನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದೆಹಲಿಯ ನೋಯ್ಡಾದ ಮನು ಶರ್ಮಾ(32) ಬಂಧಿತ. ಆರೋಪಿ ದೊಮ್ಮಲೂರಿನಲ್ಲಿರುವ ಪೇಯಿಂಗ್ ಗೆಸ್ಟ್(ಪಿ.ಜಿ)ನಲ್ಲಿ ವಾಸವಾಗಿದ್ದ ಯುವತಿಗೆ ಕಿರುಕುಳ ನೀಡಿದ್ದ. ಈ ಸಂಬಂಧ ಸಂತ್ರಸ್ತೆ ನೀಡಿದ ದೂರಿನ ಆಧಾರದಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ದೊಮ್ಮಲೂರಿನಲ್ಲಿ ಯುವಕರು ಮತ್ತು ಯುವತಿಯರು ವಾಸವಿರುವ ಕೋ-ಪಿಜಿ ಇದೆ. ಮನುಶರ್ಮಾ ಮತ್ತು ಯುವತಿ ಕೆಲ ತಿಂಗಳಿಂದ ಈ ಪೇಯಿಂಗ್ ಗೆಸ್ಟ್‌ನಲ್ಲಿ ವಾಸವಾಗಿದ್ದಾರೆ. ಆರೋಪಿ ತನ್ನೊಂದಿಗೆ ಸಂಬಂಧ ಇಟ್ಟುಕೊಳ್ಳುವಂತೆ ಕೆಲ ದಿನಗಳಿಂದ ಸಂತ್ರಸ್ತೆಗೆ ಒತ್ತಾಯಿಸಿದ್ದಾನೆ. ಅದಕ್ಕೆ ಆಕೆ ನಿರಾಕರಿಸಿದ್ದರು ಎಂದು ತಿಳಿಸಿದರು.

ಇದರಿಂದ ಕೋಪಗೊಂಡ ಆರೋಪಿ, ಕೆಲ ದಿನಗಳ ಹಿಂದೆ ಸ್ನೂಕರ್ ಆಡುತ್ತಿದ್ದ ಯುವತಿ ಬಳಿ ಬಂದು, ಜಗಳ ಮಾಡಿದ್ದಾನೆ. ಸ್ನೂಕರ್ ಸ್ಟಿಕ್ ಹಾಗೂ ಬಾಲ್‌ಗಳನ್ನು ಎಸೆದು, ಆಕೆಯ ಮೇಲೆ ಹಲ್ಲೆಗೆ ಯತ್ನಿಸಿದ್ದಾನೆ ಎಂದು ಪೊಲೀಸರು ತಿಳಿಸಿದರು. ಈ ದೃಶ್ಯಗಳು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಬಳಿಕ ಇತರೆ ಯುವಕರು ಗಲಾಟೆ ಬಿಡಿಸಿ ಆರೋಪಿಯನ್ನು ಸ್ಥಳದಿಂದ ಕಳುಹಿಸಿದ್ದಾರೆ. ಆದರೆ, ಆರೋಪಿಯ ದೌರ್ಜನ್ಯ ಹೆಚ್ಚಾಗಿದ್ದರಿಂದ ಸಂತ್ರಸ್ತೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು, ಘಟನಾ ಸ್ಥಳದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯಗಳನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪತ್ನಿ ಆತ್ಮಹತ್ಯೆ: ಪತಿ, ಮಾವನ ಸೆರೆ

ಯಲಹಂಕ ನ್ಯೂಟೌನ್‌ನ ಬೃಂದಾವನ ಲೇಔಟ್‌ನ ಮನೆಯಲ್ಲಿ ನೇಣು ಹಾಕಿಕೊಂಡು ಶ್ರುತಿ (24) ಎಂಬವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತಳ ಪೋಷಕರು ನೀಡಿರುವ ದೂರು ಆಧರಿಸಿ, ಪತಿ ಹಾಗೂ ಮಾವನನ್ನು ಪೊಲೀಸರು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ.

ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ಶ್ರುತಿ, ತಮ್ಮದೇ ಊರಿನ ಪವನ್ ಕಲ್ಯಾಣ್ ಎಂಬಾತನನ್ನು 2024ರ ಡಿಸೆಂಬರ್‌ನಲ್ಲಿ ಮದುವೆಯಾಗಿದ್ದರು. ದಂಪತಿ, ಬೃಂದಾವನ ಲೇಔಟ್‌ನ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಪವನ್, ಖಾಸಗಿ ಬ್ಯಾಂಕ್ ಉದ್ಯೋಗಿ ಎಂದು ಪೊಲೀಸರು ತಿಳಿಸಿದ್ದಾರೆ.

‘ಪವನ್ ಮತ್ತು ಆತನ ಪೋಷಕರು ಶ್ರುತಿಗೆ ವರದಕ್ಷಿಣೆ ಕಿರುಕುಳ ನೀಡುತ್ತಿದ್ದರು. ತವರು ಮನೆಯಿಂದ ಹಣ ತರುವಂತೆ ಪೀಡಿಸುತ್ತಿದ್ದರು. ಹಣಕಾಸು ವಿಚಾರವಾಗಿ ಪತ್ನಿಯ ಜತೆ ಆಗಾಗ್ಗೆ ಜಗಳವಾಡುತ್ತಿದ್ದ. ಶ್ರುತಿ ಅವರ ಪೋಷಕರು ಹಲವು ಬಾರಿ ರಾಜಿ ಪಂಚಾಯಿತಿ ಮಾಡಿ, ಬುದ್ಧಿಮಾತು ಹೇಳಿದ್ದರು. ಆದರೂ ಆತ ಕಿರುಕುಳ ಮುಂದುವರಿಸಿದ್ದ. ಇದರಿಂದ ಮನನೊಂದಿದ್ದ ಆಕೆ, ಪತಿ ಹೊರಗೆ ಹೋಗಿದ್ದಾಗ ಮನೆಯಲ್ಲಿ ನೇಣು ಹಾಕಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

‘ಮಗಳು ಆತ್ಮಹತ್ಯೆ ಮಾಡಿಕೊಂಡಿಲ್ಲ. ಆಕೆಯ ಸಾವಿನ ಬಗ್ಗೆ ಅನುಮಾನವಿದೆ. ಪವನ್ ಮತ್ತು ಪೋಷಕರು ವರದಕ್ಷಿಣೆ ಹಣಕ್ಕಾಗಿ ಮಗಳನ್ನು ಕೊಲೆ ಮಾಡಿದ್ದಾರೆ. ಶ್ರುತಿಯ ಕುತ್ತಿಗೆ ಬಿಗಿದು ಕೊಲೆ ಮಾಡಿ ಆತ್ಮಹತ್ಯೆ ಎಂದು ಬಿಂಬಿಸಲು ನೇಣು ಹಾಕಲಾಗಿದೆ’ ಎಂದು ಶ್ರುತಿ ಪೋಷಕರು ದೂರು ಕೊಟ್ಟಿದ್ದಾರೆ.

ವರದಕ್ಷಿಣೆ ಸಾವು ಆರೋಪದಡಿ ಪ್ರಕರಣ ದಾಖಲಿಸಿಕೊಂಡು ಪವನ್ ಮತ್ತು ಆತನ ತಂದೆಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಜೈನ್ ವಿ.ವಿ.ಗೆ ಪ್ರಶಸ್ತಿ ‘ಡಬಲ್’

ಕೋಲಾರ: ಜೈನ್ ವಿಶ್ವವಿದ್ಯಾಲಯದ ಪುರುಷರ ಮತ್ತು ಮಹಿಳೆಯರ ತಂಡಗಳು ಇಲ್ಲಿ ನಡೆದ ಅಖಿಲ ಭಾರತ ಅಂತರ ಕಾಲೇಜು ಆಹ್ವಾನಿತ ‘ಚಿನ್ನದ ನಾಡು ಕಪ್- 2026’ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡವು.

ಚಿನ್ನದ ನಾಡು ಬ್ಯಾಸ್ಕೆಟ್‌ಬಾಲ್ ಕ್ಲಬ್ ಆಶ್ರಯದಲ್ಲಿ ನಗರದ ಮಿನಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಪುರುಷರ ವಿಭಾಗದ ಫೈನಲ್‌ನಲ್ಲಿ ಜೈನ್ ಕಾಲೇಜು ತಂಡವು 79-63ರಿಂದ ಕ್ರೈಸ್ಟ್ ಕಾಲೇಜು ತಂಡವನ್ನು ಸೋಲಿಸಿತು.

ಚಾಂಪಿಯನ್ ಜೈನ್ ತಂಡ ₹1 ಲಕ್ಷ ಬಹುಮಾನವನ್ನು ಜೇಬಿಗಿಳಿಸಿತು. ರನ್ನರ್ಸ್‌ಅಪ್ ಕ್ರೈಸ್ಟ್ ತಂಡ ₹75 ಸಾವಿರ ಬಹುಮಾನ ಪಡೆಯಿತು. ಮೂರನೇ ಸ್ಥಾನ ತಮಿಳುನಾಡಿನ ಪಿಎಸ್‌ಜಿ ಕಾಲೇಜು ತಂಡದ ಪಾಲಾಯಿತು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಜೈನ್ ವಿ.ವಿ ತಂಡವು 68-55ರಿಂದ ತಮಿಳುನಾಡಿನ ವೈಷ್ಣವ ಕಾಲೇಜು ತಂಡವನ್ನು ಸೋಲಿಸಿತು.

ತಮಿಳುನಾಡಿನಲ್ಲಿ ಆರೋಪಿ ಸೆರೆ

ಪೂಜೆ ಸೋಗಿನಲ್ಲಿ ಐ.ಟಿ ಅಧಿಕಾರಿಗೆ ಚಿನ್ನಾಭರಣ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿಯಲ್ಲಿ ಬಡ್ತಿಗಾಗಿ ಪೂಜೆ ಮಾಡುವುದಾಗಿ ನಂಬಿಸಿ ಆದಾಯ ತೆರಿಗೆ ಇಲಾಖೆಯ ಅಧಿಕಾರಿ ಒಬ್ಬರಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಪಡೆದು, ವಂಚಿಸಿದ್ದ ಗಿಳಿಶಾಸ್ತ್ರ ಹೇಳುವ ವ್ಯಕ್ತಿಯನ್ನು ಭಾರತೀನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಶೇಖರ್

ತಮಿಳುನಾಡಿನಲ್ಲಿ ತಲೆಮರೆಸಿ ಕೊಂಡಿದ್ದ ಆರೋಪಿ ಶೇಖರ್ ಎಂಬಾತನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ. ಆಭರಣಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಪೂಜೆ ಮಾಡುವುದಾಗಿ 194 ಗ್ರಾಂ ತೂಕದ ಚಿನ್ನಾಭರಣ ಹಾಗೂ 1 ಕೆ.ಜಿ 300 ಗ್ರಾಂ ಬೆಳ್ಳಿ ಆಭರಣಗಳನ್ನು ಪಡೆದು ಆರೋಪಿ ಪರಾರಿಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ವಂಚನೆಗೊಳಗಾದ 55 ವರ್ಷದ ಅಧಿಕಾರಿ ನೀಡಿದ್ದ ದೂರಿನ ಆಧಾರದಲ್ಲಿ ಭಾರತೀನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ನಗರದ ಆದಾಯ ತೆರಿಗೆ ಇಲಾಖೆ ಕಚೇರಿಯಲ್ಲಿ ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗೆ ಡಿಸೆಂಬರ್‌ನಲ್ಲಿ ಭಾರತೀನಗರದ ಶ್ರೀ ಸರ್ಕಲ್ ಬಳಿ ರಸ್ತೆ ಬದಿ ಕುಳಿತಿದ್ದ ಗಿಳಿಶಾಸ್ತ್ರ ಹೇಳುವ ಶೇಖರ್ ಎಂಬಾತನ ಪರಿಚಯವಾಗಿದೆ.

‘ಮುಖ ನೋಡಿ ಜಾತಕ ಹೇಳ್ತೀನಿ, ಜೀವನ ಸುಧಾರಿಸಬೇಕಾದರೆ ಪೂಜೆ ಮಾಡಿಸಬೇಕು’ ಎಂದು ನಂಬಿಸಿದ್ದ ಶೇಖರ್, ಮೊದಲು ₹50 ಸಾವಿರ ರೂಪಾಯಿ ಪಡೆದು ಸಣ್ಣದೊಂದು ಪೂಜೆ ಮಾಡಿದ್ದ. ಬಳಿಕ ಮತ್ತೆ ಕರೆ ಮಾಡಿದ್ದ ಆರೋಪಿ, ‘ವೃತ್ತಿಯಲ್ಲಿ ಬಡ್ತಿ, ವರ್ಗಾವಣೆಯಾಗಬೇಕು ಎಂದರೆ ದೊಡ್ಡ ಪೂಜೆ ಮಾಡಬೇಕು, ಮನೆಯಲ್ಲಿರುವ ಚಿನ್ನಾಭರಣ ತಗೊಂಡು ಬನ್ನಿ’ ಎಂದು ತಿಳಿಸಿದ್ದ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಆರೋಪಿಯ ಮಾತು ನಂಬಿದ್ದ ಅಧಿಕಾರಿ ಸುಮಾರು ₹3.10 ಲಕ್ಷ ಮೌಲ್ಯದ ಆಭರಣವನ್ನು ಪೂಜೆಗಾಗಿ ಆತನಿಗೆ ನೀಡಿದ್ದರು. ಒಂದೇ ದಿನದಲ್ಲಿ ಪೂಜೆ ಮುಗಿಸಿ ಚಿನ್ನಾಭರಣ ವಾಪಸ್ ಕೊಡುವುದಾಗಿ ಹೇಳಿದ್ದ ಶೇಖರ್, ನಂತರ ‘ನಾಳೆ, ನಾಡಿದ್ದು ಬನ್ನಿ’ ಎಂದು ಸಬೂಬು ಹೇಳಲಾರಂಭಿಸಿದ್ದ. ಅನುಮಾನಗೊಂಡ ಅಧಿಕಾರಿ ಆರೋಪಿ ಕುಳಿತಿದ್ದ ಶ್ರೀ ಸರ್ಕಲ್ ಬಳಿ ಹೋಗಿ ನೋಡಿದಾಗ ಅಲ್ಲಿಂದ ಪರಾರಿಯಾಗಿದ್ದ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ವಂಚನೆಗೆ ಒಳಗಾಗಿರುವುದನ್ನು ಅರಿತ ಅಧಿಕಾರಿ, ಠಾಣೆಗೆ ದೂರು ನೀಡಿದ್ದರು. ಆರೋಪಿ ವಿರುದ್ಧ ಇತರೆಡೆ ಯಾವುದಾದರೂ ವಂಚನೆ ಪ್ರಕರಣ ದಾಖಲಾಗಿದೆಯೇ ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನಿಶಾದ್‌ಗೆ ಐದನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಯಾರಾ ಹೈಜಂಪ್ ಪಟು ನಿಶಾದ್ ಕುಮಾರ್ ಅವರು ರಾಷ್ಟ್ರೀಯ ಓಪನ್ ಜಂಪ್ ಸ್ಪರ್ಧೆಯಲ್ಲಿ ಭಾಗವಹಿಸಿ, ಐದನೇ ಸ್ಥಾನ (2.10 ಮೀ.) ಪಡೆದರು. ಪ್ಯಾರಾ ಅಥ್ಲೀಟ್ ಆಗಿಯೂ, ಈ ಕೂಟದಲ್ಲಿ ಇತರ ಅಥ್ಲೀಟ್‌ಗಳಂತೆಯೇ ಸ್ಪರ್ಧೆಗಿಳಿದಿದ್ದು ಎಲ್ಲರ ಗಮನ ಸೆಳೆಯಿತು.

ಹಿಮಾಚಲ ಪ್ರದೇಶದ 26 ವರ್ಷ ವಯಸ್ಸಿನ ನಿಶಾದ್ ಅವರು ನಗರದ ಅಂಜು ಬಾಬಿ ಜಾರ್ಜ್ ಕ್ರೀಡಾ ಪ್ರತಿಷ್ಠಾನದ ಮೈದಾನದಲ್ಲಿ ನಡೆದ ಸ್ಪರ್ಧೆಯಲ್ಲಿ 2.10 ಮೀ. ಜಿಗಿದರು.

ಪ್ಯಾರಾಲಿಂಪಿಕ್ ಬೆಳ್ಳಿ ಪದಕ ವಿಜೇತ ನಿಶಾದ್ ಅವರು ದೆಹಲಿಯಲ್ಲಿ ಶನಿವಾರ ನಡೆಯಲಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಪ್ರಿಕ್ಸ್ ಕೂಟದಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ. ಹೀಗಾಗಿ, ಪೂರ್ವಭಾವಿ ಅಭ್ಯಾಸಕ್ಕೆಂದು ಅವರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು ಎನ್ನಲಾಗಿದೆ.

ಹೈದರಾಬಾದ್ ರೇಸ್

ನಾನ್ ಪರೇಲ್ ಗೆಲ್ಲುವ ನಿರೀಕ್ಷೆ

ಟೈಮ್ ಅಂಡ್ ಪ್ಲೇಸ್ ಪ್ಲೇಟ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾನ್ ಪರೇಲ್ ಗೆಲ್ಲುವ ನಿರೀಕ್ಷೆಯಿದೆ.
ಮಧ್ಯಾಹ್ನ 3:00ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಲಾ ಪ್ಲೂರಿಯರ್ 4, ಡಬಲ್ ಬಬಲ್ 1, ಕ್ವಿಂಟ್ ಎಸೆನ್ಸಿಯಲ್ 13
2ನೇ ರೇಸ್: ಕೋರ್ಟೆ ಮಡೆರಾ 5, ಮಿಸ್ ಸ್ಮೈಲಿ ಏಂಜಲ್ 3, ಸರ್ಟಾನಿಟಿ 6
3ನೇ ರೇಸ್: ಅಮೆರಿಕನ್ ಗ್ಯಾಂಗ್‌ಸ್ಟರ್ 9, ವಿಸ್ಲ್‌ಡೌನ್ 8, ಅರಿಜೋನಾ ಸನ್ 1
4ನೇ ರೇಸ್: ಟೂಟ್ಸಿ ಡಾರ್ಲಿಂಗ್ 12, ಚಾಲೆಂಜರ್ 2, ಎಂಪರರ್ಸ್ ಚಾರ್ಮ್ 6
5ನೇ ರೇಸ್: ಗಾರ್‌ಫಂಕ್ಲ್ 1, ಟ್ವಿಲೈಟ್ ಕಿಂಗ್ 4, ನಾರ್ಥರನ್ ಸ್ಕೈ 7
6ನೇ ರೇಸ್: ನಾನ್ ಪರೇಲ್ 3, ಅಶೋಕ 2, ಎಸ್ಪಿಯೊನೇಝ್ 5
7ನೇ ರೇಸ್: ಮೂಪಸರ್ 7, ಸ್ಟಾರ್ ಕ್ರೂಝ್ 3, ಡೆಕ್ಕನ್ ರೇಂಜರ್ 8

ಉತ್ತಮ ಬೆಟ್: ಟೂಟ್ಸಿ ಡಾರ್ಲಿಂಗ್

ಜಾಕ್‌ಪಾಟ್	1ನೇ ಟ್ರಿಬಲ್	3ನೇ ಟ್ರಿಬಲ್
3,4,5,6,7	2,3,4	5,6,7

ಜ್ಞಾನಪೀಠ ಪ್ರಶಸ್ತಿ: ವೈರಮುತ್ತು ಆಯ್ಕೆಗೆ ಸಂಘಟನೆಗಳ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೀಟೂ’ ಆರೋಪ ಹೊತ್ತಿರುವ ತಮಿಳು ಕವಿ ವೈರಮುತ್ತು ಅವರನ್ನು ‘ಜ್ಞಾನಪೀಠ ಪ್ರಶಸ್ತಿ’ಗೆ ಆಯ್ಕೆ ಮಾಡಿರುವುದನ್ನು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಖಂಡಿಸಿದ್ದು, ಆಯ್ಕೆಯನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದೆ.

‘ಈವರೆಗೆ ತಮಿಳುನಾಡಿನ 18 ಮಹಿಳೆಯರು ವೈರಮುತ್ತು ಅವರು ನೀಡಿದ ಲೈಂಗಿಕ ಕಿರುಕುಳದ ಬಗ್ಗೆ ಸಾರ್ವಜನಿಕವಾಗಿ ಆರೋಪಿಸಿದ್ದಾರೆ. ಅವರು ಮಹಿಳೆಯರಿಗೆ ಮಾನಸಿಕ ಹಿಂಸೆ ನೀಡಿರುವ ಆರೋಪಗಳು ವರದಿಯಾಗಿವೆ. ತಮಿಳು ಗಾಯಕಿ ಚಿನ್ಮಯಿ ಶ್ರೀಪಾದ ಅವರು ವೈರಮುತ್ತು ಅವರಿಗೆ ಶಿಕ್ಷೆಯಾಗಬೇಕೆಂದು ನಿರಂತರವಾಗಿ ಹೋರಾಡುತ್ತಿದ್ದಾರೆ. ಅನೇಕ ಮಹಿಳೆಯರು ಅವರ ವಿರುದ್ಧ ಲೈಂಗಿಕ ಕಿರುಕುಳದ ಬಗ್ಗೆ ಆರೋಪಿಸಿದ್ದಾರೆ. ಆದ್ದರಿಂದ ಅವರ ಆಯ್ಕೆ ಸರಿಯಲ್ಲ’ ಎಂದು ಒಕ್ಕೂಟದ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ.

‘ಜ್ಞಾನಪೀಠದಂತಹ ದೇಶದ ಅತ್ಯುನ್ನತ ಸಾಹಿತ್ಯ ಗೌರವಕ್ಕೆ ಅವರನ್ನು ಆಯ್ಕೆ ಮಾಡಿರುವುದು ವಿಷಾದಕರ. ಇದು ‘ಜ್ಞಾನಪೀಠಕ್ಕೆ ಕಪ್ಪು ಚುಕ್ಕೆ’ ಎಂಬುದು ಸಂತ್ರಸ್ತರ ಆರೋಪವಾಗಿದೆ. ಅಷ್ಟೊಂದು ಆರೋಪ ಇರುವ ವ್ಯಕ್ತಿಯನ್ನು ತನಿಖೆಗೆ ಒಳಪಡಿಸದೆ, ಈಗ ಮನ್ನಣೆ ನೀಡುತ್ತಿರುವುದು ಭಾರತೀಯ ಹೆಣ್ಣುಮಕ್ಕಳಿಗೆ ಮಾಡುತ್ತಿರುವ ಅವಮಾನವಾಗಿದೆ’ ಎಂದಿದ್ದಾರೆ.

ಮರು ಪರಿಶೀಲನೆಗೆ ಮನವಿ

ವೈರಮುತ್ತು ಅವರಿಗೆ ಘೋಷಣೆಯಾಗಿರುವ ‘ಜ್ಞಾನಪೀಠ ಪ್ರಶಸ್ತಿ’ಯನ್ನು ಮರುಪರಿಶೀಲಿಸಬೇಕೆಂದು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕ ಶಾಖೆಯು ಭಾರತೀಯ ಜ್ಞಾನಪೀಠ ಆಯ್ಕೆ ಸಮಿತಿಯ ಅಧ್ಯಕ್ಷರಿಗೆ ಪತ್ರ ಬರೆದಿದೆ.

‘ಜ್ಞಾನಪೀಠದಂತಹ ಪ್ರಶಸ್ತಿಯು ವಿವಾದ ಮತ್ತು ಕಳಂಕಗಳಿಗೆ ಹೊರತಾಗಿರಬೇಕು ಎಂಬುದು ನಮ್ಮ ಕಳಕಳಿಯಾಗಿದೆ. ಮಹಿಳೆಯರ ಘನತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ವೈರಮುತ್ತು ಅವರಿಗೆ ಘೋಷಿಸಿರುವ ಪ್ರಶಸ್ತಿಯನ್ನು ಮರುಪರಿಶೀಲಿಸಬೇಕು’ ಎಂದು ಪರಿಷತ್ ಅಧ್ಯಕ್ಷ ಎಸ್.ಜಿ. ಕೋಟಿ ಮನವಿ ಮಾಡಿದ್ದಾರೆ.

ನಾವ್ ಎಐ ತಂತ್ರಾಂಶ ಬಳಸಿ ಕನ್ನಡಕ್ಕೆ ಕೃತಿ ಅನುವಾದ

‘ಭಾರತ ಮರೆತ ಗಾನ ಕೋಗಿಲೆ ಗೌಹರ್ ಜಾನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶತಮಾನದ ಹಿಂದೆಯೇ ಶಾಸ್ತ್ರೀಯ ಸಂಗೀತದ ಮೂಲಕ ಜಗತ್ತಿನ ಗಮನ ಸೆಳೆದು ಭಾರತದ ಹಿರಿಮೆ ಎತ್ತಿ ಹಿಡಿದಿದ್ದ ಗೌಹರ್ ಜಾನ್ ಅವರ ಬದುಕಿನ ಯಾನವನ್ನು ಅನಾವರಣಗೊಳಿಸುವ ಕೃತಿಯನ್ನು ಭಾನುವಾರ ಜನಾರ್ಪಣೆಗೊಳಿಸಲಾಯಿತು.

‘ಲೇಖಕ ವಿಕ್ರಮ್ ಸಂಪತ್ ಅವರು ಇಂಗ್ಲಿಷ್‌ನಲ್ಲಿ ರಚಿಸಿರುವ ಕೃತಿಯನ್ನು ‘ನಾವ್ ಎಐ ತಂತ್ರಾಂಶ’ ಬಳಸಿ ‘ನನ್ನ ಹೆಸರು ಗೌಹರ್ ಜಾನ್’ ಹೆಸರಿನಲ್ಲಿ ಕನ್ನಡದಲ್ಲಿ ಪ್ರಕಟಿಸಲಾಗಿದೆ. ಭಾರತೀಯ ಭಾಷೆಯ ಕೃತಿಯೊಂದನ್ನು ಎಐ ತಂತ್ರಾಂಶ ಬಳಸಿ ಅನುವಾದ ಮಾಡಿರುವುದು ಇದೇ ಮೊದಲು.

ಜಯನಗರದ ಯುವಪಥದ ವಿವೇಕ ಸಭಾಂಗಣದಲ್ಲಿ ಸಾಹಿತ್ಯ ಪ್ರಕಾಶನದಿಂದ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಗೌಹರ್ ಜಾನ್ ಎನ್ನುವ ಅಪ್ರತಿಮ ಕಲಾವಿದೆಯ ಕುರಿತು ಚರ್ಚೆಗಳು ನಡೆದವು.

ಮೂಲ ಇಂಗ್ಲಿಷ್ ಕೃತಿಯ ಲೇಖಕ ವಿಕ್ರಮ್ ಸಂಪತ್ ಮಾತನಾಡಿ, ‘ಕೇವಲ 57 ವರ್ಷ ಬದುಕಿದ್ದ ಗೌಹರ್ ಅವರು ಕೋಲ್ಕತ್ತದಲ್ಲಿದ್ದುಕೊಂಡು ದೊಡ್ಡ ಸಾಧನೆ ಮಾಡಿದವರು. ಹೊರ ದೇಶಗಳಲ್ಲೂ ಜನಪ್ರಿಯರಾಗಿ ಆ ಕಾಲಕ್ಕೆ ಬಹುಬೇಡಿಕೆಯ ಕಲಾವಿದೆಯೂ ಆದರು. ಆ ನಂತರ ಮೈಸೂರಿಗೆ ಬಂದು ಇಲ್ಲಿಯೇ ಅನಾಮಧೇಯರಾಗಿ ನಿಧನರಾದರು. ಅವರ ಸಾವಿಗೆ ನಿಖರ ಕಾರಣವೂ ತಿಳಿದಿಲ್ಲ’ ಎಂದರು.



ನಗರದಲ್ಲಿ ಭಾನುವಾರ ಸಾಹಿತ್ಯ ಪ್ರಕಾಶನ ಆಯೋಜಿಸಿದ್ದ ವಿಕ್ರಮ್ ಸಂಪತ್ ಅವರ ‘ನನ್ನ ಹೆಸರು ಗೌಹರ್ ಜಾನ್’ ಪುಸ್ತಕ ಜನಾರ್ಪಣೆ ಕಾರ್ಯಕ್ರಮದಲ್ಲಿ ವಿಕ್ರಮ್ ಸಂಪತ್ (ಎಡದಿಂದ ಎರಡನೇಯವರು) ಮೈಸೂರು ಮಂಜುನಾಥ ಅವರನ್ನು ಸನ್ಮಾನಿಸಿ ಗೌರವಿಸಿದರು. (ಎಡದಿಂದ) ಗೌರಿ ಎಸ್. ಜೋಶಿ, ರೋಹಿಣಿ ಶ್ರೀವತ್ಸ, ಜಿ.ಎಲ್. ಶೇಖರ್, ಸಾಹಿತ್ಯ ಪ್ರಕಾಶನದ ಎಂ.ಎ.ಸುಬ್ರಹ್ಮಣ್ಯ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

‘ತಂತ್ರಜ್ಞಾನವೇ ಬೆಳೆಯದ ನೂರು ವರ್ಷದ ಹಿಂದೆ ಗ್ರಾಮಾಫೋನ್ ಮೂಲಕ ಇವರ ಹಾಡು ಕೇಳಲು, ಕಾರ್ಯಕ್ರಮಗಳನ್ನು ಆಯೋಜಿಸಲು ಪ್ರಯತ್ನಿಸುತ್ತಿದ್ದವರು ಹಲವರು. ಗಾಂಧೀಜಿ ಕೂಡ ಕಾಂಗ್ರೆಸ್‌ನ ಸಹಾಯಾರ್ಥವಾಗಿ ಕಾರ್ಯಕ್ರಮ ನೀಡುವಂತೆ ಗೌಹರ್ ಜಾನ್ ಅವರನ್ನು ಕೋರಿದ್ದರು. ತಾವು ಬಂದರೆ ಮಾತ್ರ ಕಾರ್ಯಕ್ರಮ ಎಂದು ಗಾಂಧೀಜಿಗೆ ಷರತ್ತು ವಿಧಿಸಿದ್ದರು. ಗಾಂಧೀಜಿ ಬಾರದೇ ಇದ್ದಾಗ ಕಾರ್ಯಕ್ರಮದಿಂದ ಸಂಗ್ರಹವಾಗಿದ್ದ ₹12 ಸಾವಿರದಲ್ಲಿ ಬರೀ ₹6 ಸಾವಿರವನ್ನು ಗೌಹರ್ ನೀಡಿದ್ದರು’ ಎಂದು ಕೆಲ ಆಸಕ್ತಿದಾಯಕ ಅಂಶಗಳನ್ನು ಹೇಳಿದರು.

ಸಂಸ್ಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಮೈಸೂರು ಮಂಜುನಾಥ್ ಮಾತನಾಡಿ, ‘ಯಾವುದೇ ಕಲಾವಿದರಾಗಲಿ ಅವರ ಸಾರ್ವಜನಿಕ, ಖಾಸಗಿ ಬದುಕಿನ ಬಗ್ಗೆ ಎಚ್ಚರಿಕೆ ವಹಿಸಲೇಬೇಕು. ಅಪ್ರತಿಮ ಕಲಾವಿದೆಯಾಗಿದ್ದ ಗೌಹರ್ ಜಾನ್ ಅವರು ಮುತುವರ್ಜಿಯಿಂದ ಬದುಕಿದ್ದರೆ ಭಾರತದ ಜನ ಮರೆಯುತ್ತಿರಲಿಲ್ಲ’ ಎಂದು ಹೇಳಿದರು.

ಕನ್ನಡಕ್ಕೆ ಅನುವಾದ ಮಾಡಿರುವ ಗೌರಿ ಎಸ್.ಜೋಶಿ, ಜಿ.ಎಲ್. ಶೇಖರ್, ಮೈಕ್ರೋಸಾಫ್ಟ್ ಕಂಪನಿಯ ಎಂಜಿನಿಯರ್ ರೋಹಿಣಿ ಶ್ರೀವತ್ಸ, ಸಾಹಿತ್ಯ ಪ್ರಕಾಶನದ ಎಂ.ಎ.ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಏ.1ರಿಂದ ಅರಣ್ಯ ಇಲಾಖೆ ಹಂಗಾಮಿ ನೌಕರರ ಮುಷ್ಕರ

ಬೆಂಗಳೂರು: ಹೊರಗುತ್ತಿಗೆ ರದ್ದುಪಡಿಸಿ ಅರಣ್ಯ ಇಲಾಖೆಯಿಂದಲೇ ವೇತನ ನೀಡುವುದು ಸೇರಿದಂತೆ ತಮ್ಮ ಬೇಡಿಕೆಗಳ ಈಡೇರಿಗೆ ಆಗ್ರಹಿಸಿ ಏಪ್ರಿಲ್ 1 ರಿಂದ ಮುಷ್ಕರ ನಡೆಸಲು ವನ್ಯಜೀವಿ ವಿಭಾಗದ ಹಂಗಾಮಿ ನೌಕರರು ನಿರ್ಧರಿಸಿದ್ದಾರೆ. ರಾಜ್ಯದಲ್ಲಿ ಅರಣ್ಯ ಇಲಾಖೆಯ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಹಂಗಾಮಿ ನೌಕರರು ಕಳೆದ ನವೆಂಬರ್‌ನಲ್ಲಿ ಪ್ರತಿಭಟನೆ ನಡೆಸಿದ್ದರು. ಆಗ ಸರ್ಕಾರ ಬೇಡಿಕೆ ಈಡೇರಿಸುವ ಭರವಸೆ ನೀಡಿತ್ತು. ಆದರೆ, ಈವರೆಗೂ ಸ್ಪಂದಿಸಿಲ್ಲದ. ಕಾರಣ ಮುಷ್ಕರ ನಡೆಸಲು ಮುಂದಾಗಿದ್ದಾರೆ.

'ಈ ಬಾರಿ ಬಂಡೀಪುರದಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿದ್ದೇವೆ. ಸರ್ಕಾರದಿಂದ ಲಿಖಿತ ಭರವಸೆ ಸಿಗುವವರೆಗೂ ಮುಷ್ಕರ ನಿಲ್ಲಿಸಲ್ಲ' ಎಂದು ರಾಜ್ಯ ಅರಣ್ಯ ಇಲಾಖೆ ವನ್ಯಜೀವಿ ಘಟಕಗಳ ದಿನಗೂಲಿ, ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ಎ.ಎಂ. ನಾಗರಾಜು ತಿಳಿಸಿದರು.

'ಖೋಟಾನೋಟು' ಹೆಸರಿನಲ್ಲಿ ವಂಚನೆ

ಟ್ರಿಬ್ಲಿಂಗ್ ಆಮಿಷ: ಚಿತ್ರದುರ್ಗ ನಗರಸಭೆಯ ಮಾಜಿ ಸದಸ್ಯ ಬಂಧನ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ಕೋಟೆನಾಡಿನಲ್ಲಿ ಖೋಟಾ ನೋಟು ಹೆಸರಿನಲ್ಲಿ ವಂಚನೆ ಮತ್ತೆ ಸದ್ದು ಮಾಡಿದೆ. ಪ್ರಮುಖ ಆರೋಪಿ ಎನ್ನಲಾದ ನಗರಸಭೆ ಮಾಜಿ ಸದಸ್ಯ ಚಂದ್ರಶೇಖರ್ ಬಂಧಿತನಾಗಿದ್ದಾನೆ.

ಚಂದ್ರಶೇಖರ್ 4ನೇ ವಾರ್ಡ್‌ನಿಂದ ನಗರಸಭೆಗೆ 2 ಬಾರಿ (ಜೆಡಿಎಸ್) ಆಯ್ಕೆಯಾಗಿದ್ದು, ವಾರ್ಡ್‌ನಲ್ಲಿ ಹಲವು ಬಹುಮಹಡಿ ಕಟ್ಟಡ, ಮನೆಗಳಿವೆ. ಎಲ್ಲವೂ ಖಾಲಿ ಇದ್ದು, ಇವುಗಳಲ್ಲೇ ಖೋಟಾನೋಟು ದಂಧೆಯ ಕರಾಳಮುಖ ತೆರೆದುಕೊಳ್ಳುತ್ತದೆ.

ರಾಜ್ಯ, ಹೊರರಾಜ್ಯಗಳ ಗಿರಾಕಿಗಳನ್ನು ಕರೆಯಿಸಿ ಅವರು ಕೊಟ್ಟ



> ಚಂದ್ರಶೇಖರ್ ಮನೆಯಲ್ಲಿ ತಪಾಸಣೆ ನಡೆಸುವಾಗ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ. ಹೀಗಾಗಿ ಬಂಧಿಸಲಾಗಿದೆ. ತನಿಖೆ ನಡೆಯುತ್ತಿದೆ
> **ರಂಜಿತ್ ಕುಮಾರ್ ಬಂಡಾರು**, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಹಣಕ್ಕೆ 3 ಪಟ್ಟು ಖೋಟಾನೋಟು ಕೊಡುವುದಾಗಿ ನಂಬಿಸಿ ವಂಚಿಸುತ್ತಾನೆ ಎಂಬುದು ಈತನ ಮೇಲಿರುವ ಪ್ರಮುಖ ಆರೋಪ.ಮಾರ್ಚ್ 4ರಂದು ಚಂದ್ರಶೇಖರ್ ಮನೆ ಮೇಲೆ ದಾಳಿ ಮಾಡಿದ್ದ ಪೊಲೀಸರು, ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಬಂಧಿಸಿದ್ದಾರೆ. ಚಂದ್ರಶೇಖರ್ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದು ನಗರದಾದ್ಯಂತ ದಂಧೆಯ ವಿಚಾರವೇ ಚರ್ಚೆಯಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲೂ ಈ ವಿಚಾರ ಹರಿದಾಡುತ್ತಿದೆ.

ಮಾರ್ಚ್ 4ರಂದು ಮಂಗಳೂರಿನ ವ್ಯಕ್ತಿಯೊಬ್ಬ ಹಣ ಪಡೆಯಲು ಬಂದಾಗ ಪೊಲೀಸರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದರು ಎಂದು ಮೂಲಗಳು ತಿಳಿಸಿವೆ.

'ಪೊಲೀಸರ ಪ್ರೋತ್ಸಾಹದಿಂದಲೇ ಈ ದಂಧೆ ನಡೆಯುತ್ತದೆ. ಚಂದ್ರಶೇಖರ್ ಹಲವು ಬಾರಿ ಜೈಲಿಗೆ ಹೋಗಿದ್ದಾನೆ, ಗಡಿಪಾರು ಶಿಕ್ಷೆಯನ್ನೂ ಅನುಭವಿಸಿದ್ದಾನೆ. ಆದರೂ ಪ್ರಕರಣ ನಿಂತಿಲ್ಲ, ಪೊಲೀಸರ ವೈಫಲ್ಯವೇ ಇದಕ್ಕೆಲ್ಲಾ ಕಾರಣ' ಎಂದು ವಕೀಲ ಪ್ರತಾಪ್ ಜೋಗಿ ದೂರಿದರು.

ಸಿನಿಮೀಯ ಶೈಲಿಯ ಹಣ ಡಬ್ಲಿಂಗ್

ಖೋಟಾನೋಟು ಹೆಸರಿನಲ್ಲಿ ವಂಚನೆ ಪ್ರಕರಣ ನಗರದಲ್ಲಿ ಸಿನಿಮೀಯ ಶೈಲಿಯಲ್ಲಿ ನಡೆಯುತ್ತಿದೆ. ಗಿರಾಕಿಗಳು ಕೊಟ್ಟ ಹಣಕ್ಕೆ 2, 3 ಪಟ್ಟು (ಡಬ್ಲಿಂಗ್, ಟ್ರಿಬ್ಲಿಂಗ್) ಖೋಟಾನೋಟು ಕೊಡುವುದೇ ಪ್ರಕರಣದ ತಿರುಳು.

ಆದರೆ ವಾಸ್ತವವಾಗಿ ಆರೋಪಿ ಅಸಲಿ ನೋಟುಗಳನ್ನೇ ಕೊಡುತ್ತಾನೆ. ಹಣ ಪಡೆದವರು ಖೋಟಾನೋಟು ಎಂದು ತಿಳಿದು ಅವುಗಳನ್ನು ಚಲಾವಣೆ ಮಾಡುತ್ತಾರೆ. ಯಾವುದೇ ದೂರು ಬಾರದ ಕಾರಣ ಅವರು ಹೆಚ್ಚು ಹಣದಾಸೆಗೆ ಮತ್ತೆ ಬರುತ್ತಾರೆ. ಆರೋಪಿ ಆಶಯವೂ ಇದೇ ಆಗಿರುತ್ತದೆ.



ಚಂದ್ರಶೇಖರ್

2ನೇ ಬಾರಿಗೆ ಹೆಚ್ಚು ಹಣದೊಂದಿಗೆ ಗ್ರಾಹಕರು ಬಂದಾಗ ಆರೋಪಿ ಹಣದ ಸೂಟ್‌ಕೇಸ್ ತೋರಿಸುತ್ತಾನೆ. ಆದರೆ ಅಷ್ಟು ಹಣವಿರುವುದಿಲ್ಲ. ಕಾಗದದ ಕಂತೆಗಳ ಮೇಲ್ಭಾಗದಲ್ಲಿ ಒಂದಷ್ಟು ಅಸಲಿ ನೋಟುಗಳಿರಿಸಿ ಅದನ್ನೇ ಹಣವೆಂದು ನಂಬಿಸುತ್ತಾನೆ. ವ್ಯವಹಾರದ ವೇಳೆ ಆರೋಪಿಯೇ ಅಣಿಗೊಳಿಸಿದ ನಕಲಿ ಪೊಲೀಸರು ದಾಳಿ ಮಾಡುತ್ತಾರೆ. ಆಗ ಎಲ್ಲರೂ ಹಣ ಬಿಟ್ಟು ಓಡಿ ಹೋಗುತ್ತಾರೆ. ಹೀಗೆ ಗ್ರಾಹಕರನ್ನು ವಂಚಿಸಲಾಗುತ್ತದೆ ಎಂದು ಸ್ಥಳೀಯರು ದಂಧೆಯ ಕರಾಳ ಕತೆಯನ್ನು ತೆರೆದಿಡುತ್ತಾರೆ.

ಕಾರು ಅಪಘಾತ: ಮೂವರು ಆರ್‌ಎಸ್‌ಐಗಳ ಸಾವು

ಪ್ರಜಾವಾಣಿ ವಾರ್ತೆ

ಚಳ್ಳಕೆರೆ (ಚಿತ್ರದುರ್ಗ): ತಾಲ್ಲೂಕಿನ ಹೆಗ್ಗೆರೆ ಗೇಟ್ ಬಳಿ ಭಾನುವಾರ ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಮೂವರು ರಿಸರ್ವ್ ಸಬ್ ಇನ್‌ಸ್ಪೆಕ್ಟರ್‌ಗಳು (ಆರ್‌ಎಸ್‌ಐ) ಮೃತಪಟ್ಟಿದ್ದಾರೆ.

ಮಂಜುನಾಥ್ (32), ಅಮರೇಶ್ (25) ಹಾಗೂ ಸಚಿನ್ (31) ಸಾವಿಗೀಡಾದವರು.

ಸ್ನೇಹಿತನ ಮದುವೆಗೆಂದು ಬೆಂಗಳೂರಿನಿಂದ ಬಳ್ಳಾರಿಗೆ ಹೊರಟಿದ್ದರು. ಇವರಿದ್ದ ಕಾರು ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಸಬ್ ಇನ್‌ಸ್ಪೆಕ್ಟರ್ ಈಶ್ವರ್, ಆರ್‌ಎಸ್‌ಐ ಮಹಾಂತೇಶ್ ಅವರು ಗಂಭೀರವಾಗಿ ಗಾಯಗೊಂಡಿದ್ದು, ದಾವಣಗೆರೆಯ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

> ಮೂವರ ಸಾವು ನೋವಿನ ವಿಚಾರ. ಇವರು ಕರ್ತವ್ಯದಲ್ಲಿದ್ದರೇ ಅಥವಾ ರಜೆ ಮೇಲಿದ್ದರೆ ಎಂದು ಪರಿಶೀಲಿಸಲಾಗುವುದು. ಮೃತರ ಕುಟುಂಬಗಳಿಗೆ ಸರ್ಕಾರದಿಂದ ನೆರವು ಒದಗಿಸಲಾಗುವುದು
> **ಡಾ.ಜಿ.ಪರಮೇಶ್ವರ**, ಗೃಹ ಸಚಿವ

ಎಲ್ಲರೂ ಪೊಲೀಸ್ ಇಲಾಖೆಗೆ ಹೊಸದಾಗಿ ನೇಮಕವಾಗಿದ್ದರು. ಒಬ್ಬರು ಮೈಸೂರಿನಲ್ಲಿ, ಉಳಿದ ನಾಲ್ವರು ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಗೃಹ ಸಚಿವ ಡಾ.ಜಿ. ಪರಮೇಶ್ವರ, ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಶಾಸಕ ಟಿ.ರಘುಮೂರ್ತಿ, ಎಸ್‌ಪಿ ರಂಜಿತ್ ಕುಮಾರ್ ಬಂಡಾರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ನಿಧನ ವಾರ್ತೆ

ಎಚ್.ಕೆ.ಶಾರದಾ



ಮೈಸೂರು: ಸಾಹಿತಿ ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ) ಅವರ ಪತ್ನಿ ಎಚ್. ಕೆ.ಶಾರದಾ (81) ಭಾನುವಾರ ಸಂಜೆ ಅನಾರೋಗ್ಯದಿಂದ ನಗರದ ಜಯಲಕ್ಷ್ಮೀಪುರಂನ ಬೃಂದಾವನ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತಿ, ಪುತ್ರ ಬೃಂದಾವನ ಆಸ್ಪತ್ರೆಯ ಡಾ.ಸಿ.ಕೆ. ಶ್ರೀಹರ್ಷ, ಮೂವರು ಪುತ್ರಿಯರಿದ್ದಾರೆ. ಇನ್ನೊಬ್ಬ ಪುತ್ರಿ ಇತ್ತೀಚೆಗೆ ನಿಧನರಾದರು.

ಅಂತ್ಯಕ್ರಿಯೆ ಸೋಮವಾರ (ಮಾರ್ಚ್ 16) ಬೆಳಿಗ್ಗೆ 11ರ ಸುಮಾರಿಗೆ ಗೋಕುಲಂನ ಚಿರಶಾಂತಿಧಾಮದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕೇಂದ್ರವನ್ನು ಒತ್ತಾಯಿಸಲಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ರಾಜ್ಯ ಬಿಜೆಪಿ ನಾಯಕರು ಅರ್ಥವಿಲ್ಲದ ಹಾಗೆ ಮಾತನಾಡುವ ಬದಲಿಗೆ, ಎಲ್‌ಪಿಜಿ ಸಿಲಿಂಡರ್‌ನ ಪೂರೈಕೆ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಿ ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು. ಈ ವೇಳೆ ಸುದ್ದಿಗಾರರು, ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಇಲ್ಲ. ಕರ್ನಾಟಕ ಕಾಂಗ್ರೆಸ್ ಸುಳ್ಳು ಹೇಳುತ್ತಿದೆ ಎಂದು ಬಿಜೆಪಿ ನಾಯಕರು ಆರೋಪ ಮಾಡಿದ್ದಾರೆ ಎಂದು ಪ್ರಸ್ತಾಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯ ಆಗಿರುವುದು ಕರ್ನಾಟಕದಲ್ಲಿ ಮಾತ್ರವಲ್ಲ. ಬದಲಿಗೆ ಇಡೀ ದೇಶದಲ್ಲಿ ವ್ಯತ್ಯಯವಾಗಿದೆ' ಎಂದು ತಿರುಗೇಟು ನೀಡಿದರು.

'ಎಲ್‌ಪಿಜಿ ಅಭಾವದಿಂದ, ಸಿಲಿಂಡರ್‌ಗಳ ಪೂರೈಕೆ ಸಾಧ್ಯವಾಗುತ್ತಿಲ್ಲ. ವಿದೇಶಗಳಿಂದ ಎಲ್‌ಪಿಜಿ ತರಿಸಿಕೊಳ್ಳಲು ಪರ್ಯಾಯ ವ್ಯವಸ್ಥೆ ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆದಿದ್ದೇನೆ. ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಅವರು, ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದಾರೆ' ಎಂದರು.

ಅಕ್ರಮ ದಾಸ್ತಾನು: 221 ಸಿಲಿಂಡರ್ ವಶ



ಬೆಂಗಳೂರಿನ ಚಿಕ್ಕಜಾಲ, ಪೀಣ್ಯ ಮತ್ತು ಕೆಂಗೇರಿ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಅಕ್ರಮವಾಗಿ ಸಂಗ್ರಹಿಸಲಾಗಿದ್ದ 221 ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಕಾನೂನು ಮತ್ತು ಮಾಪನ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಖಾಸಗಿ ಗೋದಾಮುಗಳಲ್ಲಿ ಈ ಸಿಲಿಂಡರ್‌ಗಳನ್ನು ಅಕ್ರಮವಾಗಿ ಮತ್ತು ಯಾವುದೇ ಸುರಕ್ಷತಾ ಕ್ರಮಗಳನ್ನು ಪಾಲಿಸದೇ ಸಂಗ್ರಹಿಸಲಾಗಿತ್ತು. ಇಲ್ಲಿಂದ ಕಾಳಸಂತೆಯಲ್ಲಿ ಸಿಲಿಂಡರ್‌ಗಳನ್ನು ಮಾರಾಟ ಮಾಡುತ್ತಿರುವ ಕುರಿತು ದೊರೆತ ಖಚಿತ ಮಾಹಿತಿ ಆಧಾರದಲ್ಲಿ ದಾಳಿ ನಡೆಸಲಾಗಿತ್ತು ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಇಲಾಖೆಯ ಅಧಿಕಾರಿಗಳು ಶುಕ್ರವಾರ ಮತ್ತು ಶನಿವಾರ ರಾಜ್ಯದ ವಿವಿಧೆಡೆ ಕಾರ್ಯಾಚರಣೆ ನಡೆಸಿದ್ದು, ಈ 221 ಸಿಲಿಂಡರ್‌ಗಳೂ ಸೇರಿ ಒಟ್ಟು 514 ಸಿಲಿಂಡರ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ಅಂಕಿ ಅಂಶಗಳು

11.41ಲಕ್ಷ
ಮಾರ್ಚ್ 12ರಿಂದ 14ರವರೆಗೆ ರಾಜ್ಯದಾದ್ಯಂತ ವಿತರಿಸಲಾದ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಸಂಖ್ಯೆ

20,941
ಇದೇ ಅವಧಿಯಲ್ಲಿ ರಾಜ್ಯದಾದ್ಯಂತ ವಿತರಿಸಲಾದ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಸಂಖ್ಯೆ

ಬೆಳಗಾವಿ ಸೇರಿ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಬೆಳಗಾವಿ: ಬೆಳಗಾವಿ, ಗದಗ ಸೇರಿ ಕಿತ್ತೂರು ಕರ್ನಾಟಕದ ವಿವಿಧೆಡೆ ಭಾನುವಾರ ಮಳೆಯಾಗಿದೆ. ಹಾವೇರಿ ಜಿಲ್ಲೆಯಾದ್ಯಂತ ಗಾಳಿ ಸಹಿತ ಜೋರು ಮಳೆಯಾಗಿದೆ. ಹಲವೆಡೆ ಆಲಿಕಲ್ಲು ಬಿದ್ದಿವೆ.

ಜಿಲ್ಲೆಯ ರಾಣೆಬೆನ್ನೂರು, ಹಿರೇಕೆರೂರು, ರಟ್ಟೀಹಳ್ಳಿ ಹಾಗೂ ಬ್ಯಾಡಗಿ ತಾಲ್ಲೂಕಿನಲ್ಲಿ ಉತ್ತಮ, ಹಾವೇರಿ, ಶಿಗ್ಗಾವಿ, ಸವಣೂರು ತಾಲ್ಲೂಕಿನಲ್ಲೂ ಜಿಟಿ ಜಿಟಿ ಮಳೆ ಸುರಿದಿದೆ. ಗದಗ ಜಿಲ್ಲೆಯಲ್ಲಿ ರೋಣ ಪಟ್ಟಣ, ತಾಲ್ಲೂಕಿನ ವಿವಿಧೆಡೆ ತುಂತುರು ಮಳೆಯಾಗಿದೆ.

ಬೆಳಗಾವಿ ನಗರ ಹಾಗೂ ಸುತ್ತಲಿನ ಪ್ರದೇಶದಲ್ಲಿ ಉತ್ತಮ ಮಳೆಯಾಗಿದೆ.

ಗುಡುಗು ಸಹಿತ ಮಳೆ (ಬೀದರ್ ವರದಿ): ಜಿಲ್ಲೆಯ ಹಲವೆಡೆ ಭಾನುವಾರ ಸಂಜೆ ಗುಡುಗು ಸಹಿತ ಮಳೆಯಾಗಿದೆ.

ಬೀದರ್, ಭಾಲ್ಕಿ, ಔರಾದ್ ಹಾಗೂ ಹುಲಸೂರ ತಾಲ್ಲೂಕಿನ ಕೆಲವೆಡೆ ವರ್ಷಧಾರೆಯಾಗಿದೆ. ಮಿಕ್ಕುಳಿದ ಕಡೆಗಳಲ್ಲಿ ಗುಡುಗು, ಜೋರು ಗಾಳಿ ಬೀಸಿದೆ. ಮಾವಿನ ಕಾಯಿಗಳು ನೆಲಕ್ಕುರುಳಿವೆ.

ಸಾಧಾರಣ ಮಳೆ (ಮಡಿಕೇರಿ ವರದಿ): ನಗರ ಮತ್ತು ತಾಲ್ಲೂಕಿನ ನೆಲಜಿ ಗ್ರಾಮ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಭಾನುವಾರ ಸಾಧಾರಣ ಮಳೆ ಸುರಿಯಿತು.

ಹಾಸನ ವರದಿ: ಜಿಲ್ಲೆಯ ಹಲವು ಭಾಗಗಳಲ್ಲಿ ಭಾನುವಾರ ಸಾಧಾರಣ ಮಳೆಯಾಯಿತು.

ಶಿವಮೊಗ್ಗ ವರದಿ: ಜಿಲ್ಲೆಯ ರಿಪ್ಪನ್‌ಪೇಟೆ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಸಂಜೆ ಗುಡುಗು, ಸಿಡಿಲು, ಗಾಳಿ ಸಹಿತ ಸಾಧಾರಣ ಮಳೆಯಾಗಿದೆ. ತ್ಯಾಗರ್ತಿ, ಚಿತ್ರದುರ್ಗ ಜಿಲ್ಲೆಯ ಚಿಕ್ಕಜಾಜೂರಿನಲ್ಲೂ ವರ್ಷಧಾರೆಯಾಗಿದೆ.



ಬೆಳಗಾವಿಯ ಆಟೊ ನಗರದಲ್ಲಿ ಭಾನುವಾರ ಗಾಳಿ ಮಳೆಗೆ ಮರ ಉರುಳಿತು

ಕಳಸದಲ್ಲಿ ಪ್ರಾರ್ಥನೆ, ಮಳೆ

ಚಿಕ್ಕಮಗಳೂರು: ಜಿಲ್ಲೆಯ ಕಳಸ ಹಾಗೂ ಕೊಪ್ಪ ತಾಲ್ಲೂಕಿನ ವಿವಿಧೆಡೆ ಭಾನುವಾರ ಮಳೆಯಾಗಿದೆ. ಕಳಸದಲ್ಲಿ ಭಾನುವಾರ ಸಂಜೆ ಧಾರಾಕಾರ ಮಳೆ ಸುರಿದಿದೆ. ಪಟ್ಟಣದ ಸುತ್ತಮುತ್ತಲಿನ ಪ್ರದೇಶದಲ್ಲೂ ಮಳೆ ಆಗಿದ್ದು, ಕಾಫಿ ಗಿಡಗಳಲ್ಲಿ ಮುಂದಿನ ವಾರ ಹೂವು ಅರಳುವ ನಿರೀಕ್ಷೆ ಇದೆ. ಅಡಿಕೆ ತೋಟಗಳಿಗೆ ಈ ಮಳೆ ಆಸರೆ ಆಗಿದೆ.

ಮಳೆಗಾಗಿ ಹೋಮ, ಪ್ರಾರ್ಥನೆ: ಇಲ್ಲಿನ ಕಳಸೇಶ್ವರ ದೇವಸ್ಥಾನದಲ್ಲಿ ಭಾನುವಾರ ಮಳೆಗಾಗಿ ವಿಶೇಷ ಪ್ರಾರ್ಥನೆ ಮತ್ತು ರುದ್ರಾಭಿಷೇಕ, ರುದ್ರಹೋಮ ನೆರವೇರಿಸಲಾಗಿತ್ತು. ವಿವಿಧ ದೇವಸ್ಥಾನಗಳಲ್ಲೂ ವಿಶೇಷ ಪ್ರಾರ್ಥನೆ ನಡೆಯಿತು. ಕೊಪ್ಪ ತಾಲ್ಲೂಕಿನ ಹಲವೆಡೆ ಸಂಜೆ ಗುಡುಗು ಸಹಿತ ಮಳೆಯಾಗಿದೆ. ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿದ್ದು, ಸಂಜೆ 4.45ರ ವೇಳೆಗೆ ಆರಂಭಗೊಂಡ ಮಳೆ ಅರ್ಧ ಗಂಟೆ ಬಿರುಸಾಗಿ ಸುರಿಯಿತು.

ನರಸಿಂಹರಾಜಪುರ ತಾಲ್ಲೂಕು ವ್ಯಾಪ್ತಿಯಲ್ಲೂ ಭಾನುವಾರ ಸಂಜೆ ಸಾಧಾರಣ ಮಳೆ ಸುರಿದಿದೆ.

ಲಿಯಾಕತ್ ಆಲಿ ನಿಧನ



ಮಡಿಕೇರಿ: ಗಾಯಕ ಹಾಗೂ ಕನ್ನಡಪರ ಹೋರಾಟಗಾರ ಲಿಯಾಕತ್ ಆಲಿ (69) ಅವರು ಭಾನುವಾರ ಇಲ್ಲಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ಸಂಜೆ ನಡೆಯಿತು. ಮಡಿಕೇರಿ ಪುರಸಭೆ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಗೋಕಾಕ್ ಚಳವಳಿ ಸೇರಿದಂತೆ ಹಲವು ಚಳವಳಿಯಲ್ಲಿ ಭಾಗವಹಿಸಿದ್ದರು. ಕಸಾಪ ಜಿಲ್ಲಾ ಘಟಕ, ಕೊಡಗು ಜಿಲ್ಲಾ ಲೇಖಕ ಮತ್ತು ಕಲಾವಿದರ ಬಳಗದ ಪದಾಧಿಕಾರಿ ಆಗಿದ್ದರು. ಗಾಯಕ ಮತ್ತು ಕಲಾವಿದರಾಗಿ ಹೆಸರು ಗಳಿಸಿದ್ದರು.

ಒಡಿಶಾ 'ಕೈ' ಶಾಸಕರಿಗೆ ಲಂಚದ ಆಮಿಷ: ಇಬ್ಬರು ವಶಕ್ಕೆ

ಒಂದನೇ ಪುಟದಿಂದ...

ಒಡಿಶಾದ ಬೀರೇಂದ್ರ ಪ್ರಸಾದ್, ಅಜಿತ್ ಕುಮಾರ್ ಸಾಹು, ಸಿಮಾಚಲ್ ಮೊಕುದ್ ಹಾಗೂ ಬೆಂಗಳೂರಿನ ಬ್ಯಾಟರಾಯನಪುರದ ಸುರೇಶ್ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಪೈಕಿ ಬೀರೇಂದ್ರ ಪ್ರಸಾದ್ ಮತ್ತು ಸುರೇಶ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ರೆಸಾರ್ಟ್‌ನಿಂದ ಹೊರಟು ತಲೆಮರೆಸಿಕೊಂಡಿದ್ದ ಅಜಿತ್ ಕುಮಾರ್ ಸಾಹು ಮತ್ತು ಸಿಮಾಚಲ್ ಮೊಕುದ್ ಅವರನ್ನು ರಾತ್ರಿ 9ರ ಸುಮಾರಿಗೆ ತಮಿಳುನಾಡಿನ ಹೊಸೂರಿನ ಲಾಡ್ಜ್‌ವೊಂದರಲ್ಲಿ ಜಿಲ್ಲೆಯ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪೊಲೀಸರ ವಶದಲ್ಲಿರುವ ಬೀರೇಂದ್ರ ಪ್ರಸಾದ್ ಮತ್ತು ಸುರೇಶ್ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ್ ಗೌಡ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದಾರೆ. ಅವರ ಬಳಿ ಇದ್ದ ಖಾಲಿ ಚೆಕ್ ವಶಪಡಿಸಿಕೊಂಡಿದ್ದಾರೆ.

ನಡೆದಿದ್ದೇನು?: 'ಸುರೇಶ್ ಹೆಸರಿನಲ್ಲಿ ಆರೋಪಿಗಳು ರೆಸಾರ್ಟ್‌ನ 4ನೇ ಮಹಡಿಯಲ್ಲಿರುವ 401 ಮತ್ತು 402ನೇ ಸಂಖ್ಯೆಯ ಕೊಠಡಿಗಳನ್ನು ಕಾಯ್ದಿರಿಸಿದ್ದರು. ರಾತ್ರಿಯೇ ಬಂದು ಈ ಕೊಠಡಿಗಳಲ್ಲಿ ತಂಗಿದ್ದರು. ಒಡಿಶಾ ಶಾಸಕರಿಗಾಗಿ 5ನೇ ಮಹಡಿಯ ಎಲ್ಲಾ ಕೊಠಡಿಗಳು ಬುಕ್ ಆಗಿದ್ದವು' ಎಂದು ರೆಸಾರ್ಟ್‌ನಲ್ಲಿ ಒಡಿಶಾ ಶಾಸಕರ ಯೋಗಕ್ಷೇಮದ ಹೊಣೆ ಹೊತ್ತಿರುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಡಿಎ) ಅಧ್ಯಕ್ಷ ಜಿ.ಎನ್.ನಟರಾಜ ಗಾಣಕಲ್ 'ಪ್ರಜಾವಾಣಿ'ಗೆ ತಿಳಿಸಿದರು.

> ಒಡಿಶಾ ಶಾಸಕರಿಗೆ ಲಂಚದ ಆಮಿಷವೊಡ್ಡಿದ ಆರೋಪದ ಮೇಲೆ ಸದ್ಯ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ. ತಲೆ ಮರೆಸಿಕೊಂಡಿರುವ ಉಳಿದಿಬ್ಬರಿಗೆ ಹುಡುಕಾಟ ನಡೆದಿದೆ ಆರ್.
> **ಶ್ರೀನಿವಾಸ್ ಗೌಡ**, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬೆಂಗಳೂರು ದಕ್ಷಿಣ ಜಿಲ್ಲೆ

> ಲಂಚದ ಆಮಿಷ ತೋರಿಸಿದ ಒಡಿಶಾದ ಒಬ್ಬ, ಬೆಂಗಳೂರಿನ ಮತ್ತೊಬ್ಬ ವ್ಯಕ್ತಿಯನ್ನು ಹಿಡಿದು, ಡಿ.ಕೆ. ಶಿವಕುಮಾರ್ ಸೂಚನೆಯಂತೆ ಪೊಲೀಸರಿಗೆ ಒಪ್ಪಿಸಿದ್ದೇವೆ
> **ಜಿ.ಎನ್. ನಟರಾಜ ಗಾಣಕಲ್**, ಅಧ್ಯಕ್ಷ, ಜಿಬಿಎ

'ಶಾಸಕರೆಲ್ಲರೂ ಶನಿವಾರ ಮೈಸೂರು ಪ್ರವಾಸ ಮುಗಿಸಿಕೊಂಡು ರಾತ್ರಿ ವಾಪಸ್ ರೆಸಾರ್ಟ್‌ಗೆ ಬಂದಿದ್ದರು. ಭಾನುವಾರ ಬೆಳಗ್ಗೆ 9.20ರ ಸುಮಾರಿಗೆ ಉಪಾಹಾರಕ್ಕೆ ಕೊಠಡಿಗಳಿಂದ ಹೊರಬಂದಿದ್ದರು. ಆಗ, ಆರೋಪಿಗಳು ಶಾಸಕ ಮಂಗೂ ಕಿಲ್ಲೊ ಎಂಬವರನ್ನು ಭೇಟಿ ಮಾಡಿ ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಬೆಂಬಲಿಸುವಂತೆ ಲಂಚದ ಆಮಿಷವೊಡ್ಡಿದ್ದಾರೆ' ಎಂದು ಹೇಳಿದರು.

ವಿಷಯ ಮುಟ್ಟಿಸಿದ ಶಾಸಕ: 'ಉಪಾಹಾರದ ಬಳಿಕ ಆರೋಪಿಗಳು ತನ್ನನ್ನು ಭೇಟಿ ಮಾಡಿ ಖಾಲಿ ಚೆಕ್ ತೋರಿಸಿ ₹5 ಕೋಟಿ ಲಂಚದ ಆಮಿಷವೊಡ್ಡಿದ್ದನ್ನು ಶಾಸಕ ಮಂಗೂ ಗಮನಕ್ಕೆ ತಂದರು. ಕೂಡಲೇ ಸ್ಥಳದಲ್ಲಿ ಹುಡುಕಾಡಿ ರೆಸಾರ್ಟ್‌ನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿದಾಗ ಶಾಸಕರನ್ನು ನಾಲ್ವರು ಅಪರಿಚಿತರು ಭೇಟಿ ಮಾಡಿರುವುದು ಗೊತ್ತಾಯಿತು' ಎಂದು ನಟರಾಜ್ ತಿಳಿಸಿದರು.

'ಅದೇ ಹೊತ್ತಿಗೆ ಬೀರೇಂದ್ರ ಪ್ರಸಾದ್ ಮತ್ತು ಸುರೇಶ್ ಇಬ್ಬರೂ ಕೊಠಡಿ ಖಾಲಿ ಮಾಡಿಕೊಂಡು ಹೋಗಲು ರೆಸಾರ್ಟ್‌ನ ಸ್ವಾಗತ ಕೌಂಟರ್‌ಗೆ ಬಂದರು. ಕೂಡಲೇ ಅವರನ್ನು ಸುತ್ತುವರಿದೆವು. ಅವರ ಹಿನ್ನೆಲೆ ವಿಚಾರಿಸಿದಾಗ ಏನೇನೊ ಹೇಳುತ್ತಾ ಸ್ಥಳದಿಂದ ಹೊರಡಲು ಮುಂದಾದರು' ಎಂದರು.

'ಅವರನ್ನು ತಡೆದು ಕೈಯಲ್ಲಿದ್ದ ಮೊಬೈಲ್ ಪರಿಶೀಲಿಸಿದಾಗ ಶಾಸಕರನ್ನು ಭೇಟಿ ಮಾಡಿರುವ ವಿಡಿಯೊ ಇತ್ತು. ಪೊಲೀಸರಿಗೆ ವಿಷಯ ತಿಳಿಸಿದೆವು. ಸ್ಥಳಕ್ಕೆ ಬಂದ ಪೊಲೀಸರಿಗೆ ಇಬ್ಬರನ್ನೂ ಒಪ್ಪಿಸಿದೆವು. ಅಷ್ಟೊತ್ತಿಗಾಗಲೇ ಉಳಿದಿಬ್ಬರು ಕೊಠಡಿ ಖಾಲಿ ಮಾಡಿಕೊಂಡು ಹೋಗಿದ್ದರು' ಎಂದು ಹೇಳಿದರು.

ಕೊಲೆ ಬೆದರಿಕೆ: 'ರೆಸಾರ್ಟ್‌ನಲ್ಲಿ ತಂಗಿದ್ದ ಕಾಂಗ್ರೆಸ್ ಶಾಸಕರನ್ನು ಭೇಟಿಯಾಗಿರುವ ನಾಲ್ವರು ವ್ಯಕ್ತಿಗಳು ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡುವಂತೆ ಕೋಟ್ಯಂತರ ರೂಪಾಯಿ ಆಮಿಷವೊಡ್ಡಿದ್ದಾರೆ. ನಮ್ಮ ಶಾಸಕರು ಆಮಿಷ ತಿರಸ್ಕರಿಸಿದಾಗ ಒಡಿಶಾಕ್ಕೆ ಬಂದರೆ ಕೊಲ್ಲುವುದಾಗಿ ಬೆದರಿಕೆ ಹಾಕಿ ನಿಂದಿಸಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಅಶೋಕ್ ಕುಮಾರ್ ದಾಸ್ ಬಿಡದಿ ದೂರಿನಲ್ಲಿ ಒತ್ತಾಯಿಸಿದ್ದಾರೆ.



ಬೆಂಗಳೂರಿನಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಒಡಿಶಾ ಶಾಸಕರು

ಬೆಂಬಲದ ಸಂದೇಶ

'ಉಪಾಹಾರ ಸಂದರ್ಭದಲ್ಲಿ ಶಾಸಕರನ್ನು ಭೇಟಿ ಮಾಡಿದ್ದ ಆರೋಪಿಗಳು, ಶಾಸಕರ ಜೊತೆ ಫೋಟೊ ತೆಗೆದುಕೊಂಡಿದ್ದರು. ನಂತರ ರಾಜ್ಯಸಭಾ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಬೆಂಬಲಿಸಲು ಒಪ್ಪಿದ್ದಾರೆ ಎಂಬ ಸಂದೇಶದೊಂದಿಗೆ ಒಡಿಶಾದ ಬಿಜೆಪಿ ನಾಯಕರೊಬ್ಬರಿಗೆ ಚಿತ್ರ ಕಳಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಖಾಲಿ ಚೆಕ್ ಜಪ್ತಿ

ಕಾಂಗ್ರೆಸ್ ಮುಖಂಡರು ಪೊಲೀಸರಿಗೆ ಹಿಡಿದು ಕೊಟ್ಟಿರುವ ಒಡಿಶಾದ ಬೀರೇಂದ್ರ ಪ್ರಸಾದ್‌ನನ್ನು ತಪಾಸಣೆ ನಡೆಸಿದಾಗ ಖಾಲಿ ಚೆಕ್ ಪತ್ತೆಯಾಗಿದೆ. ಎಸ್‌ಬಿಐ ಬ್ಯಾಂಕಿನ ಆ ಚೆಕ್‌ನಲ್ಲಿ ಸುಂದರಗಢ ಜಿಲ್ಲೆಯ ರೂರ್ಕೆಲಾದ ಉದಿತ್‌ನಗರ ಶಾಖೆಯ ವಿಳಾಸವಿದೆ. ಒಡಿಶಾದಿಂದ ಬಂದಿರುವ ಮೂವರು ಆರೋಪಿಗಳ ಹಿನ್ನೆಲೆ ಹಾಗೂ ಬೆಂಗಳೂರಿನ ಬ್ಯಾಟರಾಯನಪುರದ ಸುರೇಶ್‌ಗೂ ಇರುವ ಸಂಬಂಧದ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿ.ಎಂ ಆಪ್ತನಿಂದ ಆಮಿಷ: ಸಂಸದ ಆರೋಪ

ಘಟನೆ ಕುರಿತು ರೆಸಾರ್ಟ್ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಒಡಿಶಾದ ಕಾಂಗ್ರೆಸ್ ಸಂಸದ ಸಪ್ತಗಿರಿ ಶಂಕರ್ ಉಲಾಖ, 'ನಮ್ಮ ಪಕ್ಷದ ಶಾಸಕರ ಖರೀದಿಗೆ ಒಡಿಶಾ ಸಿ.ಎಂ ಮೋಹನ್ ಚರಣ್ ಮಾಝಿ ಅವರ ಆಪ್ತ ಇಲ್ಲಿಗೆ ಬಂದಿದ್ದಾರೆ. ನಮ್ಮ ಶಾಸಕರಿಗೆ ₹5 ಕೋಟಿ ಆಮಿಷವೊಡ್ಡಿ ಒತ್ತಡ ಹಾಕಿದ್ದಾರೆ' ಎಂದು ಆರೋಪಿಸಿದರು.

ಒಡಿಶಾಗೆ ಶಾಸಕರು

ಘಟನೆಗೆ ಬೆನ್ನಲ್ಲೇ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದ ಒಡಿಶಾದ 8 ಶಾಸಕರನ್ನು ಬೆಂಗಳೂರಿನಲ್ಲಿರುವ ಖಾಸಗಿ ಹೋಟೆಲ್‌ಗೆ ಸ್ಥಳಾಂತರಿಸಲಾಗಿದೆ.

ಸೋಮವಾರವೇ ರಾಜ್ಯಸಭಾ ಚುನಾವಣೆಯ ಮತದಾನ ನಡೆಯುವುದರಿಂದ, ಭಾನುವಾರ ರಾತ್ರಿಯೇ ಎಲ್ಲರನ್ನೂ ಒಡಿಶಾಗೆ ಕಳಿಸಿ ಕೊಡಲಾಯಿತು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಸ್ವಾಮೀಜಿ ಕ್ಷಮೆ ಕೋರಿದ ಶಾಸಕ



ರಮೇಶ

ಮಂಡ್ಯ: 'ಆದಿಚುಂಚನಗಿರಿ ಮಠದ ಬಗ್ಗೆ ಅಭಿವೃದ್ಧಿ ದೃಷ್ಟಿಯಿಂದ ಮಾತನಾಡಿದ್ದೇನೆ. ಯಾರ ಮನಸ್ಸಿಗೂ ನೋವುಂಟು ಮಾಡಲು ಹಾಗೆ ಹೇಳಿಲ್ಲ. ನೋವಾಗಿದ್ದರೆ ಸ್ವಾಮೀಜಿ ಅವರ ಕ್ಷಮೆ ಕೇಳುತ್ತೇನೆ. ಅವರ ಬಗ್ಗೆ ಮಾತನಾಡುವಷ್ಟು ದೊಡ್ಡವನಲ್ಲ' ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನ ಮಾತಿನಿಂದ ಭಕ್ತರು, ಸ್ವಾಮೀಜಿ ಅವರಿಗೆ ಬೇಸರವಾಗಿದ್ದರೆ ಕ್ಷಮೆ ಯಾಚಿಸುತ್ತೇನೆ. ನಾನೂ ಮಠದ ಸದ್ಭಕ್ತ' ಎಂದು ಹೇಳಿದರು.

ಶ್ರೀರಂಗಪಟ್ಟಣದ ಆದಿ ಚುಂಚನಗಿರಿ ಸಂಸ್ಥೆಯಲ್ಲಿ ಶನಿವಾರ ನಡೆದಿದ್ದ ಕಾರ್ಯಕ್ರಮದಲ್ಲಿ, 'ಇತ್ತೀಚಿನ ದಿನಗಳಲ್ಲಿ ಹೆಜ್ಜೆ ಎಲ್ಲೆಲ್ಲೋ ದಾರಿ ತಪ್ಪುತ್ತಿದೆ. ಗುರುಗಳು ತಪ್ಪು ತಿಳಿಯಬಾರದು' ಎಂದು ಹೇಳಿದ್ದರು. ಇದು ಚರ್ಚೆಗೆ ಗ್ರಾಸವಾಗಿತ್ತು.

'ಟೀಕೆ ಟಿಪ್ಪಣಿ' 3 ಸಂಪುಟ, ಲಂಕೇಶ್‌ರ ಕಥೆಗಳ ಆಡಿಯೊ ಬುಕ್ ಜನಾರ್ಪಣೆ ಮಾಡಿದ ಸಿದ್ದರಾಮಯ್ಯ

'ಕೋಮುವಾದ ವಿರೋಧಿಸಿದ್ದ ಲಂಕೇಶ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದ ಹಿತ ಬಯಸುವವರು ಕೋಮುವಾದದ ವಿರುದ್ಧ ಇರಬೇಕು. ಲಂಕೇಶ್ ಕೋಮುವಾದವನ್ನು ಆ ಕಾಲದಲ್ಲಿಯೇ ನಿರಂತರ ವಿರೋಧಿಸಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಂದಿರಾ ಲಂಕೇಶ್ ಆಯೋಜಿಸಿದ್ದ ದಿವಂಗತ ಪಿ. ಲಂಕೇಶ್ ಅವರ 'ಟೀಕೆ - ಟಿಪ್ಪಣಿ' ಮೂರು ಸಂಪುಟಗಳು ಹಾಗೂ ಲಂಕೇಶ್‌ರ ಕಥೆಗಳ ಆಡಿಯೊ ಬುಕ್ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈಗ ಕೋಮುವಾದವು ಹೆಮ್ಮರವಾಗಿ ಬೆಳೆದಿದೆ. ಇನ್ನಷ್ಟು ಗಟ್ಟಿಯಾಗಿ ವಿರೋಧಿಸಬೇಕಿದೆ ಎಂದರು.

'ಲಂಕೇಶ್ ಎಲ್ಲರನ್ನೂ ಟೀಕಿಸುತ್ತಿದ್ದರು. ವಿಡಂಬನೆ ಮಾಡುತ್ತಿದ್ದರು. ಜೊತೆಗೆ ಪ್ರೀತಿಯನ್ನೂ ಇಟ್ಟುಕೊಂಡಿದ್ದರು. ನನ್ನನ್ನೂ ಟೀಕಿಸಿ ಬರೆದಿದ್ದರು. ಹೊಗಳಿಯೂ ಬರೆದಿದ್ದರು. ಶ್ರೀಕಂಠದತ್ತ ಒಡೆಯರ್ ಸಂಸತ್ತಿಗೆ ಕಾಂಗ್ರೆಸ್‌ನಿಂದ ಸ್ಪರ್ಧೆ ಮಾಡಿದ್ದಾಗ ಅವರ ವಿರುದ್ಧ ನಿಲ್ಲುವಂತೆ ನನಗೆ ಲಂಕೇಶ್ ಹೇಳಿದ್ದರು. ಆದರೆ, ಶಾಸಕನಾಗಿದ್ದ ನಾನು ಲೋಕಸಭೆಗೆ ಸ್ಪರ್ಧಿಸಲು ಮನಸ್ಸು ಮಾಡಲಿಲ್ಲ. ಆಗ 'ಇಸ್ಪೀಟ್ ಗುಲಾಮ ಮಾಡಿದ ಮೋಸ' ಎಂದು ಬರೆದಿದ್ದರು' ಎಂದು ನೆನಪು ಮಾಡಿಕೊಂಡರು.

'ನಾನು ಆರ್ಥಿಕ ಸಚಿವನಾಗಿ ಮೊದಲ ಬಜೆಟ್ ಮಂಡಿಸಲು ತಯಾರಿ ನಡೆಸುತ್ತಿದ್ದೆ. ನೂರು ಕುರಿ ಎಣಿಸಲು ಬಾರದವನು ರಾಜ್ಯದ ಹಣಕಾಸು ಹೇಗೆ ನಿರ್ವಹಿಸುತ್ತಾನೆ ಎಂದು ಟೀಕಿಸಿ ಬರೆದರು. ನಾನು ಅದನ್ನು ಸವಾಲಾಗಿ ಸ್ವೀಕರಿಸಿದೆ. ಅವರು ಆ ರೀತಿ ಬರೆದಿದ್ದರಿಂದಲೇ ನಾನು 17 ಬಜೆಟ್ ಮಂಡಿಸಲು ಸಾಧ್ಯವಾಯಿತು. ಆನಂತರ ಬಹಳ ಬಾರಿ ಹೊಗಳಿಕೆಯ ಬರಹಗಳನ್ನು ಪ್ರಕಟಿಸಿದ್ದರು' ಎಂದು ಹೇಳಿದರು.

ನಟ ಪ್ರಕಾಶ್ ರಾಜ್ ಮಾತನಾಡಿ, 'ಕಲಾವಿದರು, ಸಾಹಿತಿಗಳು, ಪತ್ರಕರ್ತರು ಸದಾ ವಿರೋಧಪಕ್ಷವಾಗಿ ಇರಬೇಕು. ನಮ್ಮ ಗೆಳೆಯರೇ ವಿರೋಧ ಪಕ್ಷದಲ್ಲಿದ್ದು, ನಾಳೆ ಆಡಳಿತ ಪಕ್ಷಕ್ಕೆ ಬಂದರೂ ವಿರೋಧ ಪಕ್ಷವಾಗಿಯೇ ನಾವು ಚಾಟಿ ಬೀಸಬೇಕು ಎಂಬುದು ಲಂಕೇಶರ ಆಶಯವಾಗಿತ್ತು. ಅವರ ಬರಹ, ಸೃಜನಶೀಲತೆಗಳನ್ನು ಮೀರಿ ಅವರು ತೆಗೆದುಕೊಂಡಿದ್ದ ನಿಲುವು ಇಂದಿನ ಹದಗೆಟ್ಟ ಪರಿಸ್ಥಿತಿಗೆ ಅಗತ್ಯವಾದುದು' ಎಂದು ಹೇಳಿದರು.

'ಅಲ್ಲೆಲ್ಲೊ ಯುದ್ಧ ನಡೆಯುತ್ತಿದ್ದರೆ ಅದರ ಬಿಸಿ ನಮಗೂ ತಟ್ಟುತ್ತದೆ. ಆದರೆ, ನಮ್ಮ ಮಹಾಪ್ರಭುಗಳು ಚುನಾವಣಾ ರ್‍ಯಾಲಿಯಲ್ಲಿ ಮುಳುಗಿದ್ದಾರೆ. ಮಾಧ್ಯಮಗಳು ಮಾಸ್ಟರ್‌ಸ್ಟ್ರೋಕ್ ಎಂದು ಬಿಂಬಿಸುತ್ತಿವೆ' ಎಂದು ಟೀಕಿಸಿದರು.



ಕಾರ್ಯಕ್ರಮದಲ್ಲಿ ಎಂ.ಎಸ್. ಆಶಾದೇವಿ, ಇಂದಿರಾ ಲಂಕೇಶ್, ಪ್ರಕಾಶ್ ರಾಜ್, ಸಿದ್ದರಾಮಯ್ಯ, ಕವಿತಾ ಲಂಕೇಶ್, ನಟರಾಜ್ ಹುಳಿಯಾರ್ ಮತ್ತು ಟಿ.ಎನ್. ಸೀತಾರಾಮ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಲಂಕೇಶ್ ಸಮಾಧಿಗೊಂದು ರಸ್ತೆ ಕೊಡಿ

'ಅಪ್ಪ ಇದ್ದಾಗ ಆಗಲಿ, ಗೌರಿ ಇದ್ದಾಗ ಆಗಲಿ ನಾವು ಸರ್ಕಾರವನ್ನು ಏನೂ ಕೇಳಿದವರಲ್ಲ. ಅಪ್ಪನ ಸಮಾಧಿ ಇದೆ. ಅದಕ್ಕೆ ಸಂಪರ್ಕ ರಸ್ತೆ ಇಲ್ಲ. ಸಮಾಧಿಯನ್ನು ನಿರ್ವಹಣೆ ಮಾಡಲು ಆಗುತ್ತಿಲ್ಲ ಎಂದು ಚಲನಚಿತ್ರ ನಿರ್ದೇಶಕಿ ಕವಿತಾ ಲಂಕೇಶ್ ತಿಳಿಸಿದರು.

ಗ್ರಂಥಾಲಯ ಅಥವಾ ರಂಗಚಟುವಟಿಕೆ ಹೀಗೆ ಏನಾದರೂ ಮಾಡಬೇಕು ಅಂತಿದ್ದರೂ ಸಾಧ್ಯವಾಗುತ್ತಿಲ್ಲ. ಸಂಪರ್ಕ ರಸ್ತೆ ಮಾಡಿಕೊಡಲು ಸಾಧ್ಯವೇ' ಎಂದು ಕವಿತಾ ಅವರು ಮುಖ್ಯಮಂತ್ರಿಯವರ ಮುಂದೆ ಮನವಿ ಮಾಡಿಕೊಂಡರು.

> ಲಂಕೇಶ್ ರಾಜಕಾರಣಿಗಳನ್ನು, ಸಾಹಿತಿಗಳನ್ನು, ಸಮಾಜವನ್ನು ನೈತಿಕ ಆತಂಕದಲ್ಲಿಟ್ಟಿದ್ದರು
> **ನಟರಾಜ್ ಹುಳಿಯಾರ್**, 'ಟೀಕೆ–ಟಿಪ್ಪಣಿ' ಸಂಪುಟಗಳ ಸಂಪಾದಕ

> ಪತ್ರಿಕೋದ್ಯಮದ ಭಾಷೆಗೆ ಕಾವ್ಯದ ಹೊಳಪು ನೀಡಿ ಚೆಲುವು ಮತ್ತು ಚೂಪಾದ ಭಾಷೆಯನ್ನಾಗಿ ಲಂಕೇಶ್ ಪರಿವರ್ತಿಸಿದ್ದರು
> **ಎಂ.ಎಸ್. ಆಶಾದೇವಿ**, ಅಂಕಣಕಾರ್ತಿ

> ಲಂಕೇಶ್ ಏಕಕಾಲಕ್ಕೆ ವ್ಯವಹಾರಸ್ಥನಾಗಿಯೂ ಅನುಭಾವಿಯಾಗಿಯೂ ಕಾಣುತ್ತಿದ್ದರು.
> **ಟಿ.ಎನ್. ಸೀತಾರಾಮ್**, ನಿರ್ದೇಶಕ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಜೀವನದ ಸುಖ, ಸಂತೋಷ, ಸರ್ವಸ್ವಗಳೆಲ್ಲವೂ ಮನುಷ್ಯನು ಮಾಡುವ ಕೆಲಸದಿಂದಲೇ ಬರುತ್ತವೆ.

–ಪಾಟೀಲ ಪುಟ್ಟಪ್ಪ

ಸಂಪಾದಕೀಯ

‘ಸಿಇಸಿ’ ಪದಚ್ಯುತಿ ಪ್ರಯತ್ನ ಆಯೋಗದ ಅವನತಿಯ ಬಿಂಬ

ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸಲು ಉದ್ದೇಶಿಸಿ ಸಂಸತ್ತಿನ ಉಭಯ ಸದನಗಳಲ್ಲಿ ವಿರೋಧ ಪಕ್ಷಗಳು ನಡೆಸಿರುವ ಪ್ರಯತ್ನ, ದೇಶದ ಸಂಸದೀಯ ಇತಿಹಾಸದಲ್ಲಿ ಹಿಂದೆಂದೂ ನಡೆದಿರದ ವಿದ್ಯಮಾನವಾಗಿದೆ. ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳು ಸಿಇಸಿ ಪದಚ್ಯುತಿ ನಿರ್ಣಯಕ್ಕೆ ನೋಟಿಸ್ ಸಲ್ಲಿಸಿವೆ. ಲೋಕಸಭೆಯ 130 ಸದಸ್ಯರು ಮತ್ತು ರಾಜ್ಯಸಭೆಯ 63 ಸದಸ್ಯರು ಈ ನೋಟಿಸ್‌ಗೆ ಸಹಿ ಹಾಕಿದ್ದಾರೆ. ಇದೇ ಮೊದಲ ಬಾರಿಗೆ ಸಿಇಸಿ ಒಬ್ಬರು ಇಂತಹ ಸನ್ನಿವೇಶ ಎದುರಿಸುತ್ತಿದ್ದಾರೆ; ಈ ಬೆಳವಣಿಗೆ ಸಿಇಸಿ ಮತ್ತು ವಿರೋಧ ಪಕ್ಷಗಳ ನಡುವಿನ ಅಪನಂಬಿಕೆ ಹಾಗೂ ಸಂಘರ್ಷ ಎಷ್ಟು ತೀವ್ರವಾದುದು ಎನ್ನುವುದನ್ನು ಸೂಚಿಸುವಂತಿದೆ. ಈ ನಡೆಯ ಮುಂದಾಳತ್ವವನ್ನು ಟಿಎಂಸಿ ವಹಿಸಿಕೊಂಡಿದ್ದರೂ, ಅದರೊಂದಿಗೆ ಕೈಜೋಡಿಸಿರುವ ಉಳಿದ ಪಕ್ಷಗಳು ಕೂಡ ಸಿಇಸಿ ವಿರುದ್ಧ ಗಂಭೀರ ದೂರುಗಳನ್ನು ಹೊಂದಿವೆ. ಪಶ್ಚಿಮ ಬಂಗಾಳದಲ್ಲಿನ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ವಿಧಾನವೇ ಸಿಇಸಿ ಪದಚ್ಯುತಿ ಪ್ರಯತ್ನಕ್ಕೆ ತಕ್ಷಣದ ಕಾರಣವಾಗಿದೆ. ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗಳು ಸನ್ನಿಹಿತವಾಗಿರುವ ಸಂದರ್ಭದಲ್ಲಿ ಮತದಾರರನ್ನು ದೊಡ್ಡ ಪ್ರಮಾಣದಲ್ಲಿ ಕೈಬಿಡುವುದು ಹಾಗೂ ಬಿಜೆಪಿಗೆ ಅನುಕೂಲವಾಗುವಂತೆ ಕಾರ್ಯತಂತ್ರ ರೂಪಿಸುವುದು ‘ಎಸ್‌ಐಆರ್’ ಪ್ರಕ್ರಿಯೆ ಉದ್ದೇಶವಾಗಿದೆ ಎಂದು ಟಿಎಂಸಿ ಬಲವಾಗಿ ನಂಬಿದೆ.


ಎಸ್‌ಐಆರ್ ನಡೆದಿರುವ ಇತರ ರಾಜ್ಯಗಳಲ್ಲಿಯೂ ಆ ಪ್ರಕ್ರಿಯೆಯು ವಿರೋಧ ಪಕ್ಷಗಳಿಂದ ಟೀಕೆಗೆ ಗುರಿಯಾಗಿದೆ. ವಿರೋಧ ಪಕ್ಷಗಳ ಟೀಕೆಗಳು ಆಧಾರರಹಿತವಲ್ಲ ಎನ್ನುವುದನ್ನು ಹಾಗೂ ಸುಪ್ರೀಂ ಕೋರ್ಟ್ ಮತ್ತೆ ಮತ್ತೆ ಮಧ್ಯಪ್ರವೇಶಿಸಿ ಚುನಾವಣಾ ಆಯೋಗಕ್ಕೆ ನಿರ್ದೇಶನಗಳನ್ನು ನೀಡಿರುವುದನ್ನು ಗಮನಿಸಬೇಕು. ಆಯೋಗದ ಕಾರ್ಯವೈಖರಿ ಬಿಜೆಪಿಗೆ ಅನುಕೂಲ ಆಗುವಂತೆ ‘ಪಕ್ಷಪಾತ ಮತ್ತು ತಾರತಮ್ಯ’ದಿಂದ ಕೂಡಿದೆ ಎನ್ನುವುದು ವಿರೋಧ ಪಕ್ಷಗಳ ಪ್ರಮುಖ ದೂರಾಗಿದೆ. ಸಾಂವಿಧಾನಿಕ ಸಂಸ್ಥೆಯ ಕಾರ್ಯವಿಧಾನ ನಿಷ್ಪಕ್ಷಪಾತವಾಗಿರಬೇಕು ಹಾಗೂ ಎಲ್ಲರನ್ನೂ ಒಳಗೊಳ್ಳುವಂತೆ ಇರಬೇಕು. ಆದರೆ, ಅನೇಕ ಸಂದರ್ಭಗಳಲ್ಲಿ ಸಿಇಸಿ ಅನುಮಾನಕ್ಕೆ ಕಾರಣವಾಗುವಂತೆ ನಡೆದುಕೊಂಡಿದ್ದಾರೆ. ಎಸ್‌ಐಆರ್ ಪ್ರಕ್ರಿಯೆ ಮಾತ್ರವೇ ಸಿಇಸಿ ಟೀಕೆಗೆ ಗುರಿಯಾಗಿಲ್ಲ. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮತ ಕಳವು (ವೋಟ್ ಚೋರಿ) ಕುರಿತು ಎತ್ತಿದ ಪ್ರಶ್ನೆಗಳಿಗೆ ಅವರ ಪ್ರತಿಕ್ರಿಯೆ ತೃಪ್ತಿಕರವಾಗಿರಲಿಲ್ಲ. ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಸರ್ಕಾರದ ನಾಯಕರು ಚುನಾವಣೆಯ ಮಾದರಿ ನೀತಿಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎನ್ನುವ ದೂರುಗಳಿಗೆ ಸಂಬಂಧಿಸಿದಂತೆಯೂ ಅವರ ಪ್ರತಿಕ್ರಿಯೆಗಳು ವಿರೋಧ ಪಕ್ಷಗಳಿಗೆ ವಿರುದ್ಧವಾಗಿ ಇದ್ದವು. ಚುನಾವಣಾ ವೇಳಾಪಟ್ಟಿಗಳನ್ನು ರೂಪಿಸುವುದು ಹಾಗೂ ಚುನಾವಣಾ ವಿಷಯಗಳ ಕುರಿತಂತೆ ವಿರೋಧ ಪಕ್ಷಗಳ ಕೋರಿಕೆಗಳಿಗೆ ಸ್ಪಂದಿಸುವಲ್ಲಿಯೂ ಸಿಇಸಿ ಅವರ ವರ್ತನೆ ನ್ಯಾಯಯುತವಾಗಿರಲಿಲ್ಲ ಎಂದು ವಿರೋಧ ಪಕ್ಷಗಳು ಭಾವಿಸಿವೆ.



ವಿರೋಧ ಪಕ್ಷಗಳ ದೂರು ಹಾಗೂ ಅಹವಾಲುಗಳನ್ನು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಸಹಾನುಭೂತಿಯಿಂದ ಪರಿಶೀಲಿಸಿಲ್ಲ. ಅದರ ಪ್ರತಿಫಲವೇ ಪದಚ್ಯುತಿ ಪ್ರಸ್ತಾವ.

ವಿರೋಧ ಪಕ್ಷಗಳ ದೂರುಗಳಲ್ಲಿ ಮೇಲ್ನೋಟಕ್ಕೆ ಸತ್ವಾಂಶ ಎದ್ದು ಕಾಣಿಸುವಂತಿದ್ದ ಸಂದರ್ಭಗಳಲ್ಲೂ ಮುಖ್ಯ ಚುನಾವಣಾ ಆಯುಕ್ತರು ಸಹಾನುಭೂತಿಯಿಂದ ಸ್ಪಂದಿಸಿಲ್ಲ. ಕೆಲವೊಮ್ಮೆ ಅವರ ಸಾರ್ವಜನಿಕ ನಿಲುವು ಹಾಗೂ ಹೇಳಿಕೆಗಳು ಪ್ರತಿಪಕ್ಷಗಳಿಗೆ ವಿರುದ್ಧವಾಗಿ ಕಾಣಿಸುವಂತೆ ಇದ್ದವು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣಾ ಆಯೋಗ ಬಹು ಮುಖ್ಯವಾದ ಸಾಂವಿಧಾನಿಕ ಸಂಸ್ಥೆಯಾಗಿದ್ದು, ಮುಕ್ತ ಹಾಗೂ ಪಾರದರ್ಶಕ ಚುನಾವಣೆಗಳನ್ನು ನಡೆಸುವುದು ಅದರ ಕರ್ತವ್ಯವಾಗಿದೆ. ಸಿಇಸಿ ಅವರನ್ನು ಪದಚ್ಯುತಗೊಳಿಸುವ ಪ್ರಸ್ತಾವವು ಅತ್ಯುನ್ನತ ಹುದ್ದೆಯಲ್ಲಿ ಇರುವವರ ವಿರುದ್ಧ ತೆಗೆದುಕೊಳ್ಳಲು ಸಾಧ್ಯವಿರುವ ಕಠಿಣ ಕ್ರಮವಾಗಿದೆ. ಅಂಥ ಕ್ರಮಕ್ಕೆ ಮುಂದಾಗಿರುವುದು ದುರದೃಷ್ಟಕರ ಬೆಳವಣಿಗೆಯಾಗಿದ್ದು, ವಿರೋಧ ಪಕ್ಷಗಳು ಮತ್ತು ಸಿಇಸಿ ನಡುವಿನ ಸಂಬಂಧ ಸಂಪೂರ್ಣ ಹಾಳಾಗಿರುವುದರ ಸಂಕೇತ ಇದಾಗಿದೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಮಂಡಿಸಿದ್ದ ಅವಿಶ್ವಾಸ ನಿರ್ಣಯದ ಬೆನ್ನಿಗೇ ಸಿಇಸಿ ಪದಚ್ಯುತಿ ಪ್ರಸ್ತಾವವೂ ಮಂಡನೆಗೊಂಡಿದೆ. ಸ್ಪೀಕರ್ ಪ್ರಕರಣದಂತೆ ಸಿಇಸಿ ವಿರುದ್ಧದ ನಿರ್ಣಯವೂ ವಿಫಲಗೊಳ್ಳುವುದು ಖಚಿತ. ಆದರೆ, ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಕಾರ್ಯ ನಿರ್ವಹಣೆಗೆ ಅತ್ಯಗತ್ಯವಾದ ಎರಡು ಸಾಂವಿಧಾನಿಕ ಹುದ್ದೆಗಳು ಅವನತಿಯತ್ತ ಸಾಗುತ್ತಿರುವುದನ್ನು ಈ ಬೆಳವಣಿಗೆಗಳು ಸ್ಪಷ್ಟಪಡಿಸುವಂತಿವೆ.

ಪಠ್ಯ ಪ್ರಮಾದ, ಸರ್ಕಾರಕ್ಕೆ ಪೆಟ್ಟು



ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

> ನ್ಯಾಯಾಂಗದ ಕುರಿತ ಪಠ್ಯ ರೂಪಿಸುವಲ್ಲಿ ಎನ್‌ಸಿಇಆರ್‌ಟಿ ಜವಾಬ್ದಾರಿಯಿಂದ ನಡೆದುಕೊಂಡಿಲ್ಲ. ವಿವಾದಾಸ್ಪದ ವಿಷಯ ಪಠ್ಯಕ್ಕೆ ಸೇರದಂತೆ ಕೇಂದ್ರ ಸರ್ಕಾರವೂ ಎಚ್ಚರ ವಹಿಸಬೇಕಿತ್ತು. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರು ಈ ವಿಷಯ ಗುರ್ತಿಸಿ ಮಾತನಾಡುವಂತೆ ಆದುದು ವ್ಯವಸ್ಥೆಯ ಸಾಂಘಿಕ ವೈಫಲ್ಯವನ್ನು ಸೂಚಿಸುವಂತಿದೆ.

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) ತಾನು ಸಿದ್ಧಪಡಿಸಿದ ಸಮಾಜ ವಿಜ್ಞಾನ ಪಠ್ಯಪುಸ್ತಕದ ವಿಚಾರವಾಗಿ ವಿವಾದ ಸೃಷ್ಟಿಯಾದ ನಂತರದಲ್ಲಿ ಸುಪ್ರೀಂ ಕೋರ್ಟ್ ಬಳಿ ಷರತ್ತುರಹಿತವಾಗಿ ಕ್ಷಮೆ ಯಾಚಿಸಿದೆ. ಇದು ಒಳ್ಳೆಯ ಸಂಗತಿ. ದೇಶದ ರಾಜಕಾರಣದಲ್ಲಿ, ಶಾಸಕರು ಹಾಗೂ ಸಂಸದರ ಮಟ್ಟದಲ್ಲಿ, ಅಧಿಕಾರಿಗಳ ವಲಯದಲ್ಲಿ ನಡೆಯುತ್ತಿರುವ ಅನಿಯಂತ್ರಿತ ಭ್ರಷ್ಟಾಚಾರವನ್ನು ನಿರ್ಲಕ್ಷಿಸಿದ ಎನ್‌ಇಸಿಆರ್‌ಟಿ ಪಠ್ಯಪುಸ್ತಕವು, ನ್ಯಾಯಾಂಗದ ಬಗ್ಗೆ ಮಾತ್ರವೇ ಉಲ್ಲೇಖ ಮಾಡಿತ್ತು. ನ್ಯಾಯಾಂಗದಲ್ಲಿ ಇರುವ ಭ್ರಷ್ಟಾಚಾರದ ಬಗ್ಗೆ ಮಾತ್ರ ಮಾತನಾಡಿತ್ತು; ಅಲ್ಲಿ ಪ್ರಕರಣಗಳು ಭಾರೀ ಸಂಖ್ಯೆಯಲ್ಲಿ ಬಾಕಿ ಉಳಿದಿರುವುದರ ಬಗ್ಗೆ ಎಂಟನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ ಸಿದ್ಧಪಡಿಸಿದ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಹೇಳಲಾಗಿತ್ತು.

ಈ ಪಠ್ಯಪುಸ್ತಕದಲ್ಲಿ ‘Role of the Judiciary in our Society’ (ನಮ್ಮ ಸಮಾಜದಲ್ಲಿ ನ್ಯಾಯಾಂಗದ ಪಾತ್ರ) ಎಂಬ ಶೀರ್ಷಿಕೆಯ ಅಧ್ಯಾಯದಲ್ಲಿ, ನ್ಯಾಯಾಂಗದ ವಿವಿಧ ಹಂತಗಳಲ್ಲಿ ಇರುವ ಭ್ರಷ್ಟಾಚಾರದ ಬಗ್ಗೆ, ಪ್ರಕರಣಗಳು ವಿಚಾರಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬಾಕಿ ಇರುವುದರ ಬಗ್ಗೆ ಹಾಗೂ ಸಂಕೀರ್ಣವಾದ ಕಾನೂನು ಪ್ರಕ್ರಿಯೆಗಳ ಬಗ್ಗೆ ಉಲ್ಲೇಖಗಳಿದ್ದವು. ನ್ಯಾಯಾಧೀಶರು ನೀತಿಸಂಹಿತೆಗೆ ಅನುಗುಣವಾಗಿ ಇರಬೇಕು, ಉತ್ತರದಾಯಿತ್ವವನ್ನು ಕಾಪಾಡಲು ಆಂತರಿಕ ವ್ಯವಸ್ಥೆಯೊಂದು ಇದೆ ಎಂದು ಕೂಡ ಹೇಳಿತ್ತು. ಗಂಭೀರವಾದ ದೂರುಗಳು ಇರುವ ಸಂದರ್ಭಗಳಲ್ಲಿ ಸಂಸತ್ತು ಕ್ರಮ ಕೈಗೊಳ್ಳಬಹುದು, ಅಂದರೆ ಸಂಸತ್ತು ಪದಚ್ಯುತಿ ಪ್ರಕ್ರಿಯೆಯನ್ನು ಶುರು ಮಾಡಬಹುದು ಎಂದು ಪಠ್ಯಪುಸ್ತಕದಲ್ಲಿ ಹೇಳಲಾಗಿತ್ತು.

ಇಡೀ ವಿದ್ಯಮಾನವು, ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಯ ಬಹಳ ಮುಖ್ಯವಾದ ಅಂಗಗಳಲ್ಲಿ ಒಂದಾಗಿರುವ ನ್ಯಾಯಾಂಗದ ಮೇಲೆ ಒಂದು ದೋಷಾರೋಪ ಹೊರಿಸಿದಂತೆ ಇತ್ತು. ಈ ಅಧ್ಯಾಯದ ಒಟ್ಟಾರೆ ಪರಿಣಾಮವು, ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಎಲ್ಲವೂ ಸರಿಯಿಲ್ಲ ಎಂಬ ಸಂದೇಶವನ್ನು ಶಾಲಾಮಕ್ಕಳಿಗೆ ರವಾನಿಸುವುದಾಗಿತ್ತು. ಭಾರೀ ಸಂಖ್ಯೆಯಲ್ಲಿ ಪ್ರಕರಣಗಳು ವಿಚಾರಣೆಗೆ ಬಾಕಿ ಇರುವುದರ ಬಗ್ಗೆ ಹಾಗೂ ನ್ಯಾಯವು ಸಾಮಾನ್ಯ ವ್ಯಕ್ತಿಯ ಪಾಲಿಗೆ ದೂರವಾಗಿದೆ ಎಂಬುದರ ಬಗ್ಗೆಯೂ ಈ ಅಧ್ಯಾಯವು ಉಲ್ಲೇಖ ಹೊಂದಿದೆ. ಆದರೆ, ಸುಪ್ರೀಂ ಕೋರ್ಟ್ ಜಾರಿಗೆ ತಂದ ಹೊಸ ಉಪಕ್ರಮಗಳ ಬಗ್ಗೆ ಅದರಲ್ಲಿ ಉಲ್ಲೇಖವಿಲ್ಲ. ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಪಿಐಎಲ್) ಮೂಲಕ ಸುಪ್ರೀಂ ಕೋರ್ಟ್, ಬಡವರು ಹಾಗೂ ಸಮಾಜದ ಅಂಚಿನ ಸಮುದಾಯಗಳ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಹೆಜ್ಜೆ ಇರಿಸಿದೆ; ಜೀತದಾಳು ವ್ಯವಸ್ಥೆಯಿಂದ ಆರಂಭಿಸಿ, ವಿಚಾರಣೆಯ ನಿರೀಕ್ಷೆಯಲ್ಲಿ ಜೈಲುಗಳಲ್ಲಿ ವರ್ಷಗಳಿಂದ ಕಾಯುತ್ತ ಕುಳಿತಿದ್ದ ಕೈದಿಗಳ ಸಮಸ್ಯೆಯವರೆಗೆ ಹಲವು ಸಮಸ್ಯೆಗಳು ಈ ಉಪಕ್ರಮದಿಂದಾಗಿ ಇತ್ಯರ್ಥ ಕಂಡಿವೆ. ಜೀವಿಸುವ ಸ್ವಾತಂತ್ರ್ಯವನ್ನು ಖಾತರಿಪಡಿಸುವ ಸಂವಿಧಾನದ 21ನೆಯ ವಿಧಿಗೆ, ಶುದ್ಧವಾದ ಗಾಳಿ, ನೀರು ಮತ್ತು ಮನೆಗಳನ್ನು ಆಧಾರವಾಗಿ ಇರಿಸಿಕೊಂಡು ಹೊಸ ಅರ್ಥವನ್ನು ನೀಡುವ ಕ್ರಾಂತಿಕಾರಕ ತೀರ್ಪುಗಳನ್ನು ಸುಪ್ರೀಂ ಕೋರ್ಟ್ ನೀಡಿದೆ. ಕಳೆದ ಜನವರಿಯಲ್ಲಿ ಸುಪ್ರೀಂ ಕೋರ್ಟ್, ಮುಟ್ಟಿನ ಅವಧಿಯಲ್ಲಿನ ಆರೋಗ್ಯ ಹಾಗೂ ಸ್ಯಾನಿಟರಿ ಉತ್ಪನ್ನಗಳ ಲಭ್ಯತೆಯು ಸಂವಿಧಾನದ 21ನೆಯ ವಿಧಿಯ ಅಡಿಯಲ್ಲಿ ಮೂಲಭೂತ ಹಕ್ಕು ಎಂದು ಹೇಳಿದೆ.

ಹೀಗಾಗಿಯೇ, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಅವರು ಈ ಪಠ್ಯಪುಸ್ತಕದ ಬಗ್ಗೆ ಮಾಹಿತಿ ಪಡೆದುಕೊಂಡಾಗ, ಪ್ರಕರಣವನ್ನು ಸ್ವಯಂಪ್ರೇರಿತವಾಗಿ ಕೈಗೆತ್ತಿಕೊಂಡರು. ಅಲ್ಲದೆ, ಕೇಂದ್ರ ಸರ್ಕಾರವು ಉತ್ತರದಾಯಿತ್ವ ನಿಗದಿ ಮಾಡಬೇಕು ಎಂದು ಸಾರಿದರು. ವಿಚಾರಣೆ ನಡೆಯುತ್ತಿದ್ದ ಸಂದರ್ಭದಲ್ಲಿ ಅವರು ‘ತಲೆದಂಡ ಆಗಲೇಬೇಕು’ ಎಂದು ನ್ಯಾಯಾಲಯದಲ್ಲಿ ಗುಡುಗಿದರು. ಪಠ್ಯಪುಸ್ತಕವು ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ಬಗ್ಗೆ ‘ಉದ್ದೇಶಪೂರ್ವಕವಾಗಿ ಉಲ್ಲೇಖ ಮಾಡಿದೆ’ ಎಂದು ನ್ಯಾಯಾಲಯ ಹೇಳಿತು. ಇದು ನ್ಯಾಯಾಂಗದ ಬಗ್ಗೆ ಕೆಟ್ಟ ಹೆಸರು ತರುವ ಉದ್ದೇಶ ಹೊಂದಿದೆ ಎಂದು ಹೇಳಿದ ಕೋರ್ಟ್, ಪಠ್ಯಪುಸ್ತಕವನ್ನು ತಕ್ಷಣವೇ ಹಿಂದಕ್ಕೆ ಪಡೆಯಬೇಕು ಎಂದು ಆದೇಶ ಮಾಡಿತು.

ಎನ್‌ಸಿಇಆರ್‌ಟಿ ಪಠ್ಯಪುಸ್ತಕವನ್ನು ರಚಿಸುವ, ಮರುರಚಿಸುವ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ದೇಶದ ಅಕಡೆಮಿಕ್ ವಲಯದ ವಿದ್ವಾಂಸರು, ಅದರಲ್ಲೂ ಮುಖ್ಯವಾಗಿ ಇತಿಹಾಸಕಾರರು ಹಾಗೂ ಸಮಾಜ ವಿಜ್ಞಾನ ಕ್ಷೇತ್ರದವರು, ಆ ಪಠ್ಯಪುಸ್ತಕದಲ್ಲಿ ದೇಶದ ನ್ಯಾಯಾಂಗದ ಬಗ್ಗೆ ಏನು ಬರೆಯಲಾಗಿತ್ತು ಎಂಬುದನ್ನು ಗಮನಿಸಿ ಆಘಾತಕ್ಕೆ ಒಳಗಾಗಿದ್ದಾರೆ.

ಸ್ವಾತಂತ್ರ್ಯ ಬಂದ ಕಾಲದಿಂದಲೂ ದೇಶವು ಭ್ರಷ್ಟಾಚಾರದ ಜೊತೆ ಹೆಣಗಾಟ ನಡೆಸುತ್ತ ಬಂದಿದೆ. ಈ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲು ಹಾಗೂ ಪರಿಹಾರ ಕ್ರಮ ಸೂಚಿಸಲು ಹಲವು ಆಯೋಗಗಳನ್ನು, ಸಮಿತಿಗಳನ್ನು ರಚನೆ ಮಾಡಲಾಗಿದೆ. ಮೊದಲನೆಯ ‘ಆಡಳಿತ ಸುಧಾರಣಾ ಆಯೋಗ’ವು ಹಾಗೂ ನಂತರದ ಆಯೋಗವು ಈ ಸಮಸ್ಯೆಯ ಬಗ್ಗೆ ಬಹಳ ವಿಸ್ತೃತವಾಗಿ ಪರಿಶೀಲನೆ ನಡೆಸಿದೆ. ಸಂತಾನಂ ಸಮಿತಿ ಕೂಡ ಇದರ ಬಗ್ಗೆ ಪರಿಶೀಲನೆ ನಡೆಸಿದೆ. ನಂತರದಲ್ಲಿ, ಭ್ರಷ್ಟಾಚಾರದ ಸಮಸ್ಯೆಯನ್ನು ನಿಭಾಯಿಸಲು ಹೊಸ ಕಾನೂನುಗಳನ್ನು ಜಾರಿಗೆ ತರಲಾಗಿದೆ.

ಸಂತಾನಂ ಸಮಿತಿಯ ಶಿಫಾರಸುಗಳು ಭ್ರಷ್ಟಾಚಾರ ವಿರೋಧಿ ಸಂಸ್ಥೆಗಳಾದ ಕೇಂದ್ರ ವಿಚಕ್ಷಣಾ ಆಯೋಗದ ಬಲವರ್ಧನೆಗೆ ಕಾರಣವಾದವು. ನಂತರದಲ್ಲಿ ಈ ಸಂಸ್ಥೆಯು ಶಾಸನಬದ್ಧ ಅಧಿಕಾರ ಪಡೆದುಕೊಂಡಿತು. ಸರ್ಕಾರದ ಹಂತದಲ್ಲಿನ ಭ್ರಷ್ಟಾಚಾರವನ್ನು ಹತ್ತಿಕ್ಕಲು ಕೇಂದ್ರೀಯ ತನಿಖಾ ಸಂಸ್ಥೆಯನ್ನು (ಸಿಬಿಐ) ರಚಿಸಲಾಯಿತು. ಸಚಿವರು ಮತ್ತು ಅಧಿಕಾರಿಗಳು ತಮ್ಮ ಆಸ್ತಿಗಳು ಹಾಗೂ ಹಣಕಾಸಿನ ಹೊರೆಗಳ ಬಗ್ಗೆ ಮಾಹಿತಿ ನೀಡಬೇಕು ಎಂಬ ನಿಯಮ ಜಾರಿಗೆ ಬಂತು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯನ್ನು ದೊಡ್ಡ ಪ್ರಮಾಣದಲ್ಲಿ ಪರಿಷ್ಕರಿಸಲಾಯಿತು. ಸರ್ಕಾರದ ವ್ಯವಸ್ಥೆಯಲ್ಲಿ ಉನ್ನತ ಹುದ್ದೆಗಳಲ್ಲಿ ಇರುವವರಿಗೆಲ್ಲ ಅನ್ವಯವಾಗುವ ನೀತಿ ಸಂಹಿತೆ ರೂಪಿಸಲಾಯಿತು. ನಂತರದ ಅವಧಿಯಲ್ಲಿ, ರಾಜಕೀಯ ಪಕ್ಷಗಳು ತಾವು ಸ್ವೀಕರಿಸಿದ ದೇಣಿಗೆ ಬಗ್ಗೆ ಮಾಹಿತಿ ಒದಗಿಸಬೇಕು ಎಂಬ ನಿಯಮ ರೂಪಿಸಲಾಯಿತು.

ಸಂತಾನಂ ಸಮಿತಿ ಮತ್ತು ಕಳೆದ ಏಳು ದಶಕಗಳಲ್ಲಿ ಆಗಿರುವ ಅಂತಹ ಇತರ ಅನೇಕ ಸಮಿತಿಗಳ ಗಮನವು ಕಾರ್ಯಾಂಗದಲ್ಲಿನ ಭ್ರಷ್ಟಾಚಾರ ಹಾಗೂ ಚುನಾಯಿತ ಪ್ರತಿನಿಧಿಗಳಲ್ಲಿನ ಭ್ರಷ್ಟಾಚಾರದ ಬಗ್ಗೆ ಇದೆ. ಸಮಿತಿಗಳು ಹಾಗೂ ಆಯೋಗಗಳು ರಾಜಕೀಯ ಮತ್ತು ಅಧಿಕಾರಶಾಹಿ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರದ ಬಗ್ಗೆ ಬಹಳಷ್ಟು ತಲೆಕೆಡಿಸಿಕೊಂಡಿವೆ. ಕಾನೂನಿನಲ್ಲಿ ದೊಡ್ಡ ಪ್ರಮಾಣದ ಬದಲಾವಣೆ, ನ್ಯಾಯಾಲಯದ ಪ್ರಮುಖ ತೀರ್ಪುಗಳ ನಂತರವೂ ಸಮಸ್ಯೆಯು ಬೃಹತ್ ಆಯಾಮ ಪಡೆದುಕೊಂಡಿದೆ.

ಪ್ರಭುತ್ವದ ಅಂಗವಾಗಿರುವ ನ್ಯಾಯಾಂಗದ ಬಗ್ಗೆ ಆಗ ಹೆಚ್ಚು ಗಮನಹರಿಸಲಿಲ್ಲ. ಏಕೆಂದರೆ, ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ಬಗ್ಗೆ ಯಾರೂ ಆಲೋಚಿಸಲಿಲ್ಲ. ನ್ಯಾಯಾಧೀಶ, ನ್ಯಾಯಮೂರ್ತಿಯೊಬ್ಬರು ಭ್ರಷ್ಟರಾಗಬಹುದು ಎಂಬುದು ಆಲೋಚನೆಗೂ ಮೀರಿದ ಸಂಗತಿಯಾಗಿತ್ತು. ಆದರೆ, ಕೆಲವು ನ್ಯಾಯಮೂರ್ತಿಗಳ ವಿರುದ್ಧ, ಮುಖ್ಯವಾಗಿ ವಿ. ರಾಮಸ್ವಾಮಿ ಅವರ ವಿರುದ್ಧ, ಪದಚ್ಯುತಿ ಪ್ರಕ್ರಿಯೆ ಶುರುವಾದಾಗ ದೇಶವು ಈ ವಿಚಾರ ನಿರ್ವಹಿಸಬೇಕಾಯಿತು. ಆದರೆ ಇವು ಬಿಡಿ ಪ್ರಕರಣಗಳು. ರಾಜಕಾರಣ ಹಾಗೂ ಅಧಿಕಾರಶಾಹಿ ವ್ಯವಸ್ಥೆಯಲ್ಲಿ ರಾಕ್ಷಸ ರೂಪದಲ್ಲಿ ಬೆಳೆದಿರುವ ಬಗೆಯ ಸಮಸ್ಯೆ ಅಲ್ಲ ಇದು. ಹೀಗಿರುವಾಗ, ಎನ್‌ಸಿಇಆರ್‌ಟಿ ಪಠ್ಯಪುಸ್ತಕ ಬರೆದವರು ನ್ಯಾಯಾಂಗವನ್ನು ಮಾತ್ರ ಪ್ರತ್ಯೇಕವಾಗಿ ಉಲ್ಲೇಖಿಸುವುದು ಅತಾರ್ಕಿಕ. ಸರ್ಕಾರದ ಅಧಿಕಾರಶಾಹಿ ವ್ಯವಸ್ಥೆಯು ಈ ಅಧ್ಯಾಯವು ಪಠ್ಯದ ಭಾಗವಾಗಿ ಮುದ್ರಣಕ್ಕೆ ಹೋಗಲು ಅವಕಾಶ ಮಾಡಿಕೊಟ್ಟಿದ್ದು ಹೇಗೆ?

ಪಠ್ಯಪುಸ್ತಕದಲ್ಲಿನ ವಿವಾದಾಸ್ಪದ ಉಲ್ಲೇಖವು ದೇಶದ ಪ್ರಜಾತಂತ್ರ ವ್ಯವಸ್ಥೆಯ ಬೇರುಗಳಿಗೆ, ಸಂವಿಧಾನವು ದೇಶದ ವಿವಿಧ ಅಂಗಗಳ ನಡುವೆ ರೂಪಿಸಿರುವ ಸಮತೋಲನಕ್ಕೆ ಕೊಟ್ಟ ಏಟು. ನ್ಯಾಯಾಂಗವು ಭ್ರಷ್ಟಗೊಂಡಿದೆ ಎಂಬ ಆಲೋಚನೆಯೊಂದಿಗೆ ವಿದ್ಯಾರ್ಥಿಗಳು ಪ್ರೌಢಶಿಕ್ಷಣ ಹಂತವನ್ನು ದಾಟಿ ಮುನ್ನಡೆದರೆ, ನಮ್ಮ ಪ್ರಜಾತಂತ್ರ ವ್ಯವಸ್ಥೆಯು ಎಷ್ಟು ಸುರಕ್ಷಿತವಾಗಿ ಅಥವಾ ಎಷ್ಟು ಬಲಿಷ್ಠವಾಗಿ ಉಳಿಯಬಲ್ಲದು?

ಆದರೆ, ಅಂತಿಮ ಫಲಿತಾಂಶ ಏನಾಗಿದೆ ಅಂದರೆ, ಇದು ಕೇಂದ್ರ ಸರ್ಕಾರಕ್ಕೆ ಕೆಟ್ಟ ಹೆಸರು ತಂದಿದೆ. ಕೇಂದ್ರ ಸರ್ಕಾರವು ಎನ್‌ಸಿಇಆರ್‌ಟಿ ಹೆಗಲ ಮೇಲೆ ಬಂದೂಕು ಇರಿಸಿ, ನ್ಯಾಯಾಂಗದ ವಿರುದ್ಧ ಗುಂಡು ಹಾರಿಸುತ್ತಿದೆ ಎಂಬ ಭಾವನೆಯನ್ನು ಮೂಡಿಸಿದೆ. ಇದು ಸಂಪೂರ್ಣವಾಗಿ ಸುಳ್ಳು. ಸರ್ಕಾರದ ನೀತಿಗಳನ್ನು ಟೀಕಿಸುವ ಬಗೆಯಲ್ಲಿ ಕೆಲವು ಹೈಕೋರ್ಟ್‌ಗಳು ಹಾಗೂ ಸುಪ್ರೀಂ ಕೋರ್ಟ್ ತೀರ್ಪುಗಳನ್ನು ನೀಡಿದ್ದರೂ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ನ್ಯಾಯಾಂಗದ ಜೊತೆ ಯಾವುದೇ ಸಂಘರ್ಷ ಉಂಟಾಗದಂತೆ ನೋಡಿಕೊಂಡಿದೆ. ಅರಾವಳಿ ಪರ್ವತ ಪ್ರದೇಶಗಳ ವಿಚಾರವಾಗಿ ಕೋರ್ಟ್ ಈಚೆಗೆ ನೀಡಿರುವ ಆದೇಶವನ್ನು ಇಲ್ಲಿ ಉದಾಹರಣೆಯಾಗಿ ಉಲ್ಲೇಖಿಸಬಹುದು.

ಇದಕ್ಕೆಲ್ಲ ಕಾರಣರಾದ ವ್ಯಕ್ತಿಗಳಿಗೆ ಕಠಿಣ ಶಿಕ್ಷೆ ಆಗುವಂತೆ ಸರ್ಕಾರವು ನೋಡಿಕೊಳ್ಳಬೇಕು, ತಾನು ಕೈಗೊಂಡ ಕ್ರಮಗಳನ್ನು ಅದು ಸಾರ್ವಜನಿಕವಾಗಿ ಪ್ರಕಟಿಸಬೇಕು. ಕಿಡಿಗೇಡಿತನವನ್ನು ಮೊದಲೇ ಗುರುತಿಸಿ, ಅದು ಪಠ್ಯಪುಸ್ತಕದ ಭಾಗವಾಗದಂತೆ ನೋಡಿಕೊಳ್ಳುವ ವಿವೇಕವನ್ನು ಕೇಂದ್ರ ಸರ್ಕಾರ ಹೊಂದಿರಬೇಕಿತ್ತು. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರು ಮಾತನಾಡುವವರೆಗೆ ಕಾಯುವ ಅಗತ್ಯ ಇರಲಿಲ್ಲ.



ವಾಚಕರ ವಾಣಿ

ಕುಡಿಯುವ ನೀರು ಹಾಲಾಹಲ ಆದೊಡೆ...

ರಾಜ್ಯದ ಕುಡಿಯುವ ನೀರಿನ ಮಾದರಿಗಳಲ್ಲಿ ಫ್ಲೋರೈಡ್, ಆರ್ಸೆನಿಕ್ ಮತ್ತು ನೈಟ್ರೇಟ್ ಪ್ರಮಾಣವು ‘ವಿಶ್ವ ಆರೋಗ್ಯ ಸಂಸ್ಥೆ’ ನಿಗದಿಪಡಿಸಿದ ಸುರಕ್ಷಿತ ಮಿತಿಯನ್ನು ಮೀರಿದೆ ಎಂಬ ವರದಿ ಬೆಚ್ಚಿಬೀಳಿಸುವಂತಿದೆ. ರಾಜ್ಯದ 8,000ಕ್ಕೂ ಹೆಚ್ಚು ಜನವಸತಿ ಪ್ರದೇಶಗಳಲ್ಲಿ ನೀರಿನ ಗುಣಮಟ್ಟ ಹದಗೆಟ್ಟಿರುವುದು ಆಡಳಿತದ ದಿವ್ಯ ನಿರ್ಲಕ್ಷ್ಯಕ್ಕೆ ಸಾಕ್ಷಿ. ಕಲುಷಿತ ನೀರಿನಿಂದ ಉಂಟಾಗುವ ಕಾಯಿಲೆಗಳು ನಮ್ಮ ರಾಜ್ಯದ ಆರೋಗ್ಯ ಬಜೆಟ್‌ನ ಶೇ 40ರಷ್ಟು ಪಾಲನ್ನು ನುಂಗಿಹಾಕುತ್ತಿವೆ. ಸರ್ಕಾರ ‘ಜಲ ಜೀವನ್ ಮಿಷನ್’ ಯೋಜನೆಯಡಿ ನಲ್ಲಿಗಳನ್ನು ಅಳವಡಿಸಿದರೆ ಸಾಲದು; ಆ ನಲ್ಲಿಗಳಲ್ಲಿ ಹರಿಯುವ ನೀರು ಜೀವದಾಯಕವಾಗಿರುವಂತೆ ನೋಡಿಕೊಳ್ಳಬೇಕು. ಕೇಂದ್ರ ಸರ್ಕಾರವು ತಕ್ಷಣದ ತಾಂತ್ರಿಕ ಪುನಶ್ಚೇತನ ಅನುದಾನ ನೀಡಬೇಕು ಹಾಗೂ ರಾಜ್ಯವು ಗ್ರಾಮ ಮಟ್ಟದಲ್ಲಿ ನೈಜ ಸಮಯದ ನೀರಿನ ಗುಣಮಟ್ಟ ತಪಾಸಣಾ ವ್ಯವಸ್ಥೆ ಜಾರಿಗೊಳಿಸಬೇಕು.

ವಿಜಯಕುಮಾರ ಎಚ್.ಕೆ., ರಾಯಚೂರು

‘ಮೌಢ್ಯ ನಿರ್ಮೂಲನಾ ಪಡೆ’ಗಳು ಬೇಕು

ತುಮಕೂರು ಜಿಲ್ಲೆಯ ಹೊಳವನಹಳ್ಳಿಯಲ್ಲಿ ಕಸ್ತೂರಬಾ ಬಾಲಿಕಾ ನಿಲಯವನ್ನು ಕಟ್ಟಿ ಎಂಟು ವರ್ಷಗಳಾದರೂ ಖಾಲಿಯಾಗಿಯೇ ಉಳಿಯಲು ಕಾರಣ, ಆ ಹಳ್ಳಿಯ ಜನರ ಮೂಢನಂಬಿಕೆ! ಬಾಲಿಕಾ ನಿಲಯದ ಹತ್ತಿರದಲ್ಲಿಯೇ ಗ್ರಾಮದೇವತೆಯ ಮಂದಿರವಿದ್ದು, ಅದರ ಹತ್ತಿರ ಮುಟ್ಟಿನ ಬಾಲಕಿಯರು ಹಾಯಕೂಡದು ಎಂಬ ಕಟ್ಟಳೆಯನ್ನು ಗ್ರಾಮೀಣ ಜನರು ಹಾಕಿದ್ದರಿಂದ ಇಂದಿನವರೆಗೆ ಬಾಲಿಕಾ ನಿಲಯಕ್ಕೆ ಯಾವ ಹುಡುಗಿಯೂ ಕಾಲಿಟ್ಟಿಲ್ಲ.

ಆಧುನಿಕ ಯುಗದ ವೈಚಾರಿಕತೆಯು ಗ್ರಾಮಗ್ರಾಮಗಳಲ್ಲಿ ನುಗ್ಗುತ್ತಿದ್ದರೂ ಅದನ್ನು ಅಲ್ಲಿಯ ಮೂಢನಂಬಿಕೆಗಳು ತಡೆದು ನಿಲ್ಲಿಸಿವೆ. ಪ್ರಸ್ತುತ, ಸರ್ಕಾರವೇ ನಿರುದ್ಯೋಗಿ ಯುವಕ ಯುವತಿಯರನ್ನು ಸಂಘಟಿಸಿ ಜಿಲ್ಲೆಗೊಂದರಂತೆ ಮೂಢನಂಬಿಕೆಯ ನಿರ್ಮೂಲನಾ ಪಡೆಯನ್ನು ರೂಪಿಸಿ, ಅವರನ್ನು ಗ್ರಾಮದ ಮನೆಮನೆಯನ್ನು ಸಂಪರ್ಕಿಸಿ ಮೂಢನಂಬಿಕೆಗಳ ಬಗ್ಗೆ ತಿಳಿ ಹೇಳಲು ಬಳಸಬೇಕು. ಮೂಢನಂಬಿಕೆಗಳ ನಿರ್ಮೂಲನೆ ತುರ್ತುಕಾರ್ಯ ಎಂದು ಎಲ್ಲರೂ ತಿಳಿಯಬೇಕು.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಚಪ್ಪಲಿ ಧರಿಸಿ ನಮನ ಅಪಮಾನವಲ್ಲ

ಹಿರಿಯ ಲೇಖಕಿ ಬಾನು ಮುಷ್ತಾಕ್ ಅವರು ಚಪ್ಪಲಿ ಧರಿಸಿಕೊಂಡು ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ನಮನ ಸಲ್ಲಿಸಿರುವ ನಡವಳಿಕೆಯನ್ನು ಕೆಲವರು ಟೀಕಿಸುತ್ತಿದ್ದಾರೆ. ಆದರೆ, ಈ ನಡೆಯನ್ನು ಬಾಬಾ ಸಾಹೇಬರಿಗೆ ತೋರಿದ ಅವಮರ್ಯಾದೆ ಎಂದು ಯಾರೂ ಭಾವಿಸಬಾರದು.

ಚಪ್ಪಲಿಗಳು ಶ್ರಮಜೀವಿಗಳ ಆತ್ಮಗೌರವದ ಪ್ರತೀಕ. ಬಸವಣ್ಣನವರು ಶರಣ ಸಮಗಾರ ಹರಳಯ್ಯ ನೀಡಿದ ಚಪ್ಪಲಿಗಳನ್ನು ನೆತ್ತಿಯ ಮೇಲೆ ಹೊತ್ತುಕೊಂಡು ಗೌರವಿಸಿದ್ದಾರೆ. ಮಂಟೇಸ್ವಾಮಿ ಕಾವ್ಯ ಮತ್ತು ಮಲೆಮಹದೇಶ್ವರ ಕಾವ್ಯಗಳಲ್ಲಿಯೂ ಮೌಖಿಕರು ಚಮ್ಮಾವುಗೆಗಳನ್ನು ಗೌರವಿಸಿ ಕಾವ್ಯಗಳನ್ನು ನಿರೂಪಿಸಿದ್ದಾರೆ. ಭರತನು ಹದಿನಾಲ್ಕು ವರ್ಷಗಳ ಕಾಲ ಶ್ರೀರಾಮನ ಪಾದುಕೆಗಳನ್ನು ಸಿಂಹಾಸನದ ಮೇಲಿರಿಸಿ ರಾಜ್ಯಭಾರ ಮಾಡಿದನೆಂದು ರಾಮಾಯಣ ಕಾವ್ಯದಲ್ಲಿಯೂ ಚಪ್ಪಲಿಗಳಿಗೆ ಪವಿತ್ರ ಸ್ಥಾನವಿದೆ. ಶರಣ ತಿಂಥಣಿ ಮೋನಪ್ಪಯ್ಯ ಕೂಡಾ ಚಪ್ಪಲಿಗೆ ಪವಿತ್ರ ಸ್ಥಾನ ನೀಡಿದ್ದಾರೆ. ಅನೇಕ ಸಂತ ಮಹಾಂತರ ಜೀವಗದ್ದುಗೆಗಳಲ್ಲಿ ಪಾದುಕೆಗಳಿಗೆ ಅಗ್ರ ಪೂಜಾಗೌರವ ಸಲ್ಲಿಸುವ ಪದ್ಧತಿ ನಮ್ಮ ಗುರುಪಂಥಗಳಲ್ಲಿದೆ. ಹಾಗಾಗಿ, ಬಾನು ಮುಷ್ತಾಕ್ ಅವರು ಚಪ್ಪಲಿ ಧರಿಸಿಕೊಂಡು ಅಂಬೇಡ್ಕರ್ ಅವರಿಗೆ ನಮನ ಸಲ್ಲಿಸಿರುವ ನಡವಳಿಕೆಯನ್ನು ಬಾಬಾ ಸಾಹೇಬರ ವಿರುದ್ಧ ಅವಮರ್ಯಾದೆ ಎಂದು ಭಾವಿಸಬಾರದು.

ವಡ್ಡಗೆರೆ ನಾಗರಾಜಯ್ಯ, ಬೆಂಗಳೂರು

ತಂಬಾಕು ಕೃಷಿ: ಪರ್ಯಾಯ ಯೋಚಿಸಲಿ

ದರ ಕುಸಿತದ ಹಿನ್ನೆಲೆಯಲ್ಲಿ ತಂಬಾಕು ಬೆಳೆಗಾರರು ಪ್ರತಿಭಟನೆ ನಡೆಸುತ್ತಿದ್ದಾರೆ. ರೈತರಿಗೆ ಅವರ ಪರಿಶ್ರಮದ ಬೆಲೆ ದೊರೆಯಬೇಕು ಎನ್ನುವುದು ಸರಿ. ರೈತರ ಹಿತಾಸಕ್ತಿಯೊಂದಿಗೇ, ತಂಬಾಕು ಬಳಕೆಯಿಂದ ಉಂಟಾಗುವ ಅನೇಕ ಆರೋಗ್ಯ ಸಮಸ್ಯೆಗಳನ್ನೂ ಗಮನಿಸಬೇಕು. ತಂಬಾಕು ಬೆಳೆ ಬದಲಾಗಿ ಆಹಾರ ಧಾನ್ಯಗಳು, ತರಕಾರಿ ಹಾಗೂ ಇತರ ಉಪಯುಕ್ತ ಬೆಳೆಗಳಿಗೆ ಬೆಂಬಲ ಬೆಲೆ ನೀಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಹಾಗೂ ತಂಬಾಕು ಕೃಷಿಕರು ಪರ್ಯಾಯ ಬೆಳೆಪದ್ಧತಿ ರೂಢಿಸಿಕೊಳ್ಳಲು ಉತ್ತೇಜಿಸಬೇಕು. ಕೃಷಿ ನೀತಿಯಲ್ಲಿ ಬದಲಾವಣೆ ಮಾಡಿ ರೈತರಿಗೆ ತರಬೇತಿ, ಸಬ್ಸಿಡಿ ಹಾಗೂ ಮಾರುಕಟ್ಟೆ ಸೌಲಭ್ಯಗಳನ್ನು ನೀಡುವುದು ಅಗತ್ಯ. ಈ ರೀತಿಯಲ್ಲಿ ಕ್ರಮ ಕೈಗೊಂಡರೆ ಮಾತ್ರ ‘ತಂಬಾಕು ಮುಕ್ತ ಕರ್ನಾಟಕ’ ಎಂಬ ಗುರಿಯನ್ನು ಸಾಧಿಸಲು ಸಾಧ್ಯವಾಗುತ್ತದೆ.


ಮಹಾಂತೇಶ ಪೂಜಾರಿ, ವಿಜಯಪುರ

ಕುಟುಂಬ ರಾಜಕಾರಣಕ್ಕೆ ಕೊನೆ ಇಲ್ಲವೇ?

ಮುಖ್ಯಮಂತ್ರಿ ಸಿದ್ದರಾಮಯ್ಯನವರು ‘ಉಸಿರು ಇರುವವರೆಗೂ ರಾಜಕೀಯದಲ್ಲಿ ಇರುತ್ತೇನೆ, ನನ್ನನ್ನು ಬೆಳೆಸಿದಂತೆ ನನ್ನ ಮಗ ಯತೀಂದ್ರ ಅವರನ್ನೂ ಬೆಳೆಸಿ’ ಎಂದು ಸಾರ್ವಜನಿಕ ಸಭೆಯೊಂದರಲ್ಲಿ ಕೇಳಿಕೊಂಡಿರುವ ಸುದ್ದಿಯನ್ನು (ಪ್ರ.ವಾ., ಮಾರ್ಚ್ 14) ಓದಿದ ನನಗೆ ಥಟ್ಟನೆ ನೆನಪಿಗೆ ಬಂದದ್ದು ಕುಣಿಗಲ್ ಕ್ಷೇತ್ರದ ಶಾಸಕರಾಗಿದ್ದ ವೈ.ಕೆ. ರಾಮಯ್ಯನವರು. ಸಾಯುವ ಕೊನೆಯ ದಿನದವರೆಗೂ ಮಕ್ಕಳನ್ನಾಗಲೀ, ಹೆಂಡತಿಯನ್ನಾಗಲೀ ರಾಜಕೀಯ ವೇದಿಕೆಯಲ್ಲಿ ಸುಳಿಯಲು ಅವರು ಬಿಡಲಿಲ್ಲ. ಕುಣಿಗಲ್ ಕ್ಷೇತ್ರದ ಪ್ರತಿನಿಧಿಯಾಗಿದ್ದ ಹುಚ್ಚಮಾಸ್ತಿಗೌಡರ ಕುಟುಂಬವೂ ಹಾಗೆಯೇ ಇತ್ತು. ಅವರು ಶಾಸಕರಿದ್ದರೂ ಬಸ್ಸಿನಲ್ಲಿ ಓಡಾಡುತ್ತಿದ್ದರು. ಆಗಿನ ರಾಜಕಾರಣದಲ್ಲಿ ಅಂತಹ ಅನೇಕರನ್ನು ನೋಡಬಹುದಾಗಿತ್ತು. ಈಗ ಹೆಂಡತಿ, ಮಕ್ಕಳು, ಸಂಬಂಧಿಗಳನ್ನು ಬೆಳೆಸುವ ರಾಜಕಾರಣ ವಿಜೃಂಭಿಸುತ್ತಿದೆ. ಪ್ರತಿಭೆ, ಆಸಕ್ತಿ, ಕಲಿಕೆ, ನಾಯಕತ್ವದ ಗುಣಗಳ ಬದಲಿಗೆ ಹಣ, ಜಾತಿ ಮತ್ತು ಅಧಿಕಾರವೇ ರಾಜಕಾರಣವನ್ನು ರೂಪಿಸುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತಿರುವುದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ದುರಂತವೇ ಸರಿ.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಕಲೆ–ಕಲಾವಿದ ಅಭಿನ್ನ



ವೈರಮುತ್ತು ಅವರಿಗೆ ಜ್ಞಾನಪೀಠ ಪ್ರಶಸ್ತಿ ನೀಡುವುದು ಅವರನ್ನು ಸಬಲಗೊಳಿಸುತ್ತದೆ ಮತ್ತು ಅವರ ವಿರುದ್ಧ ಎದ್ದು ನಿಲ್ಲುವ ಧೈರ್ಯ ತೋರುವ ಎಲ್ಲಾ ಮಹಿಳೆಯರನ್ನು ಮತ್ತಷ್ಟು ಮೂಲೆಗುಂಪು ಮಾಡುತ್ತದೆ. ಓರ್ವ ಕಲಾವಿದ ಮತ್ತು ಆತ ಸೃಷ್ಟಿಸುವ ಕಲೆಯನ್ನು ಪ್ರತ್ಯೇಕಗೊಳಿಸಿ ನೋಡುವುದು ಸಾಧ್ಯವಿಲ್ಲ ಮತ್ತು ನೋಡಬಾರದು.

ಟಿ.ಎಂ. ಕೃಷ್ಣ, ಸಂಗೀತ ವಿದ್ವಾಂಸ ಮತ್ತು ಲೇಖಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಮುಖಚಹರೆ ಬಯೋಮೆಟ್ರಿಕ್ ಪದ್ಧತಿಯಿಂದ ರಾಜ್ಯವೊಂದರಲ್ಲೇ 33,972 ನಕಲಿ ಜಾಬ್ ಕಾರ್ಡ್‌ಗಳು ಪತ್ತೆಯಾಗಿರುವುದು ಹಿಂದಿನ ವ್ಯವಸ್ಥೆಯ ಲೂಟಿ ಕೋಟೆಗೆ ಬಿದ್ದ ದೊಡ್ಡ ಹೊಡೆತ. ಸತ್ತವರ ಹೆಸರಲ್ಲಿ, ಊರಲ್ಲಿಲ್ಲದವರ ಹೆಸರಲ್ಲಿ ಹಣ ಗುಳುಂ ಮಾಡುತ್ತಿದ್ದವರ ಕಳ್ಳಾಟಕ್ಕೆ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಬ್ರೇಕ್ ಹಾಕಿದೆ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಶುಕ್ರವಾರ, 16-3-2001

• ಮಮತಾ ಬೆಂಬಲ ವಾಪಸ್, ಜಾರ್ಜ್ ರಾಜೀನಾಮೆ

ನವದೆಹಲಿ, ಮಾರ್ಚ್ 15– ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರ ರಾಜೀನಾಮೆಗೆ ಒತ್ತಾಯಿಸಿ ರೈಲ್ವೆ ಸಚಿವೆ ಮಮತಾ ಬ್ಯಾನರ್ಜಿ ಅವರು ಎನ್‌ಡಿಎ ಸರ್ಕಾರಕ್ಕೆ ಬೆಂಬಲ ಹಿಂತೆಗೆದುಕೊಂಡ ಕೆಲವೇ ಗಂಟೆಗಳಲ್ಲಿ ಫರ್ನಾಂಡಿಸ್ ಪದತ್ಯಾಗ ಮಾಡಿದ ಕ್ಷಿಪ್ರ ರಾಜಕೀಯ ಬೆಳವಣಿಗೆ ಇಂದು ಪ್ರಧಾನಿ ವಾಜಪೇಯಿ ಅವರ ಸರ್ಕಾರವನ್ನು ಬಿಕ್ಕಟ್ಟಿಗೆ ಸಿಲುಕಿಸಿದೆ.

ಫರ್ನಾಂಡಿಸ್ ರಾಜೀನಾಮೆ ನೀಡಿದ ಜತೆಯಲ್ಲೇ ಸಮತಾ ಪಕ್ಷಕ್ಕೆ ಸೇರಿದ ಇತರ ಸಚಿವರಾದ ಕೃಷಿ ಸಚಿವ ನಿತೀಶ್ ಕುಮಾರ್, ರೈಲ್ವೆ ಖಾತೆಯ ರಾಜ್ಯ ಸಚಿವ ದಿಗ್ವಿಜಯ ಸಿಂಗ್ ಹಾಗೂ ಆಹಾರ ಮತ್ತು ಗ್ರಾಹಕ ಹಕ್ಕುಗಳ ವ್ಯವಹಾರಗಳ ಸಚಿವ ವಿ. ಶ್ರೀನಿವಾಸ ಪ್ರಸಾದ್ ಅವರು ಸಹ ರಾಜೀನಾಮೆ ಸಲ್ಲಿಸಿದ್ದಾರೆ. ಆದರೆ, ರಾಜೀನಾಮೆ ಪತ್ರಗಳನ್ನು ಪ್ರಧಾನಿ ತಿರಸ್ಕರಿಸಿದ್ದಾರೆ.

• ಮಂಡೇಲಾಗೆ ಗಾಂಧಿ ಪ್ರಶಸ್ತಿ

ನವದೆಹಲಿ, ಮಾರ್ಚ್ 15– ನೆಲ್ಸನ್ ಮಂಡೇಲಾ ಹಾಗೂ ಬಾಂಗ್ಲಾದೇಶದ ಗ್ರಾಮೀಣ ಬ್ಯಾಂಕುಗಳಿಗೆ ಪ್ರತಿಷ್ಠಿತ ಅಂತರರಾಷ್ಟ್ರೀಯ ಗಾಂಧಿ ಶಾಂತಿ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ.

75 ವರ್ಷಗಳ ಹಿಂದೆ

ಶುಕ್ರವಾರ, 16-3-1951

• ಪಾರ್ಲಿಮೆಂಟ್ ಚರಿತ್ರೆಯಲ್ಲಿ ಮೊದಲ ಬಾರಿ ಭಿನ್ನಮತ

ನವದೆಹಲಿ, ಮಾರ್ಚ್ 15– ಆದಾಯ ತೆರಿಗೆಯ (ತನಿಖೆಯ ಸಮಿತಿ) ತಿದ್ದುಪಡಿ ಮಸೂದೆಗೆ ಸೂಚಿಸಲಾದ ತಿದ್ದುಪಡಿಯೊಂದರ ಚರ್ಚೆಗೆ ಸಂಬಂಧಿಸಿದಂತೆ ದೇಶದ ಪಾರ್ಲಿಮೆಂಟ್ ಸಭೆ ತನ್ನ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಇಬ್ಭಾಗವಾಯಿತು.

ತೆರಿಗೆ ಕೊಡುವುದರಲ್ಲಿ ಮೋಸ ಮಾಡಿರುವವರ ಹೆಸರುಗಳನ್ನು ಪ್ರಕಟಿಸಬೇಕೆಂದು ಹೆಚ್.ವಿ. ಕಾಮತರು ಸೂಚಿಸಿದ ಈ ತಿದ್ದುಪಡಿಯನ್ನು ಆರ್ಥಿಕ ಸಚಿವರಾದ ದೇಶಮುಖರು ವಿರೋಧಿಸಿದರು. ಸಭೆ ಬಹುಮತದಿಂದ ತಿದ್ದುಪಡಿಯನ್ನು ವಿರೋಧಿಸಿತು. 23 ಮಂದಿ ತಿದ್ದುಪಡಿಯ ಪರವಾಗಿಯೂ, 74 ಮಂದಿ ವಿರುದ್ಧವಾಗಿಯೂ ಓಟು ಮಾಡಿದರು.

ಚುರುಮುರಿ



ಧನಾತ್ಮಕ ಚಿಂತನೆ

• ಸುಮಂಗಲಾ

ಗ್ಯಾಸ್ ಆರ್ಡರ್ ಮಾಡಿ ವಾರದ ಮೇಲಾಗಿದ್ದರೂ ಇನ್ನೂ ಬಂದಿರಲಿಲ್ಲ.

‘ಈಗ ಬಳಸ್ತಾ ಇರದು ಖಾಲಿಯಾದ್ರೆ ಅಷ್ಟೇ ಕಥೆ!’ ಎಂದೆ ಚಿಂತೆಯಿಂದ.

‘ಒಂದೇ ಹೊತ್ತು ಅಡುಗೆ ಮಾಡ್ರಿ. ಉಳಿದಂತೆ ಕೋಸುಂಬರಿ, ಹಸಿ ತರಕಾರಿ, ಹಣ್ಣುಹಂಪಲ ತಿನ್ನಿರಿ. ಆರೋಗ್ಯಕ್ಕೂ ವಳ್ಳೇದು!’ ಬೆಕ್ಕಣ್ಣ ಉಪದೇಶಿಸಿತು.

‘ಒಂದೇ ಹೊತ್ತು ಅಡುಗೆಗಾದ್ರೂ ಗ್ಯಾಸ್ ಬೇಕಲ್ಲಲೇ... ಎಲ್‌ಪಿಜಿ ಪೂರೈಕೆ ಕಡಿಮೆಯಾಗೈತಿ’.

‘ಎಲ್‌ಪಿಜಿ ಸಿಲಿಂಡರ್ ಅಭಾವ ಅಂತ ಮಂದಿ ಸುಳ್ಳೇ ವದಂತಿ ಹಬ್ಬಿಸತಿದ್ದಾರೆ. ಅಂಥೋರು ದೇಶಕ್ಕೂ ಹಾನಿ ಮಾಡತಾರೆ ಅಂತ ಮೋದಿಮಾಮಾರು ಗರಂ ಆಗ್ಯಾರೆ’ ಎಂದು ಬೆಕ್ಕಣ್ಣ ಪೇಪರು ಓದುತ್ತ ಹೇಳಿತು.

‘ಗ್ಯಾಸ್ ಏಜೆನ್ಸಿಗಳ ಮುಂದೆ ಬೆಳಗಿನಿಂದ ಕ್ಯೂ ನಿಂತು ಬಿಸಲಾಗೆ ಒಣಗಿ ಹಪ್ಪಳ ಆಗಾಕೆ ಮಂದಿಗೆ ಹುಚ್ ಹಿಡಿದೈತೇನು?’ ಎಂದೆ ನಾನೂ ಗರಂ ಆಗಿ.

ಬೆಕ್ಕಣ್ಣ ಒಳಹೋಗಿ ಅರ್ಧ ಲೋಟ ನೀರು ತಂದಿತು.

‘ನೋಡು, ಅರ್ಧ ಲೋಟ ಖಾಲಿ ಅನ್ನಬಾರದು. ಅರ್ಧ ತುಂಬೈತಿ ಅನ್ನಬಕು’ ಎಂದಿತು.

‘ಲೋಟ ಅರ್ಧ ಖಾಲಿ ಇರೂದೂ ಸತ್ಯ ತಾನೆ?’ ಎಂದೆ.

‘ಊಹೂಂ, ಅರ್ಧ ತುಂಬೈತಿ! ಸಿಲಿಂಡರ್ ಇಲ್ಲ, ಖಾಲಿ ಅನ್ನಬಾರದು. ಸಿಲಿಂಡರುಗಳು ಅದಾವು, ಒಳಗೆ ಗ್ಯಾಸ್ ತುಂಬಬೇಕಷ್ಟೆ ಅನ್ನಬಕು. ದೇಶಕ್ಕಾಗಿ ಹಿಂಗೆ ಧನಾತ್ಮಕ ಚಿಂತನೆ ಮಾಡಬಕು’ ಎಂದು ಬೆಕ್ಕಣ್ಣ ವಾದಿಸಿತು.

‘ತಲೀನೆ ಇಲ್ಲ, ತಲಿ ಖಾಲಿ ಅಂತೆಲ್ಲ ಅನ್ನಬಾರದು. ತಲಿ ವಳಗೆ ಮಿದುಳು ಕಡಿಮೆ ಅಷ್ಟೇ ಅನ್ನಬಕು!’ ಎಂದು ನಕ್ಕೆ.

‘ಕರೆಕ್ಟ್! ಗ್ಯಾಸ್ ಖಾಲಿ, ಸಿಗತಾ ಇಲ್ಲ... ಇಂತಹ ಅಭಾವ ಚಿಂತನೆ ಕೈಬಿಡಬೇಕು. ಎಲ್‌ಪಿಜಿ ಕೊಲ್ಲಿ ದೇಶಗಳಲ್ಲಿ ಸಮೃದ್ಧವಾಗೈತೆ... ಅಲ್ಲಿಂದ ಎಲ್‌ಪಿಜಿ ಬರೂತನಕ ಸೊಪ್ಪುಸದೆ, ಹಣ್ಣುಹಂಪಲ ತಿನ್ನೂಣು ಅಂತ ಧನಾತ್ಮಕ ಆರೋಗ್ಯ ಚಿಂತನೆ ಮಾಡಬಕು! ಟ್ರಂಪಣ್ಣನ ಯುದ್ಧೋನ್ಮಾದಕ್ಕಾಗಿ ನಾವು ಜರಾ ತ್ಯಾಗ ಮಾಡೂಣು!’ ಬೆಕ್ಕಣ್ಣ ನಾಯಕನಟನಂತೆ ಭಾಷಣ ಕುಟ್ಟಿತು.

ಸಂಗತ

ಹಳಿ ತಪ್ಪಿದ ಭಾರತದ ವಿದೇಶಾಂಗ ನೀತಿ


ಈವರೆಗಿನ ಭಾರತದ ಪ್ರಧಾನಿಗಳಲ್ಲಿ ಅತಿ ಹೆಚ್ಚು ವಿದೇಶ ಪ್ರವಾಸ ಕೈಗೊಂಡ ಅಗ್ಗಳಿಕೆ ನರೇಂದ್ರ ಮೋದಿ ಅವರದ್ದಾಗಿದೆ. ಈ ದಾಖಲೆ ದೇಶಕ್ಕೆ ಲಾಭ ತಂದುಕೊಟ್ಟಿದೆಯೆ?

• ಪುರುಷೋತ್ತಮ ಬಿಳಿಮಲೆ

ಯಾವುದೇ ಗೊತ್ತು ಗುರಿಯಿಲ್ಲದೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಪದೇ ಪದೇ ವಿದೇಶಗಳಿಗೆ ಭೇಟಿ ನೀಡುತ್ತಿದ್ದಾರೆ. ಅವರು ಯಾವ ಉದ್ದೇಶಗಳನ್ನಿರಿಸಿಕೊಂಡು ಬೇರೆ ಬೇರೆ ದೇಶಗಳಿಗೆ ಹೋಗುತ್ತಾರೆ? ಹಾಗೆ ಹೋದುದರಿಂದ ಭಾರತ ದೇಶಕ್ಕೆ ಏನು ಪ್ರಯೋಜನಗಳಾಗಿವೆ? ಎಂಬುದು ಸ್ಪಷ್ಟವಿಲ್ಲ. ಲೋಕಸಭೆಗಾಗಲೀ ರಾಜ್ಯಸಭೆಗಾಗಲೀ ಅವರು ಈ ಕುರಿತು ಮಾಹಿತಿ ನೀಡಿದಂತಿಲ್ಲ.

ಪ್ರಧಾನಿಯವರು ಮಾಡುವ ಭಾಷಣಗಳಲ್ಲಿ ಅವರ ವಿದೇಶೀ ಪ್ರವಾಸಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಅವರ ಪ್ರಯಾಣಗಳಿಗೂ ಭಾರತದ ವಿದೇಶಾಂಗ ನೀತಿಗೂ ಏನಾದರೂ ಸಂಬಂಧ ಇದೆಯೇ ಎಂಬುದೂ ಖಚಿತವಿಲ್ಲ. ವಿದೇಶಾಂಗ ಸಚಿವರಾಗಿದ್ದ ಅಟಲ್ ಬಿಹಾರಿ ವಾಜಪೇಯಿಯವರು ತಮ್ಮ ಭಾಷಣದಲ್ಲಿ ಒಮ್ಮೆ– ‘ರಾಜಕಾರಣಿಗಳ ಪಯಣಗಳು ರಾಷ್ಟ್ರೀಯ ಹಿತಾಸಕ್ತಿಗಳನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವಹಿಸಬೇಕು’ ಎಂದಿದ್ದರು. ನೆಹರೂ ಮಾಡಿದ ಪ್ರವಾಸಗಳು ಸ್ಪಷ್ಟವಾದ ಆರ್ಥಿಕ ನೀತಿಯ ಜೊತೆಗೆ ಅಮೂರ್ತವಾದ ಸಾಹಿತ್ಯ, ತತ್ತ್ವಶಾಸ್ತ್ರ ಮತ್ತು ಇತಿಹಾಸ ಕುರಿತಾದ ಚರ್ಚೆಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹುಟ್ಟುಹಾಕುತ್ತಿದ್ದವು. ಇಂದಿರಾ ಗಾಂಧಿ ಅವರ ನೇರ ಮತ್ತು ದಿಟ್ಟ ಮಾತುಗಳಿಗೆ ವಿಶ್ವನಾಯಕರು ತಲೆದೂಗುತ್ತಿದ್ದರು. ಕಡಿಮೆ ಮಾತಿನ ಮನಮೋಹನ್ ಸಿಂಗ್ ಅವರ ಮಾತಿಗೆ ವಿಶ್ವನಾಯಕರು ಕಾಯುತ್ತಿದ್ದರು. ಪ್ರಧಾನಿಗಳ ಪ್ರವಾಸಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ವರ್ಚಸ್ಸನ್ನು ಹೆಚ್ಚಿಸಬೇಕೆಂಬ ಆಶೆ ನನ್ನಂಥವನದು.

ಪ್ರಧಾನಿ ಮೋದಿಯವರು ಅತ್ಯಂತ ಹೆಚ್ಚು ಸಲ ವಿದೇಶ ಪ್ರಯಾಣ ಮಾಡಿದ ಪ್ರಧಾನಿ ಎಂದು ಚರಿತ್ರೆಯ ಪುಟಗಳಲ್ಲಿ ದಾಖಲಾಗುತ್ತಾರೆ. ಅವರು ಇದುವರೆಗೆ 99 ವಿದೇಶ ಪ್ರವಾಸಗಳನ್ನು ಮಾಡಿದ್ದು, ಆ ಅವಧಿಯಲ್ಲಿ ಒಟ್ಟು 79 ದೇಶಗಳನ್ನು ಭೇಟಿ ಮಾಡಿದ್ದಾರೆ ಎಂದು ದಾಖಲೆಗಳು ಹೇಳುತ್ತವೆ. ಅವುಗಳಲ್ಲಿ ಅಮೆರಿಕಕ್ಕೆ ಹತ್ತು ಬಾರಿ, ಫ್ರಾನ್ಸ್ ಮತ್ತು ಜಪಾನ್‌ಗೆ ತಲಾ ಎಂಟು ಬಾರಿ, ಯುಎಇ ಮತ್ತು ರಷ್ಯಾಕ್ಕೆ ತಲಾ ಏಳು ಬಾರಿ, ಚೀನಾ ಮತ್ತು ಜರ್ಮನಿಗೆ ತಲಾ ಆರು ಬಾರಿ, ನೇಪಾಳ ಮತ್ತು ಸಿಂಗಪುರಕ್ಕೆ ತಲಾ ಐದು ಬಾರಿ, ಇಂಗ್ಲೆಂಡ್, ಬ್ರೆಜಿಲ್ ಮತ್ತು ಶ್ರೀಲಂಕಾಕ್ಕೆ ತಲಾ ನಾಲ್ಕು ಬಾರಿ ಭೇಟಿ ನೀಡಿದ್ದಾರೆ. ಜೊತೆಗೆ ಅವರು ಭೂತಾನ್, ಇಂಡೋನೇಷ್ಯಾ, ಮಾಲ್ಡೀವ್ಸ್, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ, ಥಾಯ್ಲೆಂಡ್ ಮತ್ತು ಉಜ್ಬೇಕಿಸ್ತಾನ್‌ಗೆ ತಲಾ ಮೂರು ಬಾರಿ ಭೇಟಿ ನೀಡಿದ್ದಾರೆ. ಅವರ ಸುಸಜ್ಜಿತ ಪ್ರಯಾಣಕ್ಕಾಗಿ ದೇಶ ಕೋಟ್ಯಂತರ ರೂಪಾಯಿಗಳನ್ನು ವ್ಯಯಿಸಿದೆ. ಇಷ್ಟೆಲ್ಲಾ ಆದ ಮೇಲೂ ಕೂಡ ವ್ಯಾಪಾರ, ರಕ್ಷಣಾ ಒಪ್ಪಂದಗಳು ಮತ್ತು ರಾಜತಾಂತ್ರಿಕತೆಯ ವಿಷಯದಲ್ಲಿ ಭಾರತ ಮತ್ತು ಅಮೆರಿಕ ಸಂಬಂಧಗಳು ಐತಿಹಾಸಿಕ ಕೆಳಮಟ್ಟಕ್ಕೆ ಕುಸಿದಿವೆ. ಅಮೆರಿಕವು ಭಾರತದ ಮೇಲೆ ಎರಡನೇ ಅತಿ ಹೆಚ್ಚು ಸುಂಕಗಳನ್ನು ವಿಧಿಸಿದೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಭಾರತದ ರಾಷ್ಟ್ರೀಯ ಹಿತಾಸಕ್ತಿಗಳನ್ನು ದುರ್ಬಲಗೊಳಿಸುವ ಕೆಲಸಗಳನ್ನು ಮುಂದುವರಿಸಿದೆ.




‘ಭಾರತೀಯರು ಒಳ್ಳೆಯ ನಟರು’, ‘ಪ್ರಧಾನಿ ಮೋದಿ ಅವರ ರಾಜಕೀಯ ಜೀವನವನ್ನು ನಾನು ಹಾಳುಮಾಡ ಬಯಸುವುದಿಲ್ಲ’, ‘ನಾವು ಹೇಳಿದಲ್ಲಿಂದ ತೈಲ ಖರೀದಿಸಿ’ ಎಂಬಂಥ ಹೀನ ಅಭಿರುಚಿಯ ಹಾಗೂ ಭಾರತದ ಸಾರ್ವಭೌಮತೆಯನ್ನು ಅಗೌರವದಿಂದ ಕಾಣುವ ಮಾತುಗಳನ್ನು ಅಮೆರಿಕ ಭಾರತದ ಬಗ್ಗೆ ಹೇಳಿದೆ. ಭಾರತದ ಮೇಲಿನ ಅಮೆರಿಕದ ಆರ್ಥಿಕ, ರಾಜಕೀಯ ಮತ್ತು ರಾಜತಾಂತ್ರಿಕ ಹಸ್ತಕ್ಷೇಪ ಮತ್ತು ದಾಳಿಗಳನ್ನು ತಡೆಯುವಲ್ಲಿ ಪ್ರಧಾನಿಗಳು ಸಂಪೂರ್ಣವಾಗಿ ವಿಫಲರಾಗಿದ್ದಾರೆ.

ಮೋದಿಯವರು ಯುರೋಪಿಯನ್ ಒಕ್ಕೂಟದಾದ್ಯಂತ ವ್ಯಾಪಕವಾಗಿ ಪ್ರಯಾಣಿಸಿದ್ದಾರೆ. ಆದರೆ ಅಲ್ಲಿಯ ರಾಷ್ಟ್ರಗಳೊಂದಿಗೆ ಭಾರತದ ರಾಜತಾಂತ್ರಿಕ, ವ್ಯಾಪಾರ, ಭದ್ರತೆ ಮತ್ತು ವೈಜ್ಞಾನಿಕ ಸಂಬಂಧಗಳು ಇನ್ನೂ ಬಲಗೊಂಡಿಲ್ಲ. ಫ್ರಾನ್ಸ್ ಅಂತೂ ತನ್ನ ಶಸ್ತ್ರಾಸ್ತ್ರಗಳಿಗೆ ಭಾರತವನ್ನು ಒಂದು ಮಾರುಕಟ್ಟೆ ಮಾಡಿಕೊಂಡಂತಿದೆ. ರಷ್ಯಾ ಕೂಡ ಈಚೆಗೆ ತೈಲ ಬೆಲೆ ಏರಿಸಿ, ಭಾರತವನ್ನು ಗೆಳೆಯನನ್ನಾಗಿ ನೋಡುವ ಬದಲು ‘ಗ್ರಾಹಕ’ನನ್ನಾಗಿ ಪರಿವರ್ತಿಸಿದೆ. ಮೋದಿಯವರಿಗೆ ಪ್ರಧಾನಿ ಪಟ್ಟ ತಂದುಕೊಟ್ಟ ರಾಜಕೀಯ ಹಿಂದುತ್ವವು ಇತರ ದೇಶಗಳೊಡನೆಯ ನಮ್ಮ ಸಂಬಂಧಗಳನ್ನು ಸುಧಾರಿಸಲು ಸಹಕರಿಸಿಲ್ಲ.

ಸಣ್ಣಪುಟ್ಟ ಏರುಪೇರುಗಳ ನಡುವೆಯೂ ಭಾರತದ ವಿದೇಶಾಂಗ ನೀತಿಯು ಬಹುಕಾಲದಿಂದ ಕಾಪಾಡಿಕೊಂಡು ಬಂದಿದ್ದ ‘ಅಲಿಪ್ತ ನೀತಿಯು’ ಇದೀಗ ನೆಲಚ್ಚಿದೆ. ಭಾರತದ ವಸಾಹತುಶಾಹಿ ವಿರೋಧಿ, ಬಂಡವಾಳಶಾಹಿ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಸಮಾಜವಾದಿ ನೀತಿಗಳನ್ನು ಮೆಚ್ಚಿಕೊಂಡಿದ್ದ ಆಫ್ರಿಕಾದ ಮತ್ತು ಇತರೆಡೆಗಳ ಸಣ್ಣ ದೇಶಗಳು ಕೂಡ ಈಗ ನಿಧಾನವಾಗಿ ಭಾರತದಿಂದ ದೂರ ಸರಿಯುತ್ತಿವೆ. ಸಾಮ್ರಾಜ್ಯಶಾಹಿ ಶಕ್ತಿಗಳೊಡನೆ ಕೈಜೋಡಿಸಿರುವ ಭಾರತವೀಗ ಅಭಿವೃದ್ಧಿಶೀಲ ರಾಷ್ಟ್ರಗಳ ಹಿತಾಸಕ್ತಿಗಳ ಪರವಾಗಿ ಮಾತನಾಡುತ್ತಲೇ ಇಲ್ಲ. ಇದು ಮುಂದಿನ ದಿನಗಳಲ್ಲಿ ಭಾರತದ ಅಂತರರಾಷ್ಟ್ರೀಯ ಸ್ಥಾನಮಾನಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ.

ಪ್ರಧಾನಿಯವರ ಹಳಿ ತಪ್ಪಿದ ಪ್ರಯಾಣಗಳು ಅವರ ಪ್ರತಿಷ್ಠೆಯನ್ನು ಅಂತರರಾಷ್ಟ್ರೀಯವಾಗಿ ಹೆಚ್ಚಿಸಿದಂತಿಲ್ಲ ಹಾಗೂ ದೇಶಕ್ಕೆ ಹೆಚ್ಚಿನ ಲಾಭವನ್ನೂ ತಂದುಕೊಟ್ಟಂತಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ನಾಲ್ಕು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೆರಿ ವಿಧಾನಸಭೆಗೆ ಚುನಾವಣಾ ವೇಳಾಪಟ್ಟಿ ಪ್ರಕಟವಾಗಿದೆ. ದಕ್ಷಿಣದ ಕೇರಳ, ತಮಿಳುನಾಡು, ಪುದುಚೆರಿ ಜತೆಗೆ ಪಶ್ಚಿಮ ಬಂಗಾಳ, ಈಶಾನ್ಯ ರಾಜ್ಯವಾದ ಅಸ್ಸಾಂನಲ್ಲಿ ಚುನಾವಣೆಗಳು ನಡೆಯಲಿವೆ. ಪಶ್ಚಿಮ ಬಂಗಾಳದಲ್ಲಿ 'ದೀದಿ'ಯ 15 ವರ್ಷಗಳ ಆಡಳಿತವನ್ನು ಅಂತ್ಯಗೊಳಿಸಲೇಬೇಕು ಎನ್ನುವುದು ಬಿಜೆಪಿ ಗುರಿ; ಅಸ್ಸಾಂನಲ್ಲಿ ಅಧಿಕಾರ ಉಳಿಸಿಕೊಳ್ಳಲು ಪ್ರಯತ್ನ ನಡೆಸುತ್ತಿದೆ. ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಕ್ರಮವಾಗಿ ಡಿಎಂಕೆ ಮತ್ತು ಎಲ್‌ಡಿಎಫ್ ಕೂಟಗಳು ಪ್ರಬಲವಾಗಿವೆ. ಈ ರಾಜ್ಯಗಳಲ್ಲಿ ಅಧಿಕಾರ ಹಿಡಿಯುವುದು ಕಷ್ಟವಾದರೂ, ಹೆಚ್ಚಿನ ಸ್ಥಾನಗಳನ್ನು ಗೆದ್ದು ನಿರ್ಣಾಯಕವಾಗಬೇಕು ಎನ್ನುವ ಹಂಬಲದಲ್ಲಿದೆ ಬಿಜೆಪಿ. ಪುದುಚೆರಿಯಲ್ಲಿ ಮಿತ್ರಪಕ್ಷದೊಂದಿಗೆ ಸರ್ಕಾರ ನಡೆಸುತ್ತಿರುವ ಬಿಜೆಪಿ, ಮತ್ತೆ ಅಧಿಕಾರ ಹಿಡಿಯುವ ಉಮೇದಿನಲ್ಲಿದೆ

ಚುನಾವಣೆ: ಐದು ವಿಧಾನಸಭೆಗಳ ಸ್ಥಿತಿಗತಿ

ಪಶ್ಚಿಮ ಬಂಗಾಳ

'ದೀದಿ'ಗೆ ಬಿಜೆಪಿ ಸವಾಲು



ನಾಲ್ಕು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೆರಿ ವಿಧಾನಸಭಾ ಚುನಾವಣೆಯ ಪೈಕಿ ಬಿಜೆಪಿ ಗೆಲ್ಲಲೇಬೇಕು ಎಂದು ಬಯಸುತ್ತಿರುವ ರಾಜ್ಯ ಪಶ್ಚಿಮ ಬಂಗಾಳ. ಅದಕ್ಕಾಗಿ ಹಲವು ವರ್ಷಗಳಿಂದ ರಂಗವನ್ನು ಸಿದ್ಧಮಾಡಿರುವ ಪಕ್ಷವು, ಬಾಂಗ್ಲಾದೇಶದವರ ಒಳನುಸುಳುವಿಕೆ, ಮುಸ್ಲಿಂ ವಿರೋಧ ಮುಂತಾದ ವಿಷಯಗಳನ್ನು ಆಧರಿಸಿ ನಿರಂತರ 'ಪ್ರಚಾರ' ನಡೆಸುತ್ತಲೇ ಇದೆ. ಆದರೆ, ಬಿಜೆಪಿಯ ಗುರಿಗೆ ತೃಣಮೂಲ ಕಾಂಗ್ರೆಸ್‌ನ ಮಮತಾ ಬ್ಯಾನರ್ಜಿ ಸವಾಲೆಸೆಯುತ್ತಿದ್ದಾರೆ.

'ದೀದಿ' ಎಂದೇ ಕರೆಯಲ್ಪಡುವ ಮಮತಾ ಅವರು, ತಮ್ಮ ಚರಿಷ್ಮಾದಿಂದಲೇ ಟಿಎಂಸಿಯನ್ನು 2011ರಿಂದ ಗೆಲ್ಲಿಸುತ್ತಿದ್ದು, ಸತತ ಮೂರನೇ ಬಾರಿಗೆ ಮುಖ್ಯಮಂತ್ರಿ ಆಗಿ ಅಧಿಕಾರ ನಡೆಸುತ್ತಿದ್ದಾರೆ. ಈ ಬಾರಿಯೂ ಜನಪ್ರಿಯತೆಯಲ್ಲಿಅವರುಮುಂದಿದ್ದಾರೆಎನ್ನಲಾಗುತ್ತಿದೆ.


ಆದರೆ, ಅವರ ವಿರುದ್ಧ ಆಡಳಿತ ವಿರೋಧಿ ಅಲೆಯ ಜತೆಗೆ ಅಕ್ರಮ ವಲಸೆ, ಕಾನೂನು ಸುವ್ಯವಸ್ಥೆ ಮತ್ತು 'ಮಹಾಜಂಗಲ್‌ರಾಜ್' ಆರೋಪಗಳಿದ್ದು, ಬಿಜೆಪಿ ಅವುಗಳನ್ನೇ ಮುಖ್ಯ ಚುನಾವಣಾ ವಿಷಯವನ್ನಾಗಿ ಮಾಡಿಕೊಳ್ಳುವ ಸಂಭವವಿದೆ. ರಾಜ್ಯದಲ್ಲಿ ಒಂದು ಕೋಟಿ ಒಳನುಸುಳುಕೋರರು ಇದ್ದಾರೆ ಎಂದು ಆರೋಪ ಮಾಡಿದ್ದ ಬಿಜೆಪಿಯು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಲು ಒತ್ತಡ ಹೇರಿತ್ತು. ಎಸ್‌ಐಆರ್ ಅನ್ನು ಪೂರ್ಣಗೊಳಿಸಲಾಗಿದ್ದು, ಅದರಲ್ಲಿ 58 ಲಕ್ಷ ಮತದಾರರ ಹೆಸರು ಕೈಬಿಡಲಾಗಿದೆ. ಟಿಎಂಸಿಯು ಎಸ್‌ಐಆರ್ ಅನ್ನು ವಿರೋಧಿಸಿತ್ತು. ಕೇಂದ್ರ ಸರ್ಕಾರದ ವಿರುದ್ಧ ಅನುದಾನ ಹಂಚಿಕೆಯ ತಾರತಮ್ಯವನ್ನು ಟಿಎಂಸಿ ಪದೇ ಪದೇ ಪ್ರಸ್ತಾಪಿಸುತ್ತಿದೆ.

ರಾಜ್ಯದಲ್ಲಿ ಕಾಂಗ್ರೆಸ್‌ಗೆ ನೆಲೆ ಇಲ್ಲ, ಟಿಎಂಸಿ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಹೇಳಿರುವ ಮಮತಾ, ಏಕಾಂಗಿಯಾಗಿ ಸ್ಪರ್ಧಿಸಲಿರುವುದಾಗಿ ತಿಳಿಸಿದ್ದಾರೆ. ರಾಜ್ಯದಲ್ಲಿ ನಡೆದ 17 ಉಪಚುನಾವಣೆಗಳಲ್ಲಿ ಟಿಎಂಸಿ 16 ಕ್ಷೇತ್ರಗಳಲ್ಲಿ ಗೆದ್ದಿದೆ. 2021ರ ವಿಧಾನಸಭಾ ಚುನಾವಣೆ ವೇಳೆ ಒಂದೂ ಸ್ಥಾನ ಗೆಲ್ಲದಿದ್ದ ಕಾಂಗ್ರೆಸ್, ಉಪಚುನಾವಣೆಯಲ್ಲಿ ಒಂದು ಸ್ಥಾನ ಗೆದ್ದಿತ್ತು.

ವಿಧಾನಸಭೆ ಬಲಾಬಲ (2021)

294 ಒಟ್ಟು ಸ್ಥಾನಗಳು

148 ಸರಳ ಬಹುಮತ



ತಮಿಳುನಾಡು

ದ್ರಾವಿಡ ತತ್ವ v/s ಹಿಂದುತ್ವ

ತೀವ್ರ ಪ್ರಯತ್ನದ ನಡುವೆಯೂ ಬಿಜೆಪಿಗೆ ಅಭೇದ್ಯವಾಗಿಯೇ ಉಳಿದಿರುವ ರಾಜ್ಯ ತಮಿಳುನಾಡು. 1996ರಲ್ಲಿ ಬಿಜೆಪಿ ಮೊದಲ ಬಾರಿಗೆ ಒಂದು ಕ್ಷೇತ್ರದಲ್ಲಿ ಗೆದ್ದಿತ್ತು. ಅದರ ನಂತರ 2001ರಲ್ಲಿ ಡಿಎಂಕೆ ಜತೆ ಮೈತ್ರಿ ಮಾಡಿಕೊಂಡು ನಾಲ್ಕು ಕ್ಷೇತ್ರಗಳಲ್ಲಿ ಗೆದ್ದಿತ್ತು. ಆದರೆ, 2006, 2011, 2016ರಲ್ಲಿ 'ಶೂನ್ಯ ಸಂಪಾದನೆ' ಮಾಡಿತ್ತು. 2021ರಲ್ಲಿ ಹರಸಾಹಸ ಮಾಡಿ ಇತಿಹಾಸದಲ್ಲಿ ಎರಡನೆಯ ಬಾರಿಗೆ ನಾಲ್ಕು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು.



ಬಿಜೆಪಿಗೆ ಹಿಂದುತ್ವವೇ ಪ್ರಬಲ ಅಸ್ತ್ರವಾಗಿದೆ. ಅದು ಎಐಎಡಿಎಂಕೆಯೊಂದಿಗೆ ಮೈತ್ರಿ ಮಾಡಿಕೊಂಡಿದೆ. ಮಹಿಳೆಯರ ರಕ್ಷಣೆ, ಮಾದಕ ದ್ರವ್ಯಗಳು, ರಾಜ್ಯದ ಹೆಚ್ಚುತ್ತಿರುವ ಸಾಲದ ಪ್ರಮಾಣವನ್ನೇ ಚುನಾವಣೆಯ ಮುಖ್ಯ ವಿಚಾರಗಳನ್ನಾಗಿ ಮಾಡಿ ಜನರ ಮುಂದೆ ಹೋಗುವ ಸಾಧ್ಯತೆ ಇದೆ. ಆದರೆ, ಪ್ರಬಲ ನಾಯಕರಿಲ್ಲದೇ ಇರುವುದು ಬಿಜೆಪಿ ಮತ್ತು ಎಐಎಡಿಎಂಕೆ– ಎರಡೂ ಪಕ್ಷಗಳ ಅತಿ ದೊಡ್ಡ ಕೊರತೆಯಾಗಿದೆ.

ಆಡಳಿತಾರೂಢ ಡಿಎಂಕೆ ಪಕ್ಷವು ತನ್ನ ದ್ರಾವಿಡ ತಾತ್ವಿಕತೆ, ಸಾಮಾಜಿಕ ನ್ಯಾಯ, ರಾಜ್ಯದ ಸ್ವಾಯತ್ತೆ, ತಮಿಳರ ಅಸ್ಮಿತೆಗಳ ಆಧಾರದಲ್ಲಿಯೇ ಮತದಾರರ ಮುಂದೆ ತೆರಳುತ್ತಿದೆ. ಎಂ.ಕೆ.ಸ್ಟಾಲಿನ್ ಸರ್ಕಾರದ ಸಾಧನೆಗಳನ್ನು ಜನರ ಮುಂದಿಟ್ಟು, ಎರಡನೇ ಬಾರಿ ಅಧಿಕಾರ ಹಿಡಿಯುವ ಪ್ರಯತ್ನ ನಡೆಸುತ್ತಿದೆ. ಸರ್ಕಾರ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳೂ ತಮ್ಮ ಕೈಹಿಡಿಯಲಿವೆ ಎನ್ನುವುದು ಡಿಎಂಕೆ ನಿರೀಕ್ಷೆಯಾಗಿದೆ.


ರಾಜ್ಯದಲ್ಲಿ ಎಸ್‌ಐಆರ್ ನಡೆಸಲಾಗಿದ್ದು, ದೇಶದಲ್ಲಿಯೇ ಅತಿ ಹೆಚ್ಚು (97.3 ಲಕ್ಷ) ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಅದರಲ್ಲಿ ಯಾವ ಪಕ್ಷದ ಬೆಂಬಲಿಗರು ಎಷ್ಟು ಮಂದಿ ಇರಬಹುದು ಎನ್ನುವ ಲೆಕ್ಕಾಚಾರದಲ್ಲಿ ತೊಡಗಿರುವ ಪಕ್ಷಗಳು, ಅದರ ನಷ್ಟವನ್ನು ತೂಗಿಸಿಕೊಳ್ಳುವ ಬಗ್ಗೆ ಚಿಂತನೆ ನಡೆಸುತ್ತಿವೆ.

ನಟ ವಿಜಯ್ ಸ್ಥಾಪಿಸಿರುವ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮೊದಲ ಬಾರಿಗೆ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಸಾಧ್ಯತೆ ಇದೆ. ಪ್ರತಿ ಮನೆಯಲ್ಲೂ ತಮ್ಮ ಅಭಿಮಾನಿಗಳಿದ್ದು, ಕನಿಷ್ಠ ಮನೆಗೆ ಒಂದು ಮತವನ್ನಾದರೂ ಸೆಳೆಯಬೇಕು ಎನ್ನುವುದು ವಿಜಯ್ ಅವರ ಅಪೇಕ್ಷೆಯಾಗಿದೆ. ವಿಜಯ್ ಅವರನ್ನು ಸೆಳೆಯಲು ಬಿಜೆಪಿ ಪ್ರಯತ್ನಿಸುತ್ತಿದೆ.

ವಿಧಾನಸಭೆ ಬಲಾಬಲ (2021)


234 ಒಟ್ಟು ಸ್ಥಾನಗಳು

118 ಸರಳ ಬಹುಮತ



ಅಸ್ಸಾಂ


ಹ್ಯಾಟ್ರಿಕ್ ಗೆಲುವಿನತ್ತ ಎನ್‌ಡಿಎ ಚಿತ್ತ



126 ಸದಸ್ಯ ಬಲದ ಅಸ್ಸಾಂನಲ್ಲಿ ಎರಡು ಅವಧಿಗಳಿಂದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದೆ. ಮೂಲ ಕಾಂಗ್ರೆಸ್ಸಿಗರಾಗಿದ್ದು, 2015ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿರುವ ಹಿಮಂತ್ ಬಿಸ್ವಾ ಶರ್ಮಾ ಅವರು 2021ರ ವಿಧಾನಸಭಾ ಚುನಾವಣೆಯ ಗೆಲುವಿನ ಬಳಿಕ ಮುಖ್ಯಮಂತ್ರಿಯಾಗಿದ್ದಾರೆ. ಮುಸ್ಲಿಮರ ಕುರಿತ ಹೇಳಿಕೆಗಳು ಮತ್ತು ವರ್ತನೆಗಳಿಂದ ವಿವಾದಗಳನ್ನು ಹುಟ್ಟುಹಾಕಿರುವ ಶರ್ಮಾ ಅವರು ಈ ಬಾರಿಯೂ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಕಳೆದ ಬಾರಿ ಅಸ್ಸಾಂ ಗಣ ಪರಿಷತ್ ಮತ್ತು ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್, ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದವು. ಈ ಬಾರಿ ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ ಕೂಡ ಎನ್‌ಡಿಎಗೆ ಸೇರ್ಪಡೆಯಾಗಿದೆ. ಎನ್‌ಡಿಎ ಮೈತ್ರಿಕೂಟ ಇನ್ನಷ್ಟೇ ಸೀಟು ಹಂಚಿಕೆಯನ್ನು ಅಂತಿಮಗೊಳಿಸಬೇಕಿದೆ. ಮುಖ್ಯಮಂತ್ರಿ ಅಭ್ಯರ್ಥಿಯನ್ನೂ ಅದು ಘೋಷಿಸಿಲ್ಲ. ಈಶಾನ್ಯದ ಪ್ರಮುಖ ರಾಜ್ಯದಲ್ಲಿ ಮೂರನೇ ಬಾರಿ ಅಧಿಕಾರಕ್ಕೆ ಏರಲು ಅದು ಇನ್ನಿಲ್ಲದ ಕಸರತ್ತು ನಡೆಸುತ್ತಿದೆ.

ದಶಕದ ಹಿಂದೆ ಅಸ್ಸಾಂ ಕಾಂಗ್ರೆಸ್‌ನ ಭದ್ರಕೋಟೆಯಾಗಿತ್ತು. ಎರಡು ಚುನಾವಣೆಗಳಲ್ಲಿ ಪಕ್ಷದ ಪ್ರದರ್ಶನ ಚೆನ್ನಾಗಿಲ್ಲ. 2016ರ ಚುನಾವಣೆಗೆ ಹೋಲಿಸಿದರೆ 2021ರ ಚುನಾವಣೆಯಲ್ಲಿ ಅದು ಮೂರು ಹೆಚ್ಚು ಕ್ಷೇತ್ರಗಳಲ್ಲಿ ಜಯಗಳಿಸಿತ್ತು. ಈ ಬಾರಿ ಹೆಚ್ಚು ಸ್ಥಾನಗಳನ್ನು ಪಡೆಯುವ ಗುರಿ ಹೊಂದಿರುವ ಕಾಂಗ್ರೆಸ್, ಈಗಾಗಲೇ 65 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರುಗಳನ್ನು ಘೋಷಿಸಿದೆ. ಮೈತ್ರಿ ಪಕ್ಷಗಳೊಂದಿಗೆ ಸೀಟು ಹೊಂದಾಣಿಕೆಯನ್ನೂ ಮಾಡಿಕೊಂಡಿದೆ. ಆದರೆ, ಕಳೆದ ತಿಂಗಳು ಅದರ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಭೂಪೇನ್ ಕುಮಾರ್ ಬೋರಾ ಅವರು ಬಿಜೆಪಿಗೆ ಸೇರ್ಪಡೆಗೊಂಡಿದ್ದು ಪಕ್ಷಕ್ಕೆ ಕೊಂಚ ಹಿನ್ನಡೆ ತಂದಿದೆ ಎಂದು ಹೇಳಲಾಗುತ್ತಿದೆ.

ವಿಧಾನಸಭೆಯ ಬಲಾಬಲ (2021)



126 ಒಟ್ಟು ಸ್ಥಾನಗಳು

64 ಸರಳ ಬಹುಮತ

ಬಿಜೆಪಿ 60, ಅಸ್ಸಾಂ ಗಣ ಪರಿಷತ್ (ಎಜಿಪಿ) 9, ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್ (ಯುಪಿಪಿಎಲ್) 6, ಕಾಂಗ್ರೆಸ್ 29, ಆಲ್ ಇಂಡಿಯಾ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ 16, ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ 4, ಸಿಪಿಐ (ಎಂ) 1, ಪಕ್ಷೇತರರು 1

ಬಿಜೆಪಿಯೊಂದಿಗೆ ಎಜಿಪಿ ಮತ್ತು ಯುಪಿಪಿಎಲ್ ಮೈತ್ರಿ ಮಾಡಿಕೊಂಡಿದ್ದು, ಎನ್‌ಡಿಎ 75 ಸ್ಥಾನಗಳನ್ನು ಹೊಂದಿದೆ.

ಕೇರಳ

ಎಲ್‌ಡಿಎಫ್, ಯುಡಿಎಫ್ ಪೈಪೋಟಿ




ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಕೂಟವು ಎರಡು ಅವಧಿಯಿಂದ ಕೇರಳದಲ್ಲಿ ಅಧಿಕಾರ ನಡೆಸುತ್ತಿದೆ. 140 ಸದಸ್ಯ ಬಲದ ವಿಧಾನಸಭೆಯಲ್ಲಿ ಎಡಪಕ್ಷಗಳ ಕೂಟಕ್ಕೆ ಮೂರನೇ ಎರಡರಷ್ಟು ಬಹುಮತವಿದೆ. ಇಡೀ ದೇಶದಲ್ಲಿ ಎಡ ಪಕ್ಷಗಳ ಪ್ರಾಬಲ್ಯ ಕೇರಳದಲ್ಲಿ ಮಾತ್ರ ಇರುವುದರಿಂದ ಈ ಬಾರಿಯ ಚುನಾವಣೆಯೂ ಈ ಪಕ್ಷಗಳಿಗೆ ನಿರ್ಣಾಯಕವಾಗಿದೆ. ಸಿಪಿಎಂ ಮತ್ತು ಮೈತ್ರಿಕೂಟದ ಮೇಲೆ ಬಿಗಿ ಹಿಡಿತ ಹೊಂದಿರುವ ಪಿಣರಾಯಿ ವಿಜಯನ್ ವಿರುದ್ಧ ಹಲವು ಆರೋಪಗಳೂ ಕೇಳಿ ಬಂದಿವೆ. ಮಸಾಲಾ ಬಾಂಡ್‌ಗಳ ಮೂಲಕ ನಿಧಿ ಸಂಗ್ರಹಿಸಿದ ಪ್ರಕರಣದಲ್ಲಿ ವಿಜಯನ್ ಅವರು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯನ್ನು ಉಲ್ಲಂಘಿಸಿದ್ದಾರೆ ಎಂಬ ಆರೋಪದಲ್ಲಿ ಇ.ಡಿ. ತನಿಖೆಯನ್ನು ಎದುರಿಸುತ್ತಿದ್ದಾರೆ. ಪಕ್ಷದಲ್ಲಿ ಆಂತರಿಕವಾಗಿ ಅವರಿಗೆ ವಿರೋಧವೂ ಇದೆ ಎನ್ನಲಾಗುತ್ತಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಸರ್ಕಾರ ಇದ್ದ ಹೊರತಾಗಿಯೂ ಸಿಪಿಎಂಗೆ ಒಂದು ಕ್ಷೇತ್ರದಲ್ಲಿ ಮಾತ್ರ ಗೆಲ್ಲಲು ಸಾಧ್ಯವಾಗಿತ್ತು. ಆ ವೇಳೆ ಪಕ್ಷದ ಮುಖಂಡರು ವಿಜಯನ್ ನಾಯಕತ್ವದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದರು ಎನ್ನಲಾಗಿತ್ತು. ಕೇಂದ್ರದ ಎನ್‌ಡಿಎ ಸರ್ಕಾರ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ ಎಂದು ಕೇಂದ್ರದ ವಿರುದ್ಧ ಕಿಡಿಕಾರುತ್ತಾ ಬಂದಿರುವ ಎಡಪಕ್ಷಗಳು, ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೇರುವ ವಿಶ್ವಾಸವನ್ನು ಹೊಂದಿವೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಉತ್ತಮ ಸಾಧನೆ ತೋರಿರುವ ಕಾಂಗ್ರೆಸ್ (14 ಸ್ಥಾನ) ನೇತೃತ್ವದ ಯುಡಿಎಫ್ ಈ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸುವ ನಿರೀಕ್ಷೆಯಲ್ಲಿದೆ. ಲೋಕಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೇರಳದಿಂದಲೇ ತಮ್ಮ ಭಾರತ್ ಜೋಡೊ ಯಾತ್ರೆಯನ್ನು ಆರಂಭಿಸಿದ್ದರು. ವಯನಾಡ್‌ನಿಂದಲೇ ಚುನಾವಣೆಯಲ್ಲಿ ಸ್ಪರ್ಧಿಸಿ ಭಾರಿ ಮತಗಳ ಅಂತರದಿಂದ ಗೆದ್ದು, ನಂತರ ಆ ಕ್ಷೇತ್ರವನ್ನು ತಂಗಿ ಪ್ರಿಯಾಂಕಾ ಗಾಂಧಿ ಅವರಿಗೆ ಬಿಟ್ಟುಕೊಟ್ಟಿದ್ದಾರೆ. ಎಲ್‌ಡಿಎಫ್ ಸರ್ಕಾರದಿಂದ ಜನರು ಬೇಸತ್ತಿದ್ದು, ಈ ಬಾರಿ ಯುಡಿಎಫ್ ಅನ್ನು ಬೆಂಬಲಿಸಲಿದ್ದಾರೆ ಎಂಬ ನಿರೀಕ್ಷೆ ಈ ಕೂಟದ ನಾಯಕರದ್ದು. ಇತ್ತೀಚಿನ ಗ್ರಾಮ ಪಂಚಾಯಿತಿ, ಬ್ಲಾಕ್ ಪಂಚಾಯಿತಿ, ನಗರ ಪಾಲಿಕೆಗಳ ಚುನಾವಣೆಯಲ್ಲಿ ಉತ್ತಮ ಸಾಧನೆ ತೋರಿರುವುದುಅವರ ನಿರೀಕ್ಷೆಗೆ ಕಾರಣ.

ಕೇರಳದಲ್ಲಿ ತನ್ನ ಬೇರು ಗಟ್ಟಿಗೊಳಿಸಲು ಯತ್ನಿಸುತ್ತಿರುವ ಬಿಜೆಪಿ ಕೂಡ ಈ ಚುನಾವಣೆಗೆ ಹೆಚ್ಚು ಶ್ರಮ ಹಾಕುತ್ತಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಒಂದು ಸ್ಥಾನ ಗೆದ್ದಿರುವ (ಸುರೇಶ್ ಗೋಪಿ), ಬಿಜೆಪಿ ಈ ಬಾರಿಯ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ತಿರುವನಂತಪುರ ಮಹಾನಗರ ಪಾಲಿಕೆಯಲ್ಲಿ ಗೆಲುವು ಸಾಧಿಸಿದೆ. ಇದೇ ಫಲಿತಾಂಶ ವಿಧಾನಸಭಾ ಚುನಾವಣೆಯಲ್ಲಿ ಪುನರಾವರ್ತನೆಯಾಗಲಿದೆ ಎಂಬುದು ಅದರ ಲೆಕ್ಕಾಚಾರ.

ವಿಧಾನಸಭೆ ಬಲಾಬಲ

140 ಒಟ್ಟು ಸ್ಥಾನಗಳು | 71 ಸರಳ ಬಹುಮತ



ಆಡಳಿತಾರೂಢ ಎಲ್‌ಡಿಎಫ್ ಪಕ್ಷವಾರು ಸ್ಥಾನಗಳು




ಯುಡಿಎಫ್‌ನ ಪಕ್ಷವಾರು ಸ್ಥಾನಗಳು



ಪುದುಚೆರಿ

ಎನ್‌ಡಿಎ V/S 'ಇಂಡಿಯಾ'




ಕೇಂದ್ರಾಡಳಿತ ಪ್ರದೇಶವಾಗಿರುವ ಪುದುಚೆರಿ ವಿಧಾನಸಭೆಯ ಸದಸ್ಯ ಬಲ 30 (ಕೇಂದ್ರ ಸರ್ಕಾರ ಮೂರು ಸದಸ್ಯರನ್ನು ನಾಮನಿರ್ದೇಶನ ಮಾಡುತ್ತದೆ. ಅದು ಸೇರಿದರೆ ಸದಸ್ಯರ ಸಂಖ್ಯೆ 33 ಆಗುತ್ತದೆ). ಪ್ರಸ್ತುತ ಆಲ್ ಇಂಡಿಯಾ ಎನ್.ಆರ್.ಕಾಂಗ್ರೆಸ್, ಬಿಜೆಪಿ ಮೈತ್ರಿ ಕೂಟ (ಎನ್‌ಡಿಎ) ಅಧಿಕಾರದಲ್ಲಿದೆ. ಈ ಚುನಾವಣೆಯಲ್ಲೂ ಮೈತ್ರಿ ಮುಂದುವರಿಯಲಿದೆ ಎಂಬ ಅಭಿಪ್ರಾಯವನ್ನು ಮುಖ್ಯಮಂತ್ರಿ ಎನ್.ಆರ್.ಕಾಂಗ್ರೆಸ್‌ನ ಎನ್.ರಂಗಸ್ವಾಮಿ ವ್ಯಕ್ತಪಡಿಸಿದ್ದಾರೆ.

ಡಿಎಂಕೆ ಮತ್ತು ಕಾಂಗ್ರೆಸ್ ಕೂಡ ಬಹುಮತ ಪಡೆದು ಸರ್ಕಾರ ರಚಿಸುವ ಲೆಕ್ಕಾಚಾರದಲ್ಲಿವೆ. ಪ್ರದೇಶ ಕಾಂಗ್ರೆಸ್ ಸಮಿತಿಯು 15 ದಿನಗಳ ಯಾತ್ರೆಯನ್ನು ಹಮ್ಮಿಕೊಳ್ಳಲು ಸಿದ್ಧತೆ ನಡೆಸಿದೆ.

ವಿಧಾನಸಭೆ ಬಲಾಬಲ (2021)

30 ಒಟ್ಟು ಸ್ಥಾನಗಳು

16 ಸರಳ ಬಹುಮತ



ಆಲ್ ಇಂಡಿಯಾ ಎನ್‌ಆರ್ ಕಾಂಗ್ರೆಸ್ 10, ಬಿಜೆಪಿ 6, ಡಿಎಂಕೆ 6, ಪಕ್ಷೇತರರು 6, ಕಾಂಗ್ರೆಸ್ 2

ಆಲ್‌ಇಂಡಿಯಾ ಎನ್‌ಆರ್ ಕಾಂಗ್ರೆಸ್ ಮತ್ತು ಬಿಜೆಪಿ ಮೈತ್ರಿ ಮಾಡಿಕೊಂಡು ಅಧಿಕಾರಕ್ಕೆ ಏರಿವೆ. ಎನ್‌ಡಿಎಗೆ ಮೂವರು ಪಕ್ಷೇತರ ಶಾಸಕರು ಬೆಂಬಲ ನೀಡಿದ್ದಾರೆ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪ್ರಧಾನಿ ನರೇಂದ್ರಮೋದಿ ಅವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡುವ ವಿಡಿಯೊ ತುಣುಕೊಂದನ್ನು ಫೇಸ್‌ಬುಕ್ ಬಳಕೆದಾರರೊಬ್ಬರು ಹಂಚಿಕೊಂಡಿದ್ದಾರೆ. ಪಶ್ಚಿಮ ಏಷ್ಯಾ ಯುದ್ಧದ ಕಾರಣದಿಂದ ಉಂಟಾಗಿರುವ ಎಲ್‌ಪಿಜಿ ಬಿಕ್ಕಟ್ಟನ್ನು ಪರಿಹರಿಸುವುದಕ್ಕಾಗಿ ಉಜ್ವಲ ಯೋಜನೆಯ ಅಡಿಯಲ್ಲಿ ಉಚಿತ ಎಲ್‌ಪಿಜಿ ಸಿಲಿಂಡರ್‌ಗಳನ್ನು ವಿತರಿಸುವ ಯೋಜನೆಯನ್ನು ಘೋಷಿಸಿದ್ದಾರೆ ಎಂದು ಅವರು ಪ್ರತಿಪಾದಿಸಿದ್ದಾರೆ. ವಿಡಿಯೊದಲ್ಲಿ ಮೋದಿ ಅವರು ಅದೇ ರೀತಿ ಹೇಳುವುದೂ ಕೇಳಿಸುತ್ತದೆ. ಆದರೆ, ಇದು ಸುಳ್ಳು.

ಪ್ರಧಾನಿ ಅವರು ಇಂತಹ ಘೋಷಣೆ ಮಾಡಿದ್ದಾರೆಯೇ ಎಂಬುದನ್ನು ತಿಳಿಯಲು ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಲಾಯಿತು. ಆದರೆ, ವಿಶ್ವಾಸಾರ್ಹ ಮಾಧ್ಯಮ ವರದಿಗಳು ಸಿಗಲಿಲ್ಲ. ಕೇಂದ್ರ ಸರ್ಕಾರ ಮಾಡಿರುವ ಘೋಷಣೆಯೂ ಸಿಗಲಿಲ್ಲ. ವಿಡಿಯೊ ತುಣುಕಿನ ವಿಡಿಯೊ ಕೀಫ್ರೇಮ್ ಒಂದನ್ನು ರಿವರ್ಸ್ ಸರ್ಚ್ ವಿಧಾನದಲ್ಲಿ ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ, 2019ರ ಫೆ.24ರಂದು ಉತ್ತರ ಪ್ರದೇಶದ ಗೋರಖ್‌ಪುರದಲ್ಲಿ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಉದ್ಘಾಟನೆ ಸಮಾರಂಭದಲ್ಲಿ ಪ್ರಧಾನಿ ಮೋದಿ ಅವರು ಮಾಡಿದ ಭಾಷಣದ ಲಿಂಕ್ ಸಿಕ್ಕಿತು. ಈಗ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿರುವ ವಿಡಿಯೊದ ಮೂಲ ಇದು ಎನ್ನುವುದು ದೃಢಪಟ್ಟಿತು. ಆದರೆ, ಆ ಭಾಷಣದಲ್ಲಿ ಮೋದಿ ಅವರು ಎಲ್‌ಪಿಜಿ ಸಿಲಿಂಡರ್ ಬಗ್ಗೆ ಎಲ್ಲೂ ಪ್ರಸ್ತಾಪಿಸುವುದಿಲ್ಲ. ಮುಂದುವರಿದು, ವಿಡಿಯೊದಿಂದ ಧ್ವನಿಯನ್ನು ಪ್ರತ್ಯೇಕಿಸಿ ಎಐ ಪತ್ತೆ ಟೂಲ್ ಆದ ರಿಸೆಂಬಲ್ ಎಐ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ ಅದು ನಕಲಿ ಆಡಿಯೊ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು



ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ಅಣ್ಣತಮ್ಮರ ಬಳಿ ಆಸ್ತಿ ಅಂತ ಇದ್ದದ್ದು ಒಂದು ಆಕಳು ಮತ್ತು ಒಂದು ಕಂಬಳಿ ಮಾತ್ರ. ವಿಮಾ ಕಂಪನಿಯ ಏಜೆಂಟನೊಬ್ಬ ಅಣ್ಣನ ಆಪ್ತನಾಗಿದ್ದ. ಅಣ್ಣನ ಹಿತ್ತಾಳೆ ಕಿವಿಯ ಲಾಭ ಪಡೆದ ಈ ಏಜೆಂಟ್ ದಿನವೂ ಹಾಲು ಮೊಸರು ಬೆಣ್ಣೆಯನ್ನು ಪುಕ್ಕಟೆಯಾಗಿ ತಂದುಕೊಡುವಂತೆ ಮಾಡಿಕೊಂಡಿದ್ದ. ಎಂದಾದರೂ ಒಂದು ದಿನ ಇದು ತಮ್ಮನಿಗೆ ಗೊತ್ತಾಗಿ ಇದಕ್ಕೆಲ್ಲಾ ಸಂಚಕಾರ ಬಂದೀತೆಂದು ಭಾವಿಸಿದ ಏಜೆಂಟ್ ಆಸ್ತಿ ಪಾಲು ಮಾಡಿಕೊಳ್ಳುವಂತೆ ಅಣ್ಣನ ಕಿವಿಯೂದಿದ. ಏಜೆಂಟ್ ಹೇಳಿಕೊಟ್ಟಂತೆ ಅಣ್ಣ ಆಕಳಿನ ನಡುಬೆನ್ನ ಮೇಲೆ ಕೈಯಿಟ್ಟು, 'ಮುಂಭಾಗ ನಿನ್ನ ಪಾಲು, ಹಿಂಭಾಗ ನನ್ನ ಪಾಲು' ಎಂದ. 'ಬೇಸಿಗೆ ಕಾಲದಲ್ಲಿ ಕಂಬಳಿ ನಿನ್ನ ಬಳಿಯಿರಲಿ, ಉಳಿದ ದಿನಗಳಲ್ಲಿ ನನ್ನ ಹತ್ತಿರ ಇರಲಿ' ಎಂದ. ಅಣ್ಣನಿಗೆ ಎದುರಾಡದ ತಮ್ಮ ಈಗಲೂ ಆಕಳಿಗೆ ಮೇವು ನೀರು ಮಾಡುತ್ತಾನೆ. ಅಣ್ಣನ ಹೊಟ್ಟೆಗೆ ಹಾಲು, ತಿಪ್ಪೆಗೆ ಗೊಬ್ಬರ. ಏಜೆಂಟನಿಗೆ ಮೊಸರನ್ನ. ಹಾಲು ತುಪ್ಪದ ನಿತ್ಯ ನೈವೇದ್ಯ.

ಇಂಥ ನ್ಯಾಯಭಂಜಕರು ನಮ್ಮ ಸುತ್ತಮುತ್ತ ಇರುತ್ತಾರೆ. ಆದರೆ ಬದುಕನ್ನು ಬೊಗಸೆಯಲ್ಲಿಟ್ಟುಕೊಂಡು ಬಾಳಬೇಕಾದ ಜಾಣತನ ಬೇಕಲ್ಲ? ಅದು ಎಲ್ಲರಿಗೂ ಇರುವುದಿಲ್ಲ. ಒಂದು ಕುಟುಂಬದಲ್ಲಿ ಹುಟ್ಟಿದ ಮೇಲೆ ಅದಕ್ಕೊಂದು ಸಮಾಜ ಅಂತ ಇರುತ್ತದೆ. ಬೆಳ್ಳಿ ಚಮಚವನ್ನು ಬಾಯಲ್ಲಿಟ್ಟುಕೊಂಡೇ ಹುಟ್ಟುವ ಅಥವಾ ಇಡ್ಲಿ ಗಾತ್ರದ ಬೆಣ್ಣೆ ತಿಂದು ಬದುಕುವ ಸುಖ ಎಷ್ಟು ಮಂದಿಗಿದ್ದೀತು? ಕೌಟುಂಬಿಕ ಜವಾಬ್ದಾರಿ ಎಂದರೆ ನುಣ್ಣಗಾಗುವವರೆಗೂ ನಾಲ್ಕು ದಿನಗಳ ಕಾಲ ಹಿರಿತನ ಮೆರೆದು ಸರಿಯುವಂತಹದ್ದಲ್ಲ. ಹೆತ್ತ ತಂದೆ ತಾಯಿಯ ಶವಸಂಸ್ಕಾರಕ್ಕೂ ದೂರದ ನೆಂಟರ ಹಾಗೆ ಹೊತ್ತಿಗೆ ಸರಿಯಾಗಿ ಬಂದು ಹೋಗುವ ಕಾಲದಲ್ಲಿ ನಾವಿದ್ದೇವೆ.

ವ್ಯಾಪಾರವೇ ಈಗಿನ ಜಾಗತಿಕ ಮನೋಧರ್ಮ. ಲಾಭ ಇದ್ದರೆ ಸಂಬಂಧ ಬೇಕು. ನಷ್ಟವಾಗುವುದಾದರೆ ಸ್ನೇಹ ಸಂಬಂಧ ಯಾವುದೂ ಬೇಡ. ಸಹೋದರರ ನಡುವಿರಲಿ, ದೇಶ ದೇಶಗಳ ನಡುವಿರಲಿ ಲೌಕಿಕತೆಯೇ ಮುಖ್ಯವಾಗಿದೆ. ಆದರೆ ಆಧ್ಯಾತ್ಮಿಕತೆಯೇ ನಮ್ಮ ಶಕ್ತಿ ಅಂತ ದೊಡ್ಡ ಬಾಯಲ್ಲಿ ಹೇಳುತ್ತೇವೆ. ವಾಸ್ತವದಲ್ಲಿ ಸಂಪತ್ತು ಸಂಬಂಧಗಳನ್ನು ಉಳಿಸುವ ಇಲ್ಲವೇ ಅಳಿಸುವ ಕೆಲಸ ಮಾಡುತ್ತದೆ. 'ಆನೆ ಕುದುರೆ ಭಂಡಾರವಿದ್ದರೇನು? ತಾನುಂಬುವುದು ಪಡಿಯಕ್ಕಿ, ಒಂದಾವಿನ ಹಾಲು, ಮಲಗುವುದರ್ಧ ಮಂಚ' ಎಂಬುದು ನುಡಿಡಂಗುರದ ಸದ್ದಷ್ಟೇ ಆಗಿ ಉಳಿಯುತ್ತದೆ. ನಮ್ಮ ಕುಟುಂಬಗಳು ಎದುರಿಸುವ ಒಡಕು ಪೀಳಿಗೆ ಪೀಳಿಗೆಗೆ ದಾಟುತ್ತದೆ. ದೇಶಗಳ ನಡುವಿನ ಸಂಬಂಧಕ್ಕೆ ಕೂಡ ಹೀಗೇ ವ್ಯಾಪಾರ ಲಾಭದ ಆಕಾಂಕ್ಷೆಯೇ ಕೇಂದ್ರವಾಗಿದೆ. ತಿನ್ನುವ ದವಸ ಧಾನ್ಯಗಳಿಂದ ಹಿಡಿದು ಭೂಮಿಯನ್ನೇ ಬೂದಿಮಾಡಿ ಬಿಸಾಕುವ ರಣಚಂಡಿ ಸರಕುಗಳವರೆಗೆ ಲೌಕಿಕ ಲಾಭವೇ ಪ್ರಧಾನವಾಗಿದೆ. ದಯೆದಾಕ್ಷಿಣ್ಯಗಳು ಅರ್ಥ ಕಳೆದುಕೊಂಡ ನಿರುಪಯುಕ್ತ ಪದಗಳಲ್ಲ ಎಂದು ಅರಿಯಬೇಕಾಗಿದೆ.

ಕುಟುಂಬವಿರಲಿ, ದೇಶವಿರಲಿ ಒಡಕು ನಮ್ಮ ಶತ್ರು ಎಂಬ ವಿವೇಕ ಬೇಕು. ಇರಿವ ಆಯುಧಕ್ಕೆ ದಯೆ ಧರ್ಮದ ಮೊನೆ ಇರುವುದಿಲ್ಲ. ಕಾಳಿಂಗಸರ್ಪದ ದವಡೆಯಲ್ಲಿ ಅಮೃತದ ಸವಿಯಿರುವುದಿಲ್ಲ. ಸುಡುವ ಬಾಂಬುಗಳ ಹೊಟ್ಟೆಯಲ್ಲಿ ಕರುಳು ತುಂಬುವವರೂ ಇಲ್ಲ. ಬೆಂಕಿಯ ಜ್ವಾಲೆಯನ್ನು ನಂಬಿ ಹೊರಟರೆ ಅದಕ್ಕೆ ಬಲಿಯಾಗದೆ ಪರ್ಯಾಯವಿಲ್ಲ. ಇವತ್ತು ಅವನಾದರೆ ನಾಳೆ ಇವನು. ಕೊಂದವರುಳಿವರೆ? ಚಿಕ್ಕದಿರಲಿ, ದೊಡ್ಡದಿರಲಿ ನ್ಯಾಯವೇ ನಮ್ಮ ಅಂತಃಕರಣವನ್ನು ಆರ್ದ್ರವಾಗಿಟ್ಟುಕೊಳ್ಳುವ ಜೀವದ್ರವ್ಯವಾಗಬೇಕು. ಒಡಕಿನ ಲಾಭ ಪಡೆದು ದುರ್ಬಲರ ಮೇಲೆ ನಡೆಸುವ ದೌರ್ಜನ್ಯ ಬಲಿಷ್ಠರ ಪರ ಸಹಾನುಭೂತಿಯನ್ನೇನೂ ಹುಟ್ಟಿಸುವುದಿಲ್ಲ. ದ್ವೇಷ ದೇಶವನ್ನು ಸುಟ್ಟರೆ ಜ್ವಾಲೆ ಜಗತ್ತನ್ನೇ ನುಂಗುತ್ತದೆ. ಪರಸ್ಪರ ದಯೆಯಿಂದ ಒಂದಾಗಿ ಜೊತೆಯಾಗಿ ಇರಬೇಕಾದುದು ಇಂದಿನ ತುರ್ತು.

ಗುಂಡಣ್ಣ



ಪದಬಂಧ 6345


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಾಜಿ ಕಟ್ಟುತ್ತಿರುವ ಕಪಟಿ (4)
3.ಮಿತಿಗೆ ಒಳಪಟ್ಟಿದ್ದು (4)
5.ಗರ ಬಡಿದಿರುವ ಶಹರು (3)
6.ಮಗ ಕೊನೆಗೆ ತಿರುಗಿದಾಗ ವೇದ ಕಾಣಿಸಿತಲ್ಲಾ! (3)
8.ಜನರಲ್ಲೇ ಜೋಪಾನ! (3)
9.ಮಾವನಿದುರು ನಿಂತಿರುವ ಹೆಂಗಸು (3)
10.ನಾಕದಲ್ಲಿ ಮೂಗು ಕಾಣುತ್ತಿದೆಯಲ್ಲ (3)
11.ವಿವಾದವಿಲ್ಲದೇ ಆಗಿರುವ ಲಗ್ನ (3)
12.ದನಕ್ಕಾಗಿ ನಡೆದ ಯುದ್ಧ (3)
14.ರಾತ್ರಿಗೊಂದು ಪರ್ಯಾಯ ಪದ (3)
16.ತೆಳುವಾದ ಎಳೆಯಿದು (4)
17.ಮರ್ಯಾದೆಯಿದ್ದರೂ ಸಂದೇಹ! (4)

ಮೇಲಿಂದ ಕೆಳಕ್ಕೆ

1.ನಾದಿನಿ ತಿರುಗಿರುವಾಗ ಕೇಳಿದ ಧ್ವನಿ (3)
2.ಜಿಪುಣನ ಬಳಿಯಿರುವ ಅರ್ಹಂತ (2)
3.ಪರಮದಲ್ಲಿ ಮೋಕ್ಷವಿದೆ (2)
4.ಒಂದೇ ವಿಷಯದಲ್ಲಿ ಆಸಕ್ತನಾಗಿರುವವನು (3)
7.ಮನಸ್ಸನ್ನು ಹತೋಟಿಯಲ್ಲಿಡುವುದು (5)
8.ಮಂದಿಗೆಲ್ಲ ಈತ ಒಡೆಯ (5)
11.ಆಗಸದಲ್ಲಿ ಹಾರುವ ಲೋಹದ ಹಕ್ಕಿ (3)
13.ನಯವಾಗಿ ಹೊಳೆಯುವ ಅಕ್ಷಿ (3)
14.ಭೂಮಿಗಿರುವ ಇನ್ನೊಂದು ಹೆಸರು (2)
15.ನಗುವಿನ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ (2)



6344ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಅನುವಾದ 3.ಹಸುಗೂಸು
5.ರಮಿಸು 7.ಮಾವ 8.ನೆಪ
11.ಗಳು 12.ಗಾಯ
14.ಕಡಿತ 16.ಕರ್ಮಾಂತರ
17.ಮತದಾನ

ಮೇಲಿಂದ ಕೆಳಕ್ಕೆ:

1.ಅರಮನೆ 2.ದರ 3.ಹಸು
4.ಸುದೈವ 6.ಮಿಡಿ 7.ಮಾವಟಿಗ
9.ಪರಿಚಯ 11.ಋಬಾವನ
12.ಗಾಯಕ 13.ನಾಡಿ
14.ಕರ 15.ತಮ

ಸುಡೊಕು 6729

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			9	8		6	
1		9	6			5		3
	6		5		2		9	
9		2				3		6
	4			5			7	
8		7	2		4	1		9
			4		5		2	
	9			2		7		4
		4	1		9		3	

6728 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

16 ಮಾರ್ಚ್ 2026 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣದ್ವಾದಶಿ ಗಂ 9-41 ನಕ್ಷತ್ರ: ಧನಿಷ್ಠ ಅಹೋರಾತ್ರ ಯೋಗ: ಶಿವ ಗಂ. 9-37 ಕರಣ: ತೈತಿಲ ಗಂ 9-41 ಮೀನ ಮಾಸದ 02 ನೇ ದಿನ. ಮಳೆ ನಕ್ಷತ್ರ : ಪೂರ್ವಾಭಾದ್ರ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-41 ಸೂರ್ಯಾಸ್ತ : 06-38, ಮುಸ್ಲಿಂ ದಿನಾಂಕ : 26 ರಂಜಾನ್, ಅದೃಷ್ಟ ಸಂಖ್ಯೆ : 8, 10

ಮೇಷ: ಬಹುಕಾಲ ನೆನಪಿನಲ್ಲಿ ಉಳಿಯುವಂಥ ಸುಮಧುರ ಘಟನೆ ಬಾಳಲ್ಲಿ ನಡೆಯಲಿದೆ. ವಿನೋದ ಸ್ವಭಾವ ಹಾಗೂ ಬುದ್ಧಿವಂತಿಕೆ ಇತರರನ್ನು ಆಕರ್ಷಿಸುವುದು.

ವೃಷಭ: ಒಂದೇ ವಿಷಯದಲ್ಲಿ ಹಲವರ ಸಲಹೆ ಕೇಳಿದರೆ, ಹಲವು ಗೊಂದಲಗಳು ಉಂಟಾಗಬಹುದು. ಸಂಜೆ ಶಿರೋವೇದನೆಯಿಂದ ಬಳಲುವ ಸಾಧ್ಯತೆ ಇದೆ.

ಮಿಥುನ: ರಕ್ತ ಸಂಬಂಧ ಕಾಯಿಲೆ ಬಗ್ಗೆ ಅನುಮಾನ ಇರುವವರು ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು. ಅಂದುಕೊಂಡ ಕೆಲಸಗಳು ನಿರಾತಂಕವಾಗಿ ಸಾಗಲಿವೆ.

ಕರ್ಕಾಟಕ: ಸೇವಕ ವರ್ಗದವರಲ್ಲಿ ಪ್ರೀತಿ ವಿಶ್ವಾಸದಿಂದ ವ್ಯವಹರಿಸುವುದರಿಂದ ಅನುಕೂಲ. ಹಿರಿಯರ ಆರೋಗ್ಯ ಸುಧಾರಿಸುವುದರಿಂದ ಹೆಚ್ಚಿನ ಸಂತಸವಿರುವುದು.

ಸಿಂಹ: ನಿವೃತ್ತಿಯ ಹಣದಲ್ಲಿ ಮಕ್ಕಳ ಹೆಸರಿಗೆ ಮನೆ ಕೊಳ್ಳುವ ಯೋಗವಿದೆ. ಮೇಲಧಿಕಾರಿಗಳಿಂದ ಕುತೂಹಲಕಾರಿ ವಿಷಯ ತಿಳಿದು ಅಚ್ಚರಿ ಗೊಳ್ಳುವಿರಿ. ಸುಖ ಭೋಜನ ಪ್ರಾಪ್ತಿ.

ಕನ್ಯಾ: ಸಂಬಂಧದಲ್ಲಿ ವ್ಯವಹಾರ ಮಾಡುವುದರಿಂದ ಮೋಸ ಉಂಟಾಗಬಹುದು. ಆಹಾರ ಪದಾರ್ಥದ ಉದ್ದಿಮೆದಾರರಿಗೆ ಹೊಸ ಯೋಜನೆ ಫಲ ಕೊಡಲಿದೆ. ಪಿತ್ರಾರ್ಜಿತ ಆಸ್ತಿ ಲಭ್ಯ.

ತುಲಾ: ವಿದೇಶ ವ್ಯವಹಾರದಿಂದ ಈ ದಿನ ಅಧಿಕ ಸಮಯವನ್ನು ವೃತ್ತಿ ಜೀವನಕ್ಕೆ ಮೀಸಲಿಡಬೇಕಾಗುತ್ತದೆ. ಸ್ನೇಹಿತರಿಂದ ಸಹಾಯ ಸಕಾಲದಲ್ಲಿ ದೊರೆಯಲಿದೆ.

ವೃಶ್ಚಿಕ: ರಾಜಕೀಯ ವ್ಯಕ್ತಿಗಳಿಗೆ ವಿರೋಧ ಪಕ್ಷದವರಿಂದ ತೊಂದರೆಗಳಾಗಬಹುದು. ಅನಿರೀಕ್ಷಿತ ದುರ್ಘಟನೆಗಳಿಗೆ ವಿಚಲಿತರಾಗದೆ ಸಂಯಮದಿಂದ ಕಾರ್ಯನಿರ್ವಹಿಸಿ. ಆರ್ಥಿಕ ಕಷ್ಟ ನಿವಾರಣೆಯಾಗಲಿದೆ.

ಧನು: ಆಸ್ತಿ ವಿಷಯಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ. ಶುಭ ಸಮಾರಂಭಕ್ಕಾಗಿ ವಸ್ತ್ರಾಭರಣಗಳನ್ನು ಖರೀದಿಸುವ ಯೋಗವಿದೆ. ಆಧ್ಯಾತ್ಮಿಕ ಪುಸ್ತಕಗಳನ್ನು ಕೊಳ್ಳುವಿರಿ.

ಮಕರ: ದೀರ್ಘಕಾಲೀನ ಅನಾರೋಗ್ಯಗಳನ್ನು ಬಗೆಹರಿಸಿಕೊಳ್ಳುವಿರಿ. ನಂಬಿಕಸ್ಥರಿಂದ ವ್ಯಾಪಾರದಲ್ಲಿ ಮೋಸಹೋಗುವ ಸಾಧ್ಯತೆ ಇರುವುದರಿಂದ ಎಚ್ಚರವಿರಲಿ.

ಕುಂಭ: ನಿವೇಶನದ ಅಥವಾ ಜಮೀನಿನ ಖರೀದಿ ವಿಷಯದಲ್ಲಿ ದಾಖಲೆ ಪತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸಿ. ಮಕ್ಕಳ ಆರೋಗ್ಯದ ವಿಚಾರದಲ್ಲಿ ಪೌಷ್ಟಿಕಾಂಶ ಆಹಾರದ ಕೊರತೆ ಕಾಣುತ್ತದೆ.

ಮೀನ: ವೈಯುಕ್ತಿಕವಾಗಿ ಎಷ್ಟು ಹಣ ಗಳಿಸಬಹುದೆಂದು ಲೆಕ್ಕಾಚಾರ ಹಾಕುವುದಕ್ಕಿಂತ ಬಂಡವಾಳ ಕಾಯ್ದುಕೊಳ್ಳುವುದರತ್ತ ಗಮನ ಹರಿಸಿ. ಆತಿಥ್ಯಕ್ಕಾಗಿ ಖರ್ಚು ಮಾಡುವಲ್ಲಿ ಧಾರಾಳತನ ಮೆರೆಯುವಿರಿ.

₹52,704 ಕೋಟಿ ವಾಪಸ್

ಯುದ್ಧದ ಕಾರಣದಿಂದ ಹೂಡಿಕೆ ಹಿಂಪಡೆದ ಎಫ್‌ಪಿಐ

ನವದೆಹಲಿ (ಪಿಟಿಐ): ಮಾರ್ಚ್ ತಿಂಗಳ ಆರಂಭದಿಂದ 13ರವರೆಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಗಳಿಂದ ಒಟ್ಟು ₹52,704 ಕೋಟಿ ಹೂಡಿಕೆ ವಾಪಸ್ ಪಡೆದಿದ್ದಾರೆ.

ಫೆಬ್ರುವರಿ ತಿಂಗಳಿನಲ್ಲಿ ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಗಳಲ್ಲಿ ₹22,615 ಕೋಟಿ ಹೂಡಿಕೆ ಮಾಡಿದ್ದರು. ಇದು 17 ತಿಂಗಳಿನಲ್ಲಿ ಅತಿ ಹೆಚ್ಚಿನ ಮಾಸಿಕ ಹೂಡಿಕೆಯಾಗಿತ್ತು.

2025ರ ನವೆಂಬರ್‌ನಲ್ಲಿ ₹3,765 ಕೋಟಿ, ಡಿಸೆಂಬರ್‌ನಲ್ಲಿ ₹22,611 ಕೋಟಿ ಮತ್ತು ಈ ವರ್ಷದ ಜನವರಿಯಲ್ಲಿ ₹35,962 ಕೋಟಿಯನ್ನು ವಾಪಸ್ ಪಡೆದಿದ್ದರು.

‘ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಷೇರುಪೇಟೆಯ ಮೇಲೆ ಪರಿಣಾಮ ಬೀರಿದೆ. ರೂಪಾಯಿ ಮೌಲ್ಯ ಇಳಿಕೆ ಮತ್ತು ಕಚ್ಚಾ ತೈಲದ ಬೆಲೆ ಏರಿಕೆಯು ದೇಶದ ಬೆಳವಣಿಗೆ ಮತ್ತು ಕಾರ್ಪೊರೇಟ್ ಕಂಪನಿಗಳ ಗಳಿಕೆಯ ಮೇಲೆ ಪರಿಣಾಮ ಬೀರುವ ಆತಂಕವು ವಿದೇಶಿ ಬಂಡವಾಳದ ಹೊರಹರಿವಿಗೆ ಕಾರಣವಾಗಿವೆ’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ.ವಿಜಯಕುಮಾರ್ ತಿಳಿಸಿದ್ದಾರೆ.

ಭಾರತದ ಷೇರುಪೇಟೆ ಸೂಚ್ಯಂಕಗಳು ಸಮರ ಆರಂಭವಾದ ನಂತರದಲ್ಲಿ ಬಹಳಷ್ಟು ಕುಸಿದಿದ್ದರೂ ದಕ್ಷಿಣ ಕೊರಿಯಾ, ತೈವಾನ್ ಮತ್ತು ಚೀನಾ ಮಾರುಕಟ್ಟೆಗಳು ಹೂಡಿಕೆದಾರರಿಗೆ ಹೆಚ್ಚು ಆಕರ್ಷಕವಾಗಿ ಇವೆ. ಜೊತೆಗೆ ಅಲ್ಲಿನ ಕಾರ್ಪೊರೇಟ್ ಕಂಪನಿಗಳ ಗಳಿಕೆಯ ನಿರೀಕ್ಷೆ ಉತ್ತಮವಾಗಿದೆ. ಹೀಗಾಗಿ, ಮುಂದಿನ ದಿನಗಳಲ್ಲಿಯೂ ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಗಳಿಂದ ಮತ್ತಷ್ಟು ಹೂಡಿಕೆ ವಾಪಸ್ ಪಡೆಯಬಹುದು ಎಂದು ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು ಕಡಿಮೆಯಾದರೆ, ಬಂಡವಾಳದ ಹೊರಹರಿವು ನಿಧಾನವಾಗಲಿದೆ. ಒಂದು ವೇಳೆ ಕಚ್ಚಾ ತೈಲ ಬೆಲೆ ಏರಿಕೆ ಕಂಡರೆ ಅಥವಾ ಅನಿಶ್ಚಿತತೆಯು ಮುಂದುವರಿದರೆ ಮಾರುಕಟ್ಟೆಯು ಇಳಿಕೆ ಕಾಣಬಹುದು ಎಂದು ಏಂಜೆಲ್ ವನ್‌ನ ಹಿರಿಯ ವಿಶ್ಲೇಷಕ ವಕಾರ್ ಜಾವೇದ್ ಖಾನ್ ಹೇಳಿದ್ದಾರೆ.

ಸೆನ್ಸೆಕ್ಸ್ 6,723 ಅಂಶ ಕುಸಿತ

ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಆರಂಭವಾಗುವ ಮುನ್ನಾ ದಿನ (ಫೆಬ್ರುವರಿ 27ರಂದು) ಸೆನ್ಸೆಕ್ಸ್ 81,287ರಲ್ಲಿ ಮತ್ತು ನಿಫ್ಟಿ 25,178ರಲ್ಲಿ ವಹಿವಾಟು ಕೊನೆಗೊಳಿಸಿದ್ದವು.

ಮಾರ್ಚ್ 13ರ (ಶುಕ್ರವಾರ) ವಹಿವಾಟಿನ ಅಂತ್ಯದ ಹೊತ್ತಿಗೆ ಸೆನ್ಸೆಕ್ಸ್ 74,563ರಲ್ಲಿ ಮತ್ತು ನಿಫ್ಟಿ 23,151ರಲ್ಲಿ ಇದ್ದವು. ಈ ಅವಧಿಯಲ್ಲಿ ಸೆನ್ಸೆಕ್ಸ್ 6,723 ಅಂಶ (ಶೇ 8.27ರಷ್ಟು) ಮತ್ತು ನಿಫ್ಟಿ 2,027 (ಅಂದಾಜು ಶೇ 8.06ರಷ್ಟು) ಅಂಶ ಕುಸಿದಿವೆ.

ಷೇರುಪೇಟೆ ಸೂಚ್ಯಂಕಗಳ ಇಳಿಕೆಯಿಂದ ಈ ಅವಧಿಯಲ್ಲಿ ಹೂಡಿಕೆದಾರರ ಸಂಪತ್ತು ₹33 ಲಕ್ಷ ಕೋಟಿಗೂ ಹೆಚ್ಚು ಕರಗಿದೆ.

ಪಶ್ಚಿಮ ಏಷ್ಯಾದ ಸಂಘರ್ಷ, ಕಚ್ಚಾ ತೈಲದ ಬೆಲೆ, ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ನಿರ್ಧಾರ ಮತ್ತು ಹಣದುಬ್ಬರದ ದತ್ತಾಂಶ ಸೇರಿದಂತೆ ಹಲವು ಅಂಶಗಳು ದೇಶದ ಷೇರುಪೇಟೆಯ ಮೇಲೆ ಈ ವಾರ ಪರಿಣಾಮ ಬೀರಲಿವೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಎಂ–ಕ್ಯಾಪ್ ₹4.48 ಲಕ್ಷ ಕೋಟಿ ಇಳಿಕೆ: ಕಳೆದ ವಾರ ನಡೆದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳ ಇಳಿಕೆಯಿಂದ ಪ್ರಮುಖ 10 ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು (ಎಂ–ಕ್ಯಾಪ್) ₹4.48 ಲಕ್ಷ ಕೋಟಿ ಇಳಿಕೆಯಾಗಿದೆ. ಈ ಅವಧಿಯಲ್ಲಿ ಸೆನ್ಸೆಕ್ಸ್ 4,354 ಅಂಶ ಮತ್ತು ನಿಫ್ಟಿ 1,299 ಅಂಶ ಇಳಿಕೆ ಆಗಿವೆ.

ಫಾಸ್ಟ್ಯಾಗ್ ಪಾಸ್ ಶುಲ್ಕ ಹೆಚ್ಚಳ



ನವದೆಹಲಿ (ಪಿಟಿಐ): ಏಪ್ರಿಲ್ 1ರಿಂದ ಅನ್ವಯ ಆಗುವಂತೆ ವಾರ್ಷಿಕ ಫಾಸ್ಟ್ಯಾಗ್ ಪಾಸ್ ದರವನ್ನು ₹75ರಷ್ಟು ಹೆಚ್ಚಿಸಲಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (ಎನ್‌ಎಚ್‌ಎಐ) ಹೇಳಿದೆ. ಹೆಚ್ಚಳದ ನಂತರ ಪಾಸ್‌ನ ದರವು ₹3,075 ಆಗಲಿದೆ.

ವಾರ್ಷಿಕ ಪಾಸ್ ಸೌಲಭ್ಯವನ್ನು 2025ರ ಆಗಸ್ಟ್ 15ರಿಂದ ಜಾರಿಗೆ ತರಲಾಗಿದೆ. ಹೊಸ ದರವು 2026–27ನೆಯ ಹಣಕಾಸು ವರ್ಷದ ಉದ್ದಕ್ಕೂ ಜಾರಿಯಲ್ಲಿ ಇರಲಿದೆ. ಪರಿಷ್ಕೃತ ದರವು ಅರ್ಹ ವಾಣಿಜ್ಯೇತರ ವಾಹನಗಳಿಗೆ ಅನ್ವಯ ಆಗುತ್ತದೆ. ಈಗ 56 ಲಕ್ಷಕ್ಕಿಂತ ಹೆಚ್ಚಿನ ಮಂದಿ ಫಾಸ್ಟ್ಯಾಗ್ ವಾರ್ಷಿಕ ಪಾಸ್ ಬಳಸುತ್ತಿದ್ದಾರೆ ಎಂದು ಎನ್‌ಎಚ್‌ಎಐ ತಿಳಿಸಿದೆ. ಖಾಸಗಿ ವಾಹನ ಮಾಲೀಕರು ಈ ಪಾಸ್ ಬಳಕೆ ಮಾಡುವುದು ಹೆಚ್ಚಾಗುತ್ತಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹485	100 ಕ್ಕೆ	₹490
12 ಕ್ಕೆ	₹72		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹600-770
ದ್ವಿತಳಿ (ಬಿ.ವಿ)	₹390-853

ಈಗ ಎಸ್‌ಐಪಿ ನಿಲ್ಲಿಸುವುದು ಸರಿಯೇ?

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.

ಚಾರ್ಟರ್ಡ್ ಅಕೌಂಟೆಂಟ್

ಹೀಗೆ ಒಮ್ಮೆ ಯೋಚಿಸಿ. ರೇಷ್ಮೆ ಸೀರೆಯನ್ನೋ ಚಿನ್ನವನ್ನೋ ಖರೀದಿಸಲು ತಯಾರಿ ಮಾಡಿದ್ದೀರಿ. ನೀವು ಅಂಗಡಿಗೆ ಹೋದಾಗ ಅಲ್ಲಿ ಭರ್ಜರಿ ರಿಯಾಯಿತಿ ಇದೆ ಎಂಬುದು ಗೊತ್ತಾದರೆ ಏನು ಮಾಡುತ್ತೀರಿ? ಭಯಪಟ್ಟು ಅಂಗಡಿಯಿಂದ ಓಡಿ ಹೋಗುತ್ತೀರಾ?! ಖಂಡಿತ ಇಲ್ಲ. ಬದಲಾಗಿ, ‘ಬೆಲೆ ಕಡಿಮೆಯಾಗಿದೆ, ಇದೇ ಒಳ್ಳೆಯ ಸಮಯ’ ಎಂದು ಹೆಚ್ಚು ಖರೀದಿಗೆ ಒಲವು ತೋರಿಸುತ್ತೀರಿ ಅಲ್ಲವೇ? ಷೇರು ಮಾರುಕಟ್ಟೆಯ ಅನಿಶ್ಚಿತತೆಯೂ ಹಾಗೆಯೇ. ಮಾರುಕಟ್ಟೆ ಕುಸಿದಾಗ ದೇಶದ ಬಲಿಷ್ಠ ಕಂಪನಿಗಳ ಷೇರುಗಳು ಅಗ್ಗದ ದರದಲ್ಲಿ ಸಿಗುತ್ತವೆ. ಈ ಸಮಯದಲ್ಲಿ ಮ್ಯೂಚುವಲ್ ಫಂಡ್ ಎಸ್‌ಐಪಿ ನಿಲ್ಲಿಸುವುದು ಎಂದರೆ, ರಿಯಾಯಿತಿ ಮಾರಾಟ ಮೇಳ ಇರುವಾಗ ಸಂತೆಯಿಂದ ಬರಿಗೈಲಿ ವಾಪಸ್ ಬಂದಂತೆ. ಆರ್ಥಿಕ ಅನಿಶ್ಚಿತತೆ ಎಂಬುದು ಹೂಡಿಕೆದಾರರಿಗೆ ಒಂದು ರೀತಿಯ ಸುವರ್ಣ ಅವಕಾಶ.

1. ಕಡಿಮೆ ಬೆಲೆಗೆ ಹೆಚ್ಚು ಯೂನಿಟ್: ನೀವು ಪ್ರತಿ ತಿಂಗಳು ₹2 ಸಾವಿರ ಹೂಡಿಕೆ ಮಾಡುತ್ತೀರಿ ಅಂದುಕೊಳ್ಳಿ. ಮಾರುಕಟ್ಟೆ ಚೆನ್ನಾಗಿದ್ದಾಗ ನಿಮಗೆ 100 ಯೂನಿಟ್ ಸಿಗುತ್ತಿದ್ದರೆ, ಮಾರುಕಟ್ಟೆ ಬಿದ್ದಾಗ ಅದೇ ₹2 ಸಾವಿರಕ್ಕೆ 120 ಯೂನಿಟ್ ಸಿಗುತ್ತವೆ. ಬೆಲೆ ಕಡಿಮೆ ಇದ್ದಾಗ ಹೆಚ್ಚಿನ ಯೂನಿಟ್ ಸಂಗ್ರಹಿಸಿದರೆ ಮುಂದೆ ಮಾರುಕಟ್ಟೆ ಏರಿದಾಗ ನಿಮಗೆ ಹೆಚ್ಚಿನ ಲಾಭ ತಂದುಕೊಡುತ್ತದೆ. ಒಟ್ಟಾರೆಯಾಗಿ ಮಾರುಕಟ್ಟೆ ಇಳಿಕೆಯ ಸಂದರ್ಭದಲ್ಲಿ ಹೂಡಿಕೆ ಮಾಡಿದಾಗ ಮ್ಯೂಚುವಲ್ ಫಂಡ್‌ಗಳ ಸರಾಸರಿ ಖರೀದಿ ವೆಚ್ಚ ತಗ್ಗುತ್ತದೆ.

2. ಬೆಳವಣಿಗೆಯ ವೇಗ: ಹೂಡಿಕೆ ಎಂಬುದು ಒಂದು ಗಿಡ ಬೆಳೆಸಿದಂತೆ. ಗಿಡಕ್ಕೆ ದಿನವೂ ನೀರು ಹಾಕುತ್ತಿದ್ದರೆ ಮಾತ್ರ ಅದು ಮರವಾಗಿ ಬೆಳೆಯುತ್ತದೆ. ಮಾರುಕಟ್ಟೆ ಸರಿಯಿಲ್ಲ ಎಂಬ ಕಾರಣಕ್ಕೆ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ನಿಲ್ಲಿಸಿದರೆ, ನಿಮ್ಮ ಹೂಡಿಕೆಯ ಬೆಳವಣಿಗೆಯ ವೇಗ ಕಡಿಮೆಯಾಗುತ್ತದೆ. ಸತತವಾಗಿ ಹೂಡಿಕೆ ಮಾಡುವುದರಿಂದ ಮಾತ್ರ ದೀರ್ಘಕಾಲದಲ್ಲಿ ದೊಡ್ಡ ಮೊತ್ತ ಉಳಿಸಲು ಸಾಧ್ಯ. ಯಾರು ಮಾರುಕಟ್ಟೆ ಏರಿಳಿತಗಳಿಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಶಿಸ್ತುಬದ್ಧವಾಗಿ ಹೂಡಿಕೆ ಮಾಡುತ್ತಾರೋ ಅವರು ಸಂಪತ್ತು ಸೃಷ್ಟಿಸುತ್ತಾರೆ.

3. ಸೂಕ್ತ ಸಮಯಕ್ಕಾಗಿ ಕಾಯುವುದು ಬೇಡ: ಮಾರುಕಟ್ಟೆ ಯಾವಾಗ ಮೇಲೆ ಹೋಗುತ್ತದೆ ಅಥವಾ ಯಾವಾಗ ಕೆಳಗೆ ಬೀಳುತ್ತದೆ ಎಂದು ಯಾರೂ ನಿಖರವಾಗಿ ಹೇಳಲು ಸಾಧ್ಯವಿಲ್ಲ. ನಾವು ಮಾರುಕಟ್ಟೆ ಇನ್ನೂ ಬೀಳಲಿ ಎಂದು ಕಾಯುತ್ತಾ ಕುಳಿತರೆ, ಅಷ್ಟರಲ್ಲಿ ಮಾರುಕಟ್ಟೆ ಏರಿಬಿಡಬಹುದು. ಹಾಗಾಗಿ, ಸಮಯದ ಬಗ್ಗೆ ತಲೆಕೆಡಿಸಿಕೊಳ್ಳದೆ ಪ್ರತಿ ತಿಂಗಳು ಹೂಡಿಕೆ ಮಾಡುವುದೇ ಸರಿಯಾದ ದಾರಿ.

4. ಉಳಿತಾಯದ ಶಿಸ್ತು: ಎಸ್‌ಐಪಿ ಮಾಡುವುದರಿಂದ ನಮಗೆ ಪ್ರತಿ ತಿಂಗಳು ಹಣ ಉಳಿಸುವ ಶಿಸ್ತು ಬರುತ್ತದೆ. ಒಮ್ಮೆ ಈ ಅಭ್ಯಾಸವನ್ನು ನಿಲ್ಲಿಸಿದರೆ, ಆ ಹಣವನ್ನು ನಾವು ಬೇರೆ ಯಾವುದೋ ಅನಗತ್ಯ ಖರ್ಚುಗಳಿಗೆ ಬಳಸುತ್ತೇವೆ. ಇದರಿಂದ ನಮ್ಮ ಭವಿಷ್ಯದ ಉಳಿತಾಯದ ಮೇಲೆ ಕೆಟ್ಟ ಪರಿಣಾಮ ಆಗುತ್ತದೆ.

5. ಏರಿಳಿತ ಸಹಜ: ಹಗಲಾದ ಮೇಲೆ ರಾತ್ರಿ ಬರುವುದು ಎಷ್ಟು ಸಹಜವೋ, ಮಾರುಕಟ್ಟೆಯಲ್ಲಿ ಏರಿಕೆ ಮತ್ತು ಇಳಿಕೆ ಎರಡೂ ಅಷ್ಟೇ ಸಹಜ. ಇತಿಹಾಸವನ್ನು ಗಮನಿಸಿದರೆ, ಮಾರುಕಟ್ಟೆ ಪ್ರತಿ ಬಾರಿ ಬಿದ್ದಾಗಲೂ ಸ್ವಲ್ಪ ಸಮಯದ ನಂತರ ಮತ್ತೆ ಮೊದಲಿನ ಮಟ್ಟಕ್ಕಿಂತ ಹೆಚ್ಚು ಏರಿದೆ ಎಂಬುದು ಗೊತ್ತಾಗುತ್ತದೆ. ಹಾಗಾಗಿ ತಾತ್ಕಾಲಿಕ ಇಳಿಕೆಗೆ ಹೆದರಬಾರದು.

6. ಗೊಂದಲವಿಲ್ಲದ ನಿರ್ಧಾರ: ಮಾರುಕಟ್ಟೆ ಸುದ್ದಿಗಳು ನಮ್ಮನ್ನು ಆಗಾಗ ಭಯಪಡಿಸುತ್ತವೆ. ಆದರೆ ಎಸ್‌ಐಪಿ ಎಂಬುದು ಒಂದು ಸ್ವಯಂಚಾಲಿತ ವ್ಯವಸ್ಥೆ. ಮಾರುಕಟ್ಟೆ ಎಷ್ಟೇ ಏರಿಳಿತ ಕಂಡರೂ, ಈ ವ್ಯವಸ್ಥೆ ನಿಮಗಾಗಿ ಕೆಲಸ ಮಾಡುತ್ತಿರುತ್ತದೆ. ಇದರಿಂದ ನೀವು ಪದೇ ಪದೇ ಹೂಡಿಕೆ ಮಾಡಬೇಕೋ ಬೇಡವೋ ಎಂಬ ಗೊಂದಲಕ್ಕೆ ಒಳಗಾಗುವುದು ತಪ್ಪುತ್ತದೆ.

7. ನಿಮ್ಮ ಗುರಿಗಳು ಬದಲಾಗುವುದಿಲ್ಲ: ನೀವು ಮಗುವಿನ ಶಿಕ್ಷಣಕ್ಕಾಗಿ ಅಥವಾ ನಿಮ್ಮ ನಿವೃತ್ತಿ ಜೀವನಕ್ಕಾಗಿ ಹೂಡಿಕೆ ಮಾಡುತ್ತಿರಬಹುದು. ಮಾರುಕಟ್ಟೆ ಬಿದ್ದಿದೆ ಎಂಬ ಕಾರಣಕ್ಕೆ ನಿಮ್ಮ ಈ ಅವಶ್ಯಕತೆಗಳು ಬದಲಾಗುವುದಿಲ್ಲ. ಮಧ್ಯದಲ್ಲಿ ಎಸ್‌ಐಪಿ ನಿಲ್ಲಿಸಿದರೆ, ನಿಮ್ಮ ಗುರಿಯನ್ನು ತಲುಪಲು ಬೇಕಾದ ಹಣ ನಿಮ್ಮ ಬಳಿ ಇರುವುದಿಲ್ಲ.

8. ಒಟ್ಟಿಗೆ ಹೂಡಿಕೆ ಮಾಡುವ ಭಯ ಇರುವುದಿಲ್ಲ: ನೀವು ಎಸ್‌ಐಪಿ ನಿಲ್ಲಿಸಿ ಹಣವನ್ನು ಉಳಿತಾಯ ಖಾತೆಯಲ್ಲೇ ಇಟ್ಟರೆ, ಮುಂದೆ ಮಾರುಕಟ್ಟೆ ಏರಿದಾಗ ಆ ದೊಡ್ಡ ಮೊತ್ತವನ್ನು ಒಟ್ಟಿಗೆ ಹೂಡಿಕೆ ಮಾಡಲು ನಿಮಗೆ ಧೈರ್ಯ ಬರುವುದಿಲ್ಲ. ಎಸ್‌ಐಪಿಯಲ್ಲಿ ಹಣವು ಸ್ವಲ್ಪ ಸ್ವಲ್ಪವಾಗಿಯೇ ಹೂಡಿಕೆ ಆಗುವುದರಿಂದ ನಷ್ಟದ ಭಯ ಕಡಿಮೆ ಇರುತ್ತದೆ.

9. ವೃತ್ತಿಪರ ಪರಿಣತರ ಕೆಲಸ: ಮ್ಯೂಚುವಲ್ ಫಂಡ್‌ನಲ್ಲಿ ನಿಮ್ಮ ಹಣವನ್ನು ಮಾರುಕಟ್ಟೆಯ ಬಗ್ಗೆ ಹೆಚ್ಚಿನ ಜ್ಞಾನವಿರುವ ತಜ್ಞರು ನಿರ್ವಹಿಸುತ್ತಾರೆ. ಯಾವ ಸಮಯದಲ್ಲಿ ಯಾವ ಕಂಪನಿಯಲ್ಲಿ ಹೂಡಿಕೆ ಮಾಡಬೇಕು ಎಂಬುದು ಅವರಿಗೆ ತಿಳಿದಿರುತ್ತದೆ. ಮಾರುಕಟ್ಟೆ ಬಿದ್ದಾಗಲೂ ಅವರು ನಿಮ್ಮ ಹೂಡಿಕೆಯನ್ನು ಜಾಣತನದಿಂದ ನಿರ್ವಹಿಸುತ್ತಾರೆ.

10. ಹಣದುಬ್ಬರ ಎದುರಿಸಲು ಸಹಕಾರಿ: ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರುತ್ತಲೇ ಇರುತ್ತದೆ. ಬ್ಯಾಂಕ್ ಖಾತೆಯಲ್ಲಿ ಇರಿಸಿದ ಹಣದ ಮೇಲಿನ ಬಡ್ಡಿ ಈ ಬೆಲೆ ಏರಿಕೆಯನ್ನು ಎದುರಿಸಲು ಸಾಕಾಗುವುದಿಲ್ಲ. ಷೇರು ಮಾರುಕಟ್ಟೆಯಲ್ಲಿನ ಹೂಡಿಕೆಯು ದೀರ್ಘಕಾಲದಲ್ಲಿ ಬೆಲೆ ಏರಿಕೆಗಿಂತ ಹೆಚ್ಚಿನ ಪ್ರಮಾಣದ ಲಾಭ ನೀಡುವ ಸಾಮರ್ಥ್ಯ ಹೊಂದಿರುತ್ತದೆ.

ಕಿವಿಮಾತು: ಮಾರುಕಟ್ಟೆಯ ಇಳಿಕೆ ಎಂದರೆ ಅದು ಹೂಡಿಕೆಯ ವಿಚಾರದಲ್ಲಿ ರಿಯಾಯಿತಿ ಮಾರಾಟ ಮೇಳ ಎಂದು ತಿಳಿಯಿರಿ. ದೀರ್ಘಕಾಲದಲ್ಲಿ ಲಾಭಕ್ಕಾಗಿ ಇಂದು ತಾಳ್ಮೆಯಿಂದ ಇರುವುದು ಬಹಳ ಮುಖ್ಯ.

ಜಾಗತಿಕ ಸಂಘರ್ಷ, ಬಿಕ್ಕಟ್ಟುಗಳ ನಂತರ ಸೆನ್ಸೆಕ್ಸ್ ಜಿಗಿದ ಬಗೆ

ಜಾಗತಿಕ ವಿದ್ಯಮಾನ/ಘಟನೆ	ದಿನಾಂಕ	ಕುಸಿತ (%)	ಕುಸಿತದ ಅವಧಿ (ವಾರಗಳಲ್ಲಿ)	1 ತಿಂಗಳ ನಂತರದ ಲಾಭ (%)	3 ತಿಂಗಳ ನಂತರದ ಲಾಭ (%)	6 ತಿಂಗಳ ನಂತರದ ಲಾಭ (%)
ಇರಾಕ್ ಯುದ್ಧ	02-08-1990	-14	36	26	39	65
ಕಾರ್ಗಿಲ್ ಯುದ್ಧ	03-05-1999	-11	6	17	33	40
ವಿಶ್ವ ವ್ಯಾಪಾರ ಕೇಂದ್ರದ ಮೇಲೆ ದಾಳಿ	11-09-2001	-18	2	18	35	45
26/11 ಮುಂಬೈ ದಾಳಿ	26-11-2008	-3	1	20	24	36
ಪುಲ್ವಾಮಾ ದಾಳಿ	14-02-2019	-2	1	9	12	14
ರಷ್ಯಾ-ಉಕ್ರೇನ್ ಸಂಘರ್ಷ	24-02-2022	-11	23	7	19	25
ಇರಾನ್-ಇಸ್ರೇಲ್/ಅಮೆರಿಕ ಸಂಘರ್ಷ	01-03-2026	-5*	-	-	-	-

* ಗಮನಿಸಿ: ದತ್ತಾಂಶವು 2026ರ ಮಾರ್ಚ್ 5ರವರೆಗಿನದ್ದು. ಮೂಲ: ರಿಸರ್ಚ್, ಐಸಿಐಸಿಐ ಡೈರೆಕ್ಟ್.

ಬ್ರಸೆಲ್ಸ್‌ಗೆ ಜೈಶಂಕರ್ ಭೇಟಿ

ನವದೆಹಲಿ (ಪಿಟಿಐ): ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಬ್ರಸೆಲ್ಸ್‌ಗೆ ಭಾನುವಾರ ಭೇಟಿ ನೀಡಿದರು. ಎರಡು ದಿನಗಳ ಭೇಟಿ ಸಂದರ್ಭದಲ್ಲಿ ಅವರು ಐರೋಪ್ಯ ಒಕ್ಕೂಟದ 27 ದೇಶಗಳ ವಿದೇಶಾಂಗ ಸಚಿವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಮುಕ್ತ ವ್ಯಾಪಾರ ಒಪ್ಪಂದದ ಬಳಿಕ ಇದೇ ಮೊದಲ ಬಾರಿಗೆ ಅವರು ಭೇಟಿ ನೀಡಿದ್ದಾರೆ.

‘ಐರೋಪ್ಯ ಒಕ್ಕೂಟದ ಪ್ರತಿನಿಧಿ ಮತ್ತು ಉಪಾಧ್ಯಕ್ಷ ಕಾಜಾ ಕಲ್ಲಾಸ್ ಅವರ ಆಹ್ವಾನದ ಮೇರೆಗೆ ಬೆಲ್ಜಿಯಂ ರಾಜಧಾನಿಗೆ ಭೇಟಿ ನೀಡಿದ್ದೇನೆ’ ಎಂದು ಜೈಶಂಕರ್ ತಿಳಿಸಿದ್ದಾರೆ.

ಇದೇ ವೇಳೆ, ಐರೋಪ್ಯ ಒಕ್ಕೂಟದ ಪ್ರಮುಖ ನಾಯಕರೊಂದಿಗೂ ಮಾತುಕತೆ ನಡೆಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

2030ಕ್ಕೆ ಜೆನ್ ಝೀ ಪೀಳಿಗೆ ಖರ್ಚು ₹120 ಲಕ್ಷ ಕೋಟಿ



ನವದೆಹಲಿ (ಪಿಟಿಐ): ಜೆನ್ ಝೀ ತಲೆಮಾರಿನವರು 2030ರ ವೇಳೆಗೆ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 27ರಷ್ಟಾಗಲಿದ್ದಾರೆ. ಈ ವೇಳೆಗೆ ಇವರು ವಿವಿಧ ವಸ್ತುಗಳ ಖರೀದಿಗೆ ಖರ್ಚು ಮಾಡುವ ಒಟ್ಟು ಮೊತ್ತವು ₹120 ಲಕ್ಷ ಕೋಟಿ (1.3 ಟ್ರಿಲಿಯನ್ ಡಾಲರ್) ದಾಟಲಿದೆ ಎಂದು ರೆಡ್‌ಸೀರ್ ಕನ್ಸಲ್ಟಿಂಗ್ ಕಂಪನಿ ವರದಿ ತಿಳಿಸಿದೆ.

1997ರಿಂದ 2012ರ ನಡುವೆ ಜನಿಸಿದವರನ್ನು ಜೆನ್ ಝೀ ತಲೆಮಾರಿನವರು ಎಂದು ಗುರುತಿಸಲಾಗುತ್ತಿದೆ.

ಸೌಂದರ್ಯ ಮತ್ತು ವೈಯಕ್ತಿಕ ಆರೈಕೆಗೆ (ಬಿಪಿಸಿ) ಜೆನ್ ಝೀ ತಲೆಮಾರಿನವರು ಹೆಚ್ಚಿನ ಆದ್ಯತೆ ನೀಡುತ್ತಿದ್ದು, 2030ರ ವೇಳೆಗೆ ಈ ವಲಯಕ್ಕೆ ಖರ್ಚು ಮಾಡುವ ಮೊತ್ತವು ₹1.75 ಲಕ್ಷ ಕೋಟಿಯಷ್ಟಾಗುವ ಅಂದಾಜಿದೆ.

ಜೆನ್ ಝೀ ಯುವತಿಯರಲ್ಲಿ ಪ್ರತಿ ಇಬ್ಬರಲ್ಲಿ ಒಬ್ಬರು ಈ ಉತ್ಪನ್ನಗಳಿಗಾಗಿ ತಮ್ಮ ಆದಾಯದಲ್ಲಿ ಶೇ 20ಕ್ಕೂ ಹೆಚ್ಚು ಹಂಚಿಕೆ ಮಾಡುತ್ತಾರೆ. ಯುವಕರು ಸಹ ಸೌಂದರ್ಯಕ್ಕೆ ಆದ್ಯತೆ ನೀಡುತ್ತಿದ್ದು, ತ್ವಚೆಯ ಆರೈಕೆಗೆ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ.

₹1 ಸಾವಿರದೊಳಗಿನ ಫ್ಯಾಷನ್ ಉತ್ಪನ್ನಗಳು ಇವರಿಗೆ ಆದ್ಯತೆಯಾಗಿವೆ. ಮೂರನೇ ಒಂದು ಭಾಗದಷ್ಟು ಜನರು ತಮ್ಮ ಆದಾಯದಲ್ಲಿ ಕನಿಷ್ಠ ಶೇ 20ರಷ್ಟನ್ನು ದೈಹಿಕ ದೃಢತೆ ಮತ್ತು ಕ್ರೀಡಾ ಚಟುವಟಿಕೆಗೆ ಖರ್ಚು ಮಾಡುತ್ತಾರೆ.

ಈ ತಲೆಮಾರಿನವರು ಆರೋಗ್ಯಕರ ಆಹಾರ ಪದ್ಧತಿಯ ಕಡೆಗೆ ಹೆಚ್ಚಿನ ಒಲವು ತೋರಿದ್ದಾರೆ. 2024 ಮತ್ತು 2025ರ ನಡುವೆ ಪೋಷಕಾಂಶಯುಕ್ತ ಆಹಾರ ಉತ್ಪನ್ನಗಳ ಮಾರಾಟವು ಆನ್‌ಲೈನ್‌ನಲ್ಲಿ ಶೇ 230ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ರಾಜ್ಯದಲ್ಲಿ ಪ್ರತಿ ಕ್ವಿಂಟಲ್ ಕುಸುಬೆ ಸರಾಸರಿ ₹5,097ರಂತೆ ಬಿಕರಿ

ಕುಸುಬೆ ದರ ಕುಸಿತ: ಸಂಕಷ್ಟದಲ್ಲಿ ರೈತ

• ಬಷೀರಅಹ್ಮದ್ ನಗಾರಿ

ಕಲಬುರಗಿ: ಎಣ್ಣೆಕಾಳು ಬೆಳೆ ಕುಸುಬೆ ದರವು ಮುಕ್ತ ಮಾರುಕಟ್ಟೆಯಲ್ಲಿ ಕುಸಿದಿದ್ದು, ಕೃಷಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ರಾಜ್ಯದ ಕಲಬುರಗಿ, ಬೀದರ್, ರಾಯಚೂರು, ವಿಜಯಪುರ, ಗದಗ, ಹಾವೇರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚಿನ ರೈತರು ಕುಸುಬೆ ಬೇಸಾಯ ಮಾಡುತ್ತಾರೆ. ಅಡುಗೆ ಎಣ್ಣೆ ದರ ಹೆಚ್ಚಳದಿಂದ ಎಣ್ಣೆ ಕಾಳು ಬೆಳೆಗೆ ಸಹಜವಾಗಿಯೇ ಉತ್ತಮ ಬೆಲೆ ಸಿಗುತ್ತದೆ ಎಂಬ ನಿರೀಕ್ಷೆಯಿತ್ತು.

ಕಲಬುರಗಿ ಜಿಲ್ಲೆಯಲ್ಲಿ 16 ಸಾವಿರ ಹೆಕ್ಟೇರ್ ವ್ಯಾಪ್ತಿಯಲ್ಲಿ ಕುಸುಬೆ ಬೆಳೆದಿದ್ದು, ಉತ್ತಮ ಇಳುವರಿ ಸಿಗುತ್ತಿದೆ. ಆದರೆ, ಕಲಬುರಗಿ ಎಪಿಎಂಸಿಯಲ್ಲಿ ಸದ್ಯ, ಕ್ವಿಂಟಲ್ ಕುಸುಬೆ ಕನಿಷ್ಠ ₹3,500 ಹಾಗೂ ಗರಿಷ್ಠ ₹4,800 (ಮಾರ್ಚ್ 14)ರಂತೆ ಬಿಕರಿಯಾಗುತ್ತಿದೆ.

ಫೆಬ್ರುವರಿ 1ರಿಂದ ಮಾರ್ಚ್ 15ರ ತನಕ ರಾಜ್ಯದ ವಿವಿಧ ಎಪಿಎಂಸಿಗಳಲ್ಲಿ ಒಟ್ಟು 13,864 ಕ್ವಿಂಟಲ್ ಕುಸುಬೆ ಆವಕವಾಗಿದ್ದು, ಸರಾಸರಿ ₹5,097 ದರ ಸಿಕ್ಕಿದೆ. ಇದು ಕನಿಷ್ಠ ಬೆಂಬಲ ಬೆಲೆಗಿಂತಲೂ ಕಮ್ಮಿ. ಕೇಂದ್ರ ಸರ್ಕಾರ 2025–26ನೇ ಸಾಲಿಗೆ ಕ್ವಿಂಟಲ್ ಕುಸುಬೆಗೆ ₹5,490 ಕನಿಷ್ಠ ಬೆಂಬಲ ಬೆಲೆ ಘೋಷಿಸಿದೆ.

ಕುಸುಬೆ ಖರೀದಿಗೆ ಕೇಂದ್ರಗಳನ್ನು ತೆರೆಯಲು ಅನುಮೋದನೆ ಕೋರಿ ರಾಜ್ಯ ಸರ್ಕಾರ ಮಾರ್ಚ್ 7ರಂದು ಕೇಂದ್ರಕ್ಕೆ ಪತ್ರ ಬರೆದಿದೆ. ಆದರೆ, ಈತನಕ ಖರೀದಿ ಕೇಂದ್ರ ತೆರೆದಿಲ್ಲ.

ಕಾಯುವಿಕೆ ಅನಿವಾರ್ಯ: ‘ನಾನು ಆರು ಎಕರೆಯಲ್ಲಿ ಕುಸುಬೆ ಬೆಳೆದಿದ್ದು, ಸರಾಸರಿ ಐದು ಕ್ವಿಂಟಲ್ ಇಳುವರಿ ಸಿಕ್ಕಿದೆ. ಆದರೆ, ದರ ಕುಸಿತದಿಂದ ಬೇಸರವಾಗಿದೆ’ ಎನ್ನುತ್ತಾರೆ ಜಿಲ್ಲೆಯ ಚಿಂಚೋಳಿಯ ರೈತ ದಶರಥ ನಾಯನೂರ.

‘ಬಿತ್ತನೆ ವೇಳೆ ಕ್ವಿಂಟಲ್ ಕುಸುಬೆ ದರ ₹10 ಸಾವಿರದ ಆಸುಪಾಸಿನಲ್ಲಿತ್ತು. ಇದೀಗ ಅದರ ಅರ್ಧಕ್ಕೆ ಇಳಿದಿದೆ. ಉತ್ತಮ ದರ ಸಿಗುವ ತನಕ ಕಾಯುವುದು ಅನಿವಾರ್ಯ’ ಎನ್ನುತ್ತಾರೆ ಅವರು.

‘10 ಎಕರೆ ಜಮೀನು ಬಾಡಿಗೆ ಪಡೆದು ಕುಸುಬೆ ಬಿತ್ತಿದ್ದೆ. 53 ಕ್ವಿಂಟಲ್ ಇಳುವರಿ ಬಂದಿತ್ತು. ಹೊಲದ ಬಾಡಿಗೆ ನೀಡಲು ಅನಿವಾರ್ಯವಾಗಿ ₹5 ಸಾವಿರ ದರದಲ್ಲೇ ಮಾರಿದೆ. ಲಾಭವೇ ಸಿಗಲಿಲ್ಲ’ ಎಂದು ಚಿತ್ತಾಪುರ ತಾಲ್ಲೂಕಿನ ಹೊಸೂರು ಗ್ರಾಮದ ರೈತ ರಾಮಲಿಂಗಪ್ಪ ಬಾನರ ಬೇಸರ ವ್ಯಕ್ತಪಡಿಸಿದರು.



ಕಲಬುರಗಿ ಜಿಲ್ಲೆಯ ಚಿಂಚೋಳಿ ಹೊರವಲಯದಲ್ಲಿ ಕುಸುಬೆ ರಾಶಿ ಮಾಡಲಾಯಿತು —ಪ್ರಜಾವಾಣಿ ಚಿತ್ರ

> ಮುಕ್ತ ಮಾರುಕಟ್ಟೆಯಲ್ಲಿ ಕುಸುಬೆಗೆ ಎಂಎಸ್‌ಪಿಗಿಂತಲೂ ಕಡಿಮೆ ದರವಿದೆ. ಸರ್ಕಾರ ಕೂಡಲೇ ಕುಸುಬೆ ಖರೀದಿಗೆ ಕೇಂದ್ರ ತೆರೆಯಬೇಕು
>
> **ಶರಣಬಸಪ್ಪ ಮಮಶೆಟ್ಟಿ**, ರೈತ ಮುಖಂಡ, ಕಲಬುರಗಿ

> ಜಿಲ್ಲೆಯಲ್ಲಿ ಈ ಸಲ ಕುಸುಬೆ ಬೇಸಾಯ ಹೆಚ್ಚಿದೆ. ಖರೀದಿ ಕೇಂದ್ರಗಳ ಸ್ಥಾಪನೆಗೆ ಸರ್ಕಾರದ ಆದೇಶಕ್ಕೆ ಕಾಯುತ್ತಿದ್ದು, ಆದೇಶ ಬೆನ್ನಲ್ಲೇ ಖರೀದಿ ಕೇಂದ್ರ ತೆರೆಯಲಾಗುವುದು
>
> **ಸಮದ್ ಪಟೇಲ್**, ಜಂಟಿ ಕೃಷಿ ನಿರ್ದೇಶಕ, ಕಲಬುರಗಿ

‘ಭದ್ರತಾ ಮಂಡಳಿಯಲ್ಲಿ ಸಮಸ್ಯೆ ಇದೆ’



ಆಂಟೊನಿಯೊ ಗುಟೆರಸ್

ವಿಶ್ವಸಂಸ್ಥೆ (ಪಿಟಿಐ): ‘ಭದ್ರತಾ ಮಂಡಳಿಯಲ್ಲಿ ಸಮಸ್ಯೆ ಇದೆ ಎಂಬುದನ್ನು ಗುರುತಿಸುವ ಅಗತ್ಯವಿದೆ. ಈಗಿನ ಭದ್ರತಾ ಮಂಡಳಿಯು ಪ್ರಸ್ತುತ ಜಗತ್ತನ್ನು ಪ್ರತಿನಿಧಿಸುವುದಿಲ್ಲ. ಕಾಯಂ ಸದಸ್ಯ ರಾಷ್ಟ್ರಗಳು ತಮ್ಮ ವೀಟೊ ಅಧಿಕಾರವನ್ನು ಬಳಸಿ ಸಂಘರ್ಷಗಳನ್ನು ನಿಲ್ಲಿಸಲು ಅವಕಾಶ ನೀಡುತ್ತಿಲ್ಲ’ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಅವರು ಮಾರ್ಮಿಕವಾಗಿ ಹೇಳಿದರು.

ಬೈರೂತ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈಗಿನ ಭದ್ರತಾ ಮಂಡಳಿಯು 1945ರ ನಂತರದ ಜಗತ್ತನ್ನು ಪ್ರತಿನಿಧಿಸುತ್ತದೆ. ಅದು ಈಗಿನ ರಾಜಕೀಯ ಹಾಗೂ ಭೌಗೋಳಿಕ ವಾಸ್ತವ ಸಂಗತಿಗಳನ್ನು ಪ್ರತಿಬಿಂಬಿಸುವುದಿಲ್ಲ’ ಎಂದರು.

ಭದ್ರತಾ ಮಂಡಳಿಯಲ್ಲಿ 15 ಸದಸ್ಯ ರಾಷ್ಟ್ರಗಳಿವೆ. ಈ ಪೈಕಿ ಚೀನಾ, ರಷ್ಯಾ, ಫ್ರಾನ್ಸ್, ಇಂಗ್ಲೆಂಡ್ ಹಾಗೂ ಅಮೆರಿಕ 5 ಕಾಯಂ ಸದಸ್ಯ ರಾಷ್ಟ್ರಗಳು. ಇವೆಲ್ಲ ಏಷ್ಯಾ, ಯುರೋಪ್, ಅಮೆರಿಕ ಪ್ರತಿನಿಧಿಸುತ್ತವೆ. ಆದರೆ ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕದಿಂದ ಯಾವುದೇ ರಾಷ್ಟ್ರಗಳು ಕಾಯಂ ಸದಸ್ಯರಾಗಿಲ್ಲ. ಜಾಗತಿಕ ಸಂಪತ್ತು ಹಾಗೂ ಹೆಚ್ಚಿನ ಜನಸಂಖ್ಯೆ ಹೊಂದಿರುವ ಏಷ್ಯಾದಿಂದಲೂ ಒಂದೇ ರಾಷ್ಟ್ರ ಕಾಯಂ ಸದಸ್ಯತ್ವ ಹೊಂದಿದೆ’ ಎಂದು ಅವರು ಹೇಳಿದರು.

ಹೀಗಾಗಿ ಭದ್ರತಾ ಮಂಡಳಿಯ ವೀಟೊಗಳು ನ್ಯಾಯಸಮ್ಮತದ ಕೊರತೆ ಹಾಗೂ ದಕ್ಷತೆಯ ಸಮಸ್ಯೆಯನ್ನು ಹೊಂದಿವೆ ಎಂದು ಟೀಕಿಸಿದರು.

‘ದೇಶದ ಹಿತಾಸಕ್ತಿಗಾಗಿ ಸರ್ಕಾರದಿಂದ ಕ್ರಮ’



ದತ್ತಾತ್ರೇಯ ಹೊಸಬಾಳೆ

ಸಮಾಲಖಾ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ಯುದ್ಧ ನಡೆಯುತ್ತಿರುವ ಸಮಯದಲ್ಲಿ, ‘ವಿಶ್ವದಲ್ಲಿ ಶಾಂತಿ ನೆಲಸಬೇಕು ಎಂದು ನಾವು ಬಯಸುತ್ತೇವೆ’ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಕರೆ ನೀಡಿದೆ. ರಾಷ್ಟ್ರದ ಹಿತಾಸಕ್ತಿಗಳನ್ನು ಗಮನದಲ್ಲಿರಿಸಿಕೊಂಡು ಕೇಂದ್ರ ಸರ್ಕಾರವು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದೂ ಹೇಳಿದೆ.

‘ಹಲವು ಕಾರಣಗಳಿಂದ ಯುದ್ಧಗಳು ನಡೆಯುತ್ತವೆ. ಈ ಯುದ್ಧವು ಸಾಧ್ಯವಾದಷ್ಟೂ ಬೇಗ ನಿಲ್ಲಬೇಕು. ಜನಜೀವನವು ಸಹಜಸ್ಥಿತಿಗೆ ಮರಳಬೇಕು’ ಎಂದು ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಹೇಳಿದರು.

ಹರಿಯಾಣದ ಸಮಾಲಖಾದಲ್ಲಿ ನಡೆಯುತ್ತಿರುವ ಆರ್‌ಎಸ್‌ಎಸ್‌ನ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಉನ್ನತ ಸಮಿತಿ ‘ಅಖಿಲ ಭಾರತೀಯ ಪ್ರತಿನಿಧಿ ಸಭಾ’ದ (ಎಬಿಪಿಎಸ್) ಮೂರು ದಿನಗಳ ಸಮಾವೇಶದ ಕುರಿತು ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ದೇಶದ ಜನರ ಹಿತಾಸಕ್ತಿಗೆ ಅನುಗುಣವಾಗಿ ಯಾವುದು ಮುಖ್ಯವೋ ಅದನ್ನೇ ಭಾರತ ಸರ್ಕಾರ ಮಾಡುತ್ತಿದೆ. ದೇಶದ ಪ್ರಜೆಗಳಿಗಾಗಿ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ’ ಎಂದರು.

ದುಬೈ, ಕುವೈತ್ ಮೇಲೆ ಮುಂದುವರಿದ ದಾಳಿ • ವಸತಿ ಪ್ರದೇಶಗಳನ್ನು ಗುರಿಯಾಗಿಸಿದ ಅಮೆರಿಕ

ಅಮೆರಿಕ, ಅದರ ಮಿತ್ರರಿಗೆ ಇರಾನ್ ಎಚ್ಚರಿಕೆ

ದುಬೈ/ಟೆಹರಾನ್ (ಎಎಫ್‌ಪಿ): ಒಂದು ವೇಳೆ ಹೊರ್ಮುಜ್ ಜಲಸಂಧಿ ಬಳಿ ತೈಲ ಟ್ಯಾಂಕರ್‌ಗಳಿಗೆ ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳು ಬೆಂಗಾವಲು ನೀಡಿದರೆ, ಅಮೆರಿಕದ ಪರ ಯುದ್ಧದಲ್ಲಿ ಪಾಲ್ಗೊಂಡರೆ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಇರಾನ್ ಭಾನುವಾರ ಎಚ್ಚರಿಸಿದೆ.

ಹೊರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿರಿಸಲು ಮಿತ್ರ ದೇಶಗಳಾದ ಚೀನಾ, ಫ್ರಾನ್ಸ್, ಜಪಾನ್, ದಕ್ಷಿಣ ಕೊರಿಯಾ, ಬ್ರಿಟನ್ ಯುದ್ಧ ನೌಕೆಗಳನ್ನು ರವಾನಿಸುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ಕರೆ ನೀಡಿದ್ದರು.

ಆದರೆ ಟ್ರಂಪ್ ಅವರ ಈ ಕರೆಯನ್ನು ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಅವರು ‘ಭಿಕ್ಷಾಟನೆ’ ಎಂದು ಬಣ್ಣಿಸಿದ್ದಾರೆ. ಅಲ್ಲದೆ ಯುದ್ಧದಲ್ಲಿ ಅಮೆರಿಕ, ಇಸ್ರೇಲ್ ಜತೆ ಕೈಜೋಡಿಸದಂತೆ ಇತರ ದೇಶಗಳಿಗೆ ಎಚ್ಚರಿಕೆಯನ್ನೂ ನೀಡಿದ್ದಾರೆ.

ಈ ಯುದ್ಧದಿಂದ ಆಗಿರುವ ನಷ್ಟ ಪರಿಹಾರ ತುಂಬಿಕೊಡಲು ಒಪ್ಪಿದರೆ ಯುದ್ಧ ಕೊನೆಗೊಳ್ಳುತ್ತದೆ ಎಂದು ಅರಾಘ್ಚಿ ಹೇಳಿದ್ದಾರೆ.

ಒಂದು ವೇಳೆ ಇರಾನ್‌ನ ತೈಲ ಮೂಲ-ಸೌಕರ್ಯಕ್ಕೆ ಹಾನಿಯಾದರೆ, ಅಮೆರಿಕ ಮತ್ತು ಅದರ ಮಿತ್ರ ದೇಶಗಳ ತೈಲ ಆರ್ಥಿಕ ವ್ಯವಸ್ಥೆ, ಇಂಧನ ಮೂಲಸೌಕರ್ಯವನ್ನು ನಾಶಪಡಿಸಲಾಗುವುದು ಎಂದು ಇರಾನ್ ಜಂಟಿ ಸೇನಾ ಕಮಾಂಡ್ ಪುನರುಚ್ಚರಿಸಿದೆ.

ದಾಳಿ ತೀವ್ರಗೊಳಿಸಿದ ಇರಾನ್: ಯುಎಇಯ ಪ್ರಮುಖ ಬಂದರುಗಳ ಬಳಿಯ ಜನರನ್ನು ಸ್ಥಳಾಂತರಿಸುವಂತೆ ಕರೆ ನೀಡಿದ ಮರುದಿನವೇ, ಇರಾನ್ ಕೊಲ್ಲಿ ದೇಶಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಭಾನುವಾರ ತೀವ್ರಗೊಳಿಸಿದೆ.

ಈ ಮೂಲಕ ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಮೂರನೇ ವಾರವೂ ಮುಂದುವರಿದಿದ್ದು, ಕೊನೆಗೊಳ್ಳುವ ಲಕ್ಷಣಗಳು ಗೋಚರಿಸುತ್ತಿಲ್ಲ. ಇರಾನ್‌ನ ತೈಲ ರಫ್ತುಗಳನ್ನು ನಿರ್ವಹಿಸುವ ಖಾರ್ಗ್ ದ್ವೀಪದ ಮೇಲೆ ಅಮೆರಿಕ ದಾಳಿ ನಡೆಸಿದ್ದರಿಂದ ಕುಪಿತಗೊಂಡಿರುವ ಇರಾನ್, ಕೊಲ್ಲಿ ದೇಶಗಳ ವಿರುದ್ಧ ದಾಳಿಗಳನ್ನು ಮುಂದುವರಿಸಿದೆ.

ದುಬೈನ ಮರಿನಾ, ಅಲ್ ಸುಫೌಹ್ ಪ್ರದೇಶಗಳಲ್ಲಿ ಹಾಗೂ ಕುವೈತ್‌ನ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಇರಾನ್ ಹಲವು ಡ್ರೋನ್‌ಗಳ ಮೂಲಕ ದಾಳಿ ನಡೆಸಿದೆ.



ಇಸ್ರೇಲ್ ತನ್ನ ಉತ್ತರ ಗಡಿ ಭಾಗದಿಂದ ಲೆಬನಾನ್ ಕಡೆಗೆ ಫಿರಂಗಿ ಮೂಲಕ ಭಾನುವಾರ ಗುಂಡಿನ ದಾಳಿ ನಡೆಸಿತು —ಎಎಫ್‌ಪಿ

ನೆತನ್ಯಾಹುವನ್ನು ಬೇಟೆಯಾಡುತ್ತೇವೆ: ಇರಾನ್

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಬೇಟೆಯಾಡುವುದಾಗಿ ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಭಾನುವಾರ ಪ್ರತಿಜ್ಞೆ ಮಾಡಿದೆ.

‘ಈಗಾಗಲೇ ನೆತನ್ಯಾಹು ಸತ್ತಿದ್ದಾರೆ ಎಂಬ ವದಂತಿಯಿದೆ. ಒಂದು ವೇಳೆ ಅವರೇನಾದರೂ ಜೀವಂತ ಇದ್ದರೆ, ನಾವು ಅವರನ್ನು ಬೆನ್ನಟ್ಟಿ ಕೊಲ್ಲುತ್ತೇವೆ’ ಎಂದು ಅದು ಶಪಥ ಮಾಡಿದೆ.

ಸೌದಿ, ಯುಎಇ ಸಚಿವರ ಜತೆ ಜೈಶಂಕರ್ ಮಾತುಕತೆ

ಪಶ್ಚಿಮ ಏಷ್ಯಾ ಸಂಘರ್ಷ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಸೌದಿ ಅರೇಬಿಯಾ, ಯುಎಇ ವಿದೇಶಾಂಗ ಸಚಿವರ ಜತೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು.

ಪ್ರಸ್ತುತ ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಸ್ಥಿತಿ, ಜಾಗತಿಕ ಇಂಧನ ಭದ್ರತೆಗೆ ಎದುರಾಗಿರುವ ಆತಂಕಗಳ ಕುರಿತು ಎರಡೂ ದೇಶಗಳ ನಾಯಕರ ಜತೆ ಚರ್ಚಿಸಲಾಯಿತು ಎಂದು ಜೈಶಂಕರ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ಪ್ರಿನ್ಸ್ ಸುಲ್ತಾನ್ ನೆಲೆ ಮೇಲೆ ದಾಳಿ: ಸೌದಿ ಅರೇಬಿಯಾ ರಾಜಧಾನಿ ರಿಯಾದ್ ಬಳಿಯ ಅಲ್ ಖಾರ್ಜ್‌ನಲ್ಲಿರುವ ಪ್ರಿನ್ಸ್ ಸುಲ್ತಾನ್ ವಾಯುನೆಲೆ ಮೇಲೆ ಇರಾನ್ ಪದೇ ಪದೇ ದಾಳಿ ನಡೆಸಿದೆ. ಇಲ್ಲಿ ಅಮೆರಿಕದ ಹಲವು ಯುದ್ಧ ವಿಮಾನಗಳಿವೆ ಎಂದು ಸೌದಿಯ ರಕ್ಷಣಾ ಸಚಿವಾಲಯ ತಿಳಿಸಿದೆ. ಅಲ್ಲದೆ, ಬಾಗ್ದಾದ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಯ ಆವರಣದ ಮೇಲೂ ಇರಾನ್ ತನ್ನ ದಾಳಿಯನ್ನು ಮುಂದುವರಿಸಿದೆ.

ಮತ್ತೊಂದೆಡೆ, ಇರಾನ್‌ನ ಶಿರಾಝ್ ನಗರದ ಜನವಸತಿ ಪ್ರದೇಶವನ್ನು ಗುರಿಯಾಗಿಸಿ ಅಮೆರಿಕ–ಇಸ್ರೇಲ್ ಭಾನುವಾರ ವಾಯುದಾಳಿ ನಡೆಸಿದೆ. ಇದರಲ್ಲಿ ಹಲವರ ಮನೆಗಳು ನಾಶಗೊಂಡಿದ್ದು, ಹಲವಾರು ಗಾಯಗೊಂಡಿದ್ದಾರೆ.

> ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವನ್ನು ಕೊನೆಗಾಣಿಸಿ, ಆದಷ್ಟು ಬೇಗ ಕದನ ವಿರಾಮ ಜಾರಿಗೊಳಿಸುವ ಮೂಲಕ ಶಾಂತಿ ಸ್ಥಾಪನೆಗೆ ಯತ್ನಿಸಿ
>
> **ಪೋಪ್ ಲಿಯೊ- 14**

ಇರಾನ್ ಆರೋಪ: ಯುಎಇಯ ರಾಸ್ ಅಲ್ ಖೈಮಾ ಮತ್ತು ದುಬೈ ಸಮೀಪದಿಂದ ಅಮೆರಿಕವು ಖಾರ್ಗ್ ಮತ್ತು ಅಬು ಮೂಸಾ ದ್ವೀಪಗಳ ಮೇಲೆ ದಾಳಿ ನಡೆಸಿದೆ ಎಂದು ಇರಾನ್ ವಿದೇಶಾಂಗ ಸಚಿವರು ಆರೋಪಿಸಿದ್ದಾರೆ. ಇದಕ್ಕೆ ಅಮೆರಿಕ ಯಾವುದೇ ಪ್ರತಿಕ್ರಿಯೆ ನೀಡಿಲ್ಲ, ಆದರೆ ಯುಎಇ ಈ ಆರೋಪವನ್ನು ತಳ್ಳಿಹಾಕಿದೆ.

‘ನಮ್ಮ ಮೇಲೆ ದಾಳಿ ಮಾಡುತ್ತಿರುವ ಅಮೆರಿಕ ಮತ್ತು ಅದರ ಮಿತ್ರ ದೇಶಗಳಿಗೆ ಮಾತ್ರ ಹೊರ್ಮುಜ್ ಜಲಸಂಧಿ ಮುಚ್ಚಲಾಗಿದೆ’ ಎಂದು ಅರಾಘ್ಚಿ ಪುನರುಚ್ಚರಿಸಿದ್ದಾರೆ.

ಸಾವು– ನೋವು: ಫೆಬ್ರುವರಿ 28ರಿಂದ ಆರಂಭವಾದ ಯುದ್ಧದಲ್ಲಿ 202 ಮಕ್ಕಳು ಮತ್ತು 223 ಮಹಿಳೆಯರು ಸೇರಿದಂತೆ 1,300ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ ಎಂದು ಇರಾನ್‌ನ ತಿಳಿಸಿದೆ.

ಇದರ ನಡುವೆ ಲೆಬನಾನ್ ಮೇಲೆ ಇಸ್ರೇಲ್ ದಾಳಿಯು ಮುಂದುವರಿದಿದ್ದು, ಹಲವು ಸಾವು–ನೋವುಗಳು ಸಂಭವಿಸಿವೆ. ಯುದ್ಧ ಆರಂಭವಾದಾಗಿನಿಂದ ಲೆಬನಾನ್‌ನಲ್ಲಿ 800ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಇಸ್ರೇಲ್ ಮೇಲಿನ ಇರಾನ್ ಕ್ಷಿಪಣಿ ದಾಳಿಯಿಂದ 12 ಜನರು ಮೃತಪಟ್ಟಿದ್ದಾರೆ. ಅಮೆರಿಕದ 13 ಯೋಧರು ಅಸುನೀಗಿದ್ದಾರೆ.

‘ಏ.30ಕ್ಕೆ ಕೆ.ಡಿ ಬಿಡುಗಡೆ ಖಚಿತ’

ಧ್ರುವ ಸರ್ಜಾ ನಟನೆಯ ‘ಕೆ.ಡಿ’ ಚಿತ್ರದ ‘ಸರ್ರೇ ಸರ್ರೇ ನಿನ್ನ ಸೆರಗಾ ಸರಿಸೇ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಏ.30ಕ್ಕೆ ಚಿತ್ರ ತೆರೆಗೆ ಬರುವುದು ಖಚಿತ ಎಂದು ಚಿತ್ರದ ನಿರ್ದೇಶಕ ಪ್ರೇಮ್ ಹೇಳಿದ್ದಾರೆ.

‘2025ರ ಡಿಸೆಂಬರ್‌ನಲ್ಲಿಯೇ ಚಿತ್ರದ ಬಿಡುಗಡೆ ದಿನಾಂಕ ಘೋಷಿಸಿದ್ದೆವು. ಕೆವಿಎನ್ ಪ್ರೊಡಕ್ಷನ್ ಸಿನಿಮಾಗಳೆಂದರೆ ದೊಡ್ಡ ಮೊತ್ತದ ಹೂಡಿಕೆ ಇರುತ್ತದೆ. ಹೀಗಾಗಿ ಕೆಲವೊಮ್ಮೆ ಬಿಡುಗಡೆ ದಿನಾಂಕ ಬದಲಾಗುತ್ತದೆ. ‘ಜನ ನಾಯಗನ್’, ‘ಟಾಕ್ಸಿಕ್’ ಎರಡೂ ಸಿನಿಮಾಗಳು ಮುಂದಕ್ಕೆ ಹೋಗಿರುವುದಕ್ಕೆ ಬಲವಾದ ಕಾರಣಗಳಿವೆ. ಆದರೆ ‘ಕೆ.ಡಿ’ ದಿನಾಂಕ ಆಗಲೇ ನಿಗದಿಯಾಗಿದೆ. ಚಿತ್ರದ ಕೆಲಸಗಳು ಮುಗಿದಿವೆ. ಹೀಗಾಗಿ ಘೋಷಿಸಿದ ದಿನಾಂಕದಂದೇ ಚಿತ್ರ ತೆರೆಗೆ ಬರಲಿದೆ’ ಎಂದರು ಪ್ರೇಮ್.

‘ಸರ್ರೇ ಸರ್ರೇ ನಿನ್ನ ಸೆರಗಾ ಸರಿಸೇ’ ಹಾಡಿನಲ್ಲಿ ಬಾಲಿವುಡ್ ನಟಿ ನೋರಾ ಫತೇಹಿ ಚಿತ್ರದ ಖಳನಾಯಕ ಸಂಜಯ್ ದತ್ ಜತೆ ಹೆಜ್ಜೆ ಹಾಕಿದ್ದಾರೆ. ಅರ್ಜುನ್ ಜನ್ಯ ಸಂಗೀತ ಸಂಯೋಜನೆಯ ಈ ಹಾಡಿಗೆ ಐಶ್ವರ್ಯಾ ರಂಗರಾಜನ್ ಧ್ವನಿಯಾಗಿದ್ದಾರೆ.

‘ನಮ್ಮ ಚಿತ್ರದ ನಾಲ್ಕನೆ ಹಾಡಿದು. ಚಿತ್ರದ ಮೂರು ಹಾಡುಗಳೂ ಹಿಟ್ ಆಗಿವೆ. ಇದೂ ಆಗುತ್ತದೆ ಎಂಬ ವಿಶ್ವಾಸವಿದೆ. ಮುಂದಿನ ತಿಂಗಳು ಚಿತ್ರ ತೆರೆಗೆ ಬರಲಿದೆ. ಚಿತ್ರಮಂದಿರಗಳಲ್ಲಿ ಸಿನಿಮಾವನ್ನು ಸಂಭ್ರಮಿಸೋಣ’ ಎಂದರು ಧ್ರುವ ಸರ್ಜಾ.

‘ದಕ್ಷಿಣದ ಎಲ್ಲ ಭಾಷೆಗಳ ಸಿನಿಮಾಗಳು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುತ್ತಿವೆ. ಅಷ್ಟರಮಟ್ಟಿಗೆ ಇಲ್ಲಿನ ಸಿನಿಮಾಗಳು ಪರಿಣಾಮಕಾರಿಯಾಗಿವೆ. ನಾನು ಕೇವಲ ನೃತ್ಯಗಾರ್ತಿಯಲ್ಲ, ನಟಿ ಕೂಡ. ಬಾಲಿವುಡ್‌ನಲ್ಲಿ ಸಾಕಷ್ಟು ಒಳ್ಳೆಯ ಸಿನಿಮಾಗಳನ್ನು ಮಾಡಿರುವೆ. ತಮಿಳಿನಲ್ಲಿ ನಾಯಕಿಯಾಗಿ ನಟಿಸುತ್ತಿರುವೆ. 2015ರಲ್ಲಿ ದಕ್ಷಿಣ ಭಾರತದ ಚಿತ್ರೋದ್ಯಮಕ್ಕೆ ಕಾಲಿಟ್ಟೆ. ತೆಲುಗು, ತಮಿಳು ಸಿನಿಮಾಗಳಲ್ಲಿ ನಟಿಸಿರುವೆ. ಈ ಹಾಡಿನಲ್ಲಿ ಸೀರೆಯುಟ್ಟು ಹೆಜ್ಜೆ ಹಾಕಿದ್ದೇನೆ’ ಎಂದರು ನೋರಾ ಫತೇಹಿ.

ರಕ್ಷಿತಾ ಪ್ರೇಮ್, ನಾಯಕಿ ರೀಷ್ಮಾ ನಾಣಯ್ಯ, ಕಾರ್ಯಕಾರಿ ನಿರ್ಮಾಪಕ ಸುಪ್ರೀತ್ ಮುಂತಾದವರು ಚಿತ್ರದ ಕುರಿತು ಮಾತನಾಡಿದರು. ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್ ಸೇರಿದಂತೆ ಹಲವರು ಚಿತ್ರದಲ್ಲಿದ್ದಾರೆ.



ನೋರಾ ಫತೇಹಿ



ಚಿತ್ರತಂಡ

> ಐಟಂ ಸಾಂಗ್‌ಗಳಿಗೆ ಅದರದ್ದೇ ಆದ ಬೆಲೆ ಇದೆ. ಹೀಗಾಗಿ ಪ್ರತಿ ಹಾಡು ಭಿನ್ನ. ಪ್ರತಿ ಸಲ ನೃತ್ಯ ಮಾಡುವಾಗಲೂ ನನ್ನದೇ ಆದ ಛಾಪು ನೀಡಲು ಯತ್ನಿಸುತ್ತೇನೆ.
> **ನೋರಾ ಫತೇಹಿ**, ನಟಿ



ಚಿತ್ರತಂಡ

ಹೊಸಬರ ‘ಲವ್ ಸೀಸನ್ಸ್’

ಬಹುತೇಕ ಹೊಸಬರಿಂದಲೇ ಕೂಡಿರುವ ‘ಲವ್ ಸೀಸನ್ಸ್’ ಚಿತ್ರದ ಚಿತ್ರೀಕರಣ ಮುಕ್ತಾಯಗೊಂಡಿದೆ. ಕೃತ್ವಿಕ್ ನಿರ್ದೇಶನದ ಚಿತ್ರ ಈ ತಲೆಮಾರಿನ ಪ್ರೇಮಕಥೆಯನ್ನು ಹೊಂದಿದೆ.

‘ಚಿತ್ರದ ಚಿತ್ರೀಕರಣ ಪೂರ್ತಿಗೊಂಡು ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪ್ರಾರಂಭವಾಗಿವೆ. ಚಿತ್ರತಂಡದಲ್ಲಿನ ಎಲ್ಲರೂ ರಂಗಭೂಮಿ ಹಿನ್ನೆಲೆ ಹೊಂದಿರುವವರು. ಮಂಡ್ಯ ರಮೇಶ್ ಸಾರಥ್ಯದ ನಟನಾ ಸಂಸ್ಥೆಯಲ್ಲಿ ತರಬೇತಿ ಹೊಂದಿದ ಮುಕುಂದ ರಾಮಸ್ವಾಮಿ ನಾಯಕನಾಗಿ ನಟಿಸಿದ್ದಾರೆ. ದಿಯಾ ಕೀರ್ತಿ, ಚಂದನ ಗೌಡ ಮತ್ತು ಶ್ವೇತಾ ಕೊಗ್ಲೂರ್ ನಾಯಕಿಯರಾಗಿ ಜೊತೆಯಾಗಿದ್ದಾರೆ. ಗಟ್ಟಿ ಕಥೆ ಮತ್ತು ಈಗಿನ ಕಾಲಕ್ಕೆ ಅಗತ್ಯವಾಗಿರುವ ಸಂದೇಶ ಹೊಂದಿರುವ ಚಿತ್ರ. ಈಗಿನ ಕಾಲದ ಪ್ರೇಮ, ಪ್ರೇಮಿಗಳ ನಡುವೆ ನಡೆಯುವ ಸನ್ನಿವೇಶಗಳನ್ನು ಕಟ್ಟಿಕೊಟ್ಟಿದ್ದೇವೆ’ ಎಂದರು ನಿರ್ದೇಶಕ.

ಎನ್.ಆರ್ ಸ್ಟುಡಿಯೋಸ್ ಬ್ಯಾನರ್‌ನಡಿಯಲ್ಲಿ ಎನ್.ಆರ್ ಮಂಜುನಾಥ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದೆ.

‘ಇದು ಒಬ್ಬರನ್ನು ಇನ್ನೊಬ್ಬರು ನಂಬಲು ಕಷ್ಟವಿರುವಂಥ ಕಾಲಘಟ್ಟ. ನಂಬಿಕೆಯೆಂಬ ಚುಂಬಕ ಶಕ್ತಿಯ ಸುತ್ತ ಕಥೆ ಸಾಗುತ್ತದೆ. ಪ್ರೇಮದ ಪರಾಗ ಮೆತ್ತಿಕೊಂಡಿರುವ ಕಥೆ ಚಿತ್ರದಲ್ಲಿದೆ. ಇವತ್ತಿನ ಕಾಲದ ಯುವಕರಿಗೆ ಚಿತ್ರ ಹೆಚ್ಚು ಆಪ್ತವಾಗುತ್ತದೆ. ಶೀಘ್ರದಲ್ಲಿಯೇ ಚಿತ್ರವನ್ನು ತೆರೆಗೆ ತರುವ ಆಲೋಚನೆಯಿದೆ. ಎಂದರು ನಿರ್ಮಾಪಕ.

ವೀರ್ ಸಮರ್ಥ್ ಸಂಗೀತ ಸಂಯೋಜನೆಯಲ್ಲಿ ಹಾಡುಗಳು ಮೂಡಿ ಬಂದಿವೆ. ಕೆ.ಕಲ್ಯಾಣ್, ಪ್ರಮೋದ್ ಮರವಂತೆ ಮುಂತಾದವರು ಸಾಹಿತ್ಯ ಬರೆದಿದ್ದಾರೆ. ಅವಿನಾಶ ಶಾಸ್ತ್ರಿ ಛಾಯಾಚಿತ್ರಗ್ರಹಣ, ಮಧು ತುಂಬಕೆರೆ ಸಂಕಲನವಿದೆ. ಈ ಚಿತ್ರದಲ್ಲಿ ಮಂಡ್ಯ ರಮೇಶ್, ರಾಜೇಶ್ ನಟರಂಗ, ಸಂಗೀತಾ ಅನಿಲ್, ಜಯತೀರ್ಥ, ಚೇತನ್ ದುರ್ಗ, ಹುಲಿ ಕಾರ್ತಿಕ್, ಬೇಬಿ ರಿತು ಸಿಂಗ್ ಮುಂತಾದವರು ನಟಿಸಿದ್ದಾರೆ.

ಮುದ್ದು ಮಗಳೇ ಎಂದ ಡಾರ್ಲಿಂಗ್ ಕೃಷ್ಣ

‘ಲವ್ ಮಾಕ್ಟೇಲ್-3’ ಚಿತ್ರದ ‘ಮುದ್ದು ಮಗಳೇ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶಿಸಿರುವ ಚಿತ್ರ ಮಾರ್ಚ್ 19ರಂದು ಬಿಡುಗಡೆಗೊಳ್ಳುತ್ತಿದೆ.

ಅಪ್ಪ ಮಗಳ ಬಾಂಧವ್ಯವನ್ನು ಸಾರುವ ಗೀತೆ ಇದಾಗಿದೆ. ಅರುಣ್ ನಾಯಕ್ ಸಾಹಿತ್ಯದ ಹಾಡಿಗೆ ವಿಜಯ್ ಪ್ರಕಾಶ್ ಧ್ವನಿಯಾಗಿದ್ದಾರೆ ನಕುಲ್ ಅಭ್ಯಂಕರ್ ಸಂಗೀತವಿದೆ.

ಕ್ರಿಸ್‌ಮಿ ಬ್ಯಾನರಿನಡಿಯಲ್ಲಿ ಡಾರ್ಲಿಂಗ್ ಕೃಷ್ಣ ಮತ್ತು ಮಿಲನಾ ನಾಗರಾಜ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಮಿಲನಾ ನಾಗರಾಜ್, ಸಂವೃತ, ಅಮೃತಾ ಅಯ್ಯಂಗಾರ್, ದಿಲೀಪ್ ರಾಜ್, ಶ್ವೇತಾ ಪ್ರಸಾದ್, ರಚೆಲ್ ಡೇವಿಡ್, ನಯೇರಾ ಮುಂತಾದವರು ಚಿತ್ರದಲ್ಲಿದ್ದಾರೆ. ಶ್ರೀ ಕ್ರೇಜಿ ಮೈಂಡ್ಸ್ ಛಾಯಾಚಿತ್ರಗ್ರಹಣ ಮತ್ತು ಸಂಕಲನವಿದೆ.



ಡಾರ್ಲಿಂಗ್ ಕೃಷ್ಣ, ಸಂವೃತ

ಚಿಟಿಕೆ ಸುದ್ದಿ

ನಟಿ ಮಧು ಮಲ್ಹೋತ್ರಾ ನಿಧನ



ಮಧು ಮಲ್ಹೋತ್ರಾ

ಮುಂಬೈ (ಪಿಟಿಐ): ‘ಸತ್ತೆ ಪೆ ಸತ್ತಾ’, ‘ಕರ್ಜ್’ ಚಿತ್ರಗಳಲ್ಲಿ ನಟಿಸಿ ಜನಪ್ರಿಯರಾಗಿದ್ದ ಹಿರಿಯ ನಟಿ ಮಧು ಮಲ್ಹೋತ್ರಾ (71) ಅವರು ಶುಕ್ರವಾರ ಹೃದಯಾಘಾತದಿಂದ ಇಲ್ಲಿನ ಅಂಧೇರಿಯಲ್ಲಿರುವ ಹೋಲಿ ಸ್ಪಿರಿಟ್ ಆಸ್ಪತ್ರೆಯಲ್ಲಿ ನಿಧನರಾದರು ಎಂದು ಅವರು ಪುತ್ರ ಮನು ತಿಳಿಸಿದ್ದಾರೆ.

1970–90ರವರೆಗೆ ಹಲವಾರು ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದ ಮಧು ಅವರು, ‘ಕಾಲಾ ಪತ್ಥರ್’, ‘ವಿಧಾತ’, ‘ಸಂಬಂಧ್’, ಗುಲಾಮ್ ಸೇರಿದಂತೆ ಹಲವಾರು ಚಿತ್ರಗಳಲ್ಲಿ ನಟಿಸಿದ್ದರು. ಸುಭಾಷ್ ಘಾಯ್ ಅವರ ‘ಹೀರೋ’ ಚಿತ್ರದ ‘ಲಂಬಿ ಜುದಾಯಿ’ ಹಾಡಿನಲ್ಲಿ ಕಾಣಿಸಿಕೊಂಡಿದ್ದ ಅವರು ವ್ಯಾಪಕ ಗಮನ ಸೆಳೆದಿದ್ದರು.

ಮಧು ಅವರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಇದ್ದಾರೆ. ಓಶಿವಾರಾ ಸ್ಮಶಾನದಲ್ಲಿ ಅವರ ಅಂತಿಮ ವಿಧಿವಿಧಾನಗಳು ನಡೆದವು.

ಕೇಜ್ರಿವಾಲ್ ಅರ್ಜಿ ತಿರಸ್ಕರಿಸಿದ ಹೈಕೋರ್ಟ್

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದಲ್ಲಿ ತಮ್ಮನ್ನು ಖುಲಾಸೆಗೊಳಿಸಿರುವುದರ ವಿರುದ್ಧ ಸಿಬಿಐ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸ್ವರ್ಣಕಾಂತ್ ಶರ್ಮಾ ಅವರಿಂದ ಬೇರೆ ನ್ಯಾಯಾಧೀಶರಿಗೆ ವರ್ಗಾಯಿಸುವಂತೆ ಕೋರಿ ಆಮ್ ಆದ್ಮಿ ಪಕ್ಷದ (ಎಎಪಿ) ಸಂಚಾಲಕ ಅರವಿಂದ್ ಕೇಜ್ರಿವಾಲ್ ಮತ್ತು ಮುಖಂಡ ಮನೀಷ್ ಸಿಸೋಡಿಯಾ ಸಲ್ಲಿಸಿದ್ದ ಮನವಿಯನ್ನು ದೆಹಲಿ ಹೈಕೋರ್ಟ್ ತಿರಸ್ಕರಿಸಿದೆ.

ಹೈಕೋರ್ಟ್ ಮನವಿ ತಿರಸ್ಕರಿಸಿದ ಬೆನ್ನಲ್ಲೇ, ಕೇಜ್ರಿವಾಲ್ ಸುಪ್ರೀಂಕೋರ್ಟ್ ಮೊರೆ ಹೋಗಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ದೆಹಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಅವರು ಕೇಜ್ರಿವಾಲ್ ಸಲ್ಲಿಸಿದ್ದ ಮನವಿಯನ್ನು ತಿರಸ್ಕರಿಸಿದರು. ‘ವಿಚಾರಣಾ ನ್ಯಾಯಾಲಯದ ತೀರ್ಪಿನ ವಿರುದ್ಧ ಸಿಬಿಐ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಶರ್ಮಾ ಅವರು ರೋಸ್ಟರ್ ಅನುಗುಣವಾಗಿ ವಿಚಾರಣೆ ನಡೆಸುತ್ತಿದ್ದಾರೆ. ಆಡಳಿತಾತ್ಮಕವಾಗಿ ವರ್ಗಾವಣೆ ಆದೇಶ ಹೊರಡಿಸಲು ಯಾವುದೇ ಕಾರಣ ಇಲ್ಲ’ ಎಂದು ಅವರು ಹೇಳಿದ್ದಾರೆ.

ಕೇಜ್ರಿವಾಲ್ ವಿರುದ್ಧ ಸಿಬಿಐ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸ್ವರ್ಣಕಾಂತ್ ಶರ್ಮಾ ಅವರು ಸೋಮವಾರ ವಿಚಾರಣೆ ನಡೆಸಲಿದ್ದಾರೆ.

‘ಬಾದ್‌ಶಾ’ಗೆ ಜೀವ ಬೆದರಿಕೆ

ಚಂಡೀಗಢ (ಪಿಟಿಐ): ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನ ಸಹಚರ ಎಂದು ಹೇಳಿಕೊಂಡು ಸಾಮಾಜಿಕ ಮಾಧ್ಯಮದಲ್ಲಿ ಭಾನುವಾರ ಹಂಚಿಕೊಂಡಿರುವ ಪೋಸ್ಟ್‌ವೊಂದರಲ್ಲಿ ಬಾದ್‌ಶಾ ಎಂದೇ ಜನಪ್ರಿಯರಾದ ರ್‍ಯಾಪರ್ ಸಂಗೀತಗಾರ ಆದಿತ್ಯ ಪ್ರತೀಕ್ ಸಿಂಗ್ ಸಿಸೋಡಿಯಾ ಅವರಿಗೆ ಜೀವ ಬೆದರಿಕೆ ಹಾಕಲಾಗಿದೆ.

ರಾಜಕೀಯ ದುಷ್ಕೃತ್ಯ: ಮೋದಿ

ಅವಿಶ್ವಾಸ ನಿರ್ಣಯ ಕುರಿತು ಸ್ಪೀಕರ್ ಓಂ ಬಿರ್ಲಾಗೆ ಪ್ರಧಾನಿ ಪತ್ರ



ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಲೋಕಸಭೆ ಸ್ಪೀಕರ್ ಓಂ ಬಿರ್ಲಾ ವಿರುದ್ಧದ ಅವಿಶ್ವಾಸ ನಿರ್ಣಯವು ‘ರಾಜಕೀಯ ದುಷ್ಕೃತ್ಯ’ ಎಂದು ಟೀಕಿಸಿರುವ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸಲು ಕಾಂಗ್ರೆಸ್ ನೇತೃತ್ವದಲ್ಲಿ ವಿರೋಧ ಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲಾಗಿತ್ತು. ಅದರ ಬೆನ್ನಲ್ಲೇ ಪ್ರಧಾನಿ ಅವರು ಬಿರ್ಲಾ ಅವರಿಗೆ ಬರೆದ ಪತ್ರದಲ್ಲಿ, ವಿರೋಧ ಪಕ್ಷಗಳ ನಡೆಯನ್ನು ಟೀಕಿಸಿದ್ದಾರೆ.

ಪ್ರಧಾನಿ ಅವರ ಪತ್ರಕ್ಕೆ ಕೃತಜ್ಞತೆ ಸಲ್ಲಿಸಿರುವ ಬಿರ್ಲಾ, ‘ಭಾರತದ ಸಂಸದೀಯ ಪ್ರಜಾಪ್ರಭುತ್ವದ ನಿಯಮಗಳು, ಕಾರ್ಯವಿಧಾನಗಳು ಮತ್ತು ಸಂಪ್ರದಾಯಗಳಲ್ಲಿ ಪ್ರಧಾನಿ ಅವರು ಯಾವಾಗಲೂ ಅಚಲ ನಂಬಿಕೆ ಹೊಂದಿದ್ದಾರೆ’ ಎಂದು ಹೇಳಿದ್ದಾರೆ.

‘ನಿಮ್ಮ ವಿರುದ್ಧ ಲೋಕಸಭೆಯಲ್ಲಿ ತಂದಿದ್ದ ಅವಿಶ್ವಾಸ ನಿರ್ಣಯಕ್ಕೆ ಸದನದಲ್ಲಿ ಸೋಲಾಗಿದೆ. ಈ ರಾಜಕೀಯ ದುಷ್ಕೃತ್ಯವನ್ನು ತಿರಸ್ಕರಿಸಿದ ಸದನದ ಸದಸ್ಯರನ್ನು ಅಭಿನಂದಿಸುತ್ತೇನೆ’ ಎಂದು ಹಿಂದಿಯಲ್ಲಿ ಬರೆದ ಪತ್ರದಲ್ಲಿ ಮೋದಿ ತಿಳಿಸಿದ್ದಾರೆ.

‘ಕುಟುಂಬ ರಾಜಕಾರಣ ಮತ್ತು ಊಳಿಗಮಾನ್ಯ ಮನಃಸ್ಥಿತಿಯಲ್ಲಿ ಮುಳುಗಿರುವ ಕೆಲವು ವ್ಯಕ್ತಿಗಳು ನಮ್ಮ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ತಮ್ಮ ಕೈಯೊಳಗೆ ಇರಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ದೇಶವು ಹತಾಶೆಯಿಂದ ನೋಡುತ್ತಿದೆ’ ಎಂದು ದೂರಿದ್ದಾರೆ.

‘ಮಾತ್ರವಲ್ಲ, ಸದನದಲ್ಲಿ ಇತರ ಚುನಾಯಿತ ಪ್ರತಿನಿಧಿಗಳು, ವಿಶೇಷವಾಗಿ ಯುವ ಮತ್ತು ಹೊಸ ಸಂಸದರಿಗೆ ಮಾತನಾಡಲು ಸಮಾನ ಅವಕಾಶಗಳನ್ನು ನೀಡುವುದು ಅವರಿಗೆ ಇಷ್ಟವಾಗುತ್ತಿಲ್ಲ. ಇಂತಹ ಮನಃಸ್ಥಿತಿ ಪ್ರಜಾಪ್ರಭುತ್ವದ ತತ್ವಗಳಿಗೆ ವಿರುದ್ಧವಾಗಿದೆ’ ಎಂದು ಟೀಕಿಸಿದ್ದಾರೆ.

‘ಸದನದಲ್ಲಿ ಮಾತನಾಡುವ ಅವಕಾಶವು ಆಯ್ದ ಕೆಲವರಿಗೆ ಸೀಮಿತವಾಗಿಲ್ಲ. ಸಮಾಜದ ಪ್ರತಿಯೊಂದು ವರ್ಗ ಹಾಗೂ ದೇಶದ ಪ್ರತಿಯೊಂದು ಪ್ರದೇಶದ ಧ್ವನಿಗಳಿಗೆ ಸದನವು ವೇದಿಕೆ ಒದಗಿಸಬೇಕು’ ಎಂದು ಪತ್ರದಲ್ಲಿ ಪ್ರತಿಪಾದಿಸಿದ್ದಾರೆ.

ಭಿತ್ತಿಪತ್ರ ಪ್ರದರ್ಶನ: ಬಿರ್ಲಾ ಕಳವಳ



ಓಂ ಬಿರ್ಲಾ

ಕೆಲವು ಸಂಸದರು ಸದನದೊಳಗೆ ಬ್ಯಾನರ್, ಭಿತ್ತಿಪತ್ರ ಮತ್ತು ಪೋಸ್ಟರ್‌ಗಳನ್ನು ಪ್ರದರ್ಶಿಸುವುದು ಹಾಗೂ ಕೆಟ್ಟ ಭಾಷೆ ಬಳಸುವುದರ ಬಗ್ಗೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಭಾನುವಾರ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಲೋಕಸಭೆಯಲ್ಲಿ ಸದಸ್ಯರನ್ನು ಹೊಂದಿರುವ ಎಲ್ಲ ರಾಜಕೀಯ ಪಕ್ಷಗಳ ನಾಯಕರಿಗೆ ಪತ್ರ ಬರೆದಿರುವ ಅವರು, ತಮ್ಮ ಸದಸ್ಯರಿಂದ ಸದನದ ಶಿಸ್ತು ಪಾಲನೆ ಮತ್ತು ಉತ್ತಮ ನಡವಳಿಕೆಯನ್ನು ಖಚಿತಪಡಿಸಿಕೊಳ್ಳಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

‘ನಮ್ಮ ನಡವಳಿಕೆಯನ್ನು ಇಡೀ ದೇಶವು ಗಮನಿಸುತ್ತದೆ ಮತ್ತು ಸಂಸತ್ತು ನೀಡುವ ಸಂದೇಶವು ದೇಶದ ಎಲ್ಲಾ ಪ್ರಜಾಪ್ರಭುತ್ವ ಸಂಸ್ಥೆಗಳಲ್ಲಿ ಪ್ರತಿಧ್ವನಿಸುತ್ತದೆ’ ಎಂದಿದ್ದಾರೆ.

ಪ್ರಜಾಪ್ರಭುತ್ವ ಸಂಸ್ಥೆಗಳ ಘನತೆ ಮತ್ತು ಪ್ರತಿಷ್ಠೆಯನ್ನು ಕಾಪಾಡಿಕೊಳ್ಳಲು ನಾವೆಲ್ಲರೂ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಗಂಭೀರ ಚಿಂತನೆ, ಆತ್ಮಾವಲೋಕನ ನಡೆಸುವ ಸಮಯ ಬಂದಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

‘ಸಕಾರಾತ್ಮಕ ಚರ್ಚೆ ಮತ್ತು ಸಂವಾದಕ್ಕೆ ಅವಕಾಶವೊದಗಿಸುವ ವೈಭವದ ಸಂಪ್ರದಾಯವನ್ನು ಸದನವು ಹೊಂದಿದೆ. ಆದರೆ, ಕೆಲವು ಸಮಯದಿಂದ ದೇಶದ ಸಂಸದೀಯ ಪ್ರಜಾಪ್ರಭುತ್ವದ ಘನತೆ ಮತ್ತು ಪ್ರತಿಷ್ಠೆಯನ್ನು ಕೆಲವು ಸದಸ್ಯರು ಸದನದ ಒಳಗೆ, ಹೊರಗೆ ಮತ್ತು ಸಂಸತ್ತಿನ ಆವರಣದೊಳಗೆ ಹಾಳುಮಾಡುತ್ತಿದ್ದಾರೆ’ ಎಂದು ಟೀಕಿಸಿದ್ದಾರೆ.

ಮೋದಿ ಜಾತಿನಿಂದನೆ: ಆರೋಪ ತಳ್ಳಿಹಾಕಿದ ಅಯ್ಯರ್

ಜೈಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧ ಜಾತಿನಿಂದನೆ ಹೇಳಿಕೆಗಳನ್ನು ನೀಡಿದ್ದಾರೆ ಎಂಬ ಆರೋಪಗಳನ್ನು ಕಾಂಗ್ರೆಸ್ ನಾಯಕ ಮಣಿಶಂಕರ್ ಅಯ್ಯರ್ ಅವರು ತಳ್ಳಿಹಾಕಿದ್ದಾರೆ. ‘ನಾನು ಮೋದಿ ಅವರ ವ್ಯಕ್ತಿತ್ವದ ಬಗ್ಗೆ ಮಾತನಾಡಿದ್ದೇನೆಯೇ ಹೊರತು ಜಾತಿ ಬಗ್ಗೆ ಅಲ್ಲ’ ಎಂದು ಹೇಳಿದ್ದಾರೆ.

‘ನಾನು ಇಂಗ್ಲಿಷ್‌ನಲ್ಲಿ ಮಾತನಾಡುತ್ತೇನೆ ಎಂದು ‘ಮೆಕಾಲೆಯ ಮಗ’ ಎಂದು ಕರೆಯುತ್ತಾರೆ. ಆದರೆ ಮೋದಿಗೆ ತಮಿಳು ಅರ್ಥವಾಗುತ್ತದೆಯೇ’ ಎಂದು ಪ್ರಶ್ನಿಸಿದರು.


ಅಯ್ಯರ್ ಹೇಳಿಕೆಯನ್ನು ವಿರೋಧಿಸಿ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರು ಜೈಪುರದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು. ಅವರ ಪ್ರತಿಕೃತಿಯನ್ನೂ ಸುಟ್ಟು ಹಾಕಿ, ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿ ಶನಿವಾರ ಸಂಜೆ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅಯ್ಯರ್, ‘ಮೋದಿ ಅವರು ಕೆಳಜಾತಿಯಿಂದ ಬಂದವರು ಎಂದು ನಾನು ಎಂದಿಗೂ ಹೇಳಿಲ್ಲ. ಅವರ ವ್ಯಕ್ತಿತ್ವವನ್ನು ಉಲ್ಲೇಖಿಸುತ್ತಾ, ಅವರು ಕೀಳು ವ್ಯಕ್ತಿ ಎಂದು ಹೇಳಿದ್ದೇನೆ. ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ’ ಎಂದರು.

ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದ ರಾಹುಲ್ ಗಾಂಧಿ

‘ಕಾನ್ಶಿರಾಂಗೆ ಭಾರತ ರತ್ನ ನೀಡಿ’

ಪ್ರಜಾವಾಣಿ ವಾರ್ತೆ



ರಾಹುಲ್ ಗಾಂಧಿ

ನವದೆಹಲಿ: ಭಾರತದ ರಾಜಕೀಯ ಸ್ವರೂಪವನ್ನೇ ಬದಲಿಸಿದ, ದೇಶದ ಬಹುಜನರು ಮತ್ತು ಬಡವರಲ್ಲಿ ರಾಜಕೀಯ ಜಾಗೃತಿ ಮೂಡಿಸಿದ ದಲಿತರ ಐಕಾನ್ ಕಾನ್ಶಿರಾಂ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ‘ಭಾರತ ರತ್ನ’ವನ್ನು ನೀಡುವಂತೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಒತ್ತಾಯಿಸಿದ್ದಾರೆ.

ಬಹುಜನ ಸಮಾಜ ಪಕ್ಷ(ಬಿಎಸ್‌ಪಿ) ಸಂಸ್ಥಾಪಕ ಕಾನ್ಶಿರಾಮ್ ಅವರ 92ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರು ಪ್ರಧಾನಿಗೆ ಪತ್ರ ಬರೆದು ಈ ಬೇಡಿಕೆಯನ್ನು ಸಲ್ಲಿಸಿದ್ದಾರೆ.

ಕಾನ್ಶಿರಾಮ್ ಅವರ ಜನ್ಮ ದಿನಾಚರಣೆಗೂ ಮುನ್ನ ಲಖನೌದಲ್ಲಿ ನಡೆದ 'ಸಂವಿಧಾನ ಸಮ್ಮೇಳನ'ದಲ್ಲಿ ರಾಹುಲ್ ಗಾಂಧಿ ಅವರು, ‘ನೆಹರೂ ಬದುಕಿದ್ದಿದ್ದರೆ ಕಾನ್ಶಿರಾಮ್ ಅವರನ್ನು ಕಾಂಗ್ರೆಸ್‌ನಿಂದ ಮುಖ್ಯಮಂತ್ರಿ ಮಾಡುತ್ತಿದ್ದರು’ ಎಂದು ಹೇಳಿಕೆ ನೀಡಿದ ಎರಡು ದಿನಗಳ ನಂತರ ಪ್ರಧಾನಿಯವರಿಗೆ ಈ ಪತ್ರ ಬರೆದಿದ್ದಾರೆ.

‘ಕಾನ್ಶಿರಾಂ ಅವರು ತಮ್ಮ ಚಳುವಳಿಗಳ ಮೂಲಕ ಬಹುಜನರು ಮತ್ತು ಬಡವರಲ್ಲಿ ರಾಜಕೀಯ ಜಾಗೃತಿ ಮೂಡಿಸಿದ್ದಾರೆ. ಸಂವಿಧಾನದಲ್ಲಿ ನೀಡಿರುವ ಭರವಸೆಯಂತೆ ಸಮಾನತೆ, ಘನತೆ ಮತ್ತು ಭಾಗವಹಿಸುವಿಕೆಯನ್ನು ಸಮಾಜದ ಅತ್ಯಂತ ಕೆಳಸ್ತರದಲ್ಲಿರುವರಿಗೆ ತಲುಪಿಸುವುದಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಅವುಗಳನ್ನು ಜಾರಿಗೊಳಿಸಲು ಪ್ರಯತ್ನಿಸಿದ್ದರು’ ಎಂದು ರಾಹುಲ್ ಪತ್ರದಲ್ಲಿ ವಿವರಿಸಿದ್ದಾರೆ.

‘ಕಾನ್ಶಿರಾಮ್ ಭಾರತೀಯ ಪ್ರಜಾಪ್ರಭುತ್ವದ ಅಡಿಪಾಯವನ್ನು ಬಲಪಡಿಸಿದರು. ನಮ್ಮ ರಾಜಕೀಯ ವ್ಯವಸ್ಥೆಯನ್ನು ಹೆಚ್ಚು ಪ್ರಾತಿನಿಧಿಕ ಮತ್ತು ನ್ಯಾಯಯುತವಾಗಿಸಿದರು’ ಎಂದು ರಾಹುಲ್ ಹೇಳಿದ್ದಾರೆ.

ರಾಹುಲ್ ಗಾಂಧಿ ಅವರು ಪದೇ ಪದೇ ಕಾನ್ಶಿರಾಂ ಅವರನ್ನು ಹೀಗೆ ಗೌರವದಿಂದ ಉಲ್ಲೇಖಿಸುತ್ತಿರುವುದು, ಒಂದು ಕಾಲದಲ್ಲಿ ಕಾಂಗ್ರೆಸ್‌ನ ಪ್ರಮುಖ ಮತದಾರರ ನೆಲೆಯಾಗಿದ್ದ ಉತ್ತರ ಪ್ರದೇಶ ಮತ್ತು ಇತರೆಡೆ ಇರುವ ದಲಿತರನ್ನು ತಲುಪುವ ಪ್ರಯತ್ನವೆಂದೂ ವಿಶ್ಲೇಷಿಸಲಾಗುತ್ತಿದೆ.

ಲೋಕಸಭಾ ಚುನಾವಣೆಯ ಸಮಯದಲ್ಲಿ, ಸಂವಿಧಾನ ಉಳಿಸುವ ಅಭಿಯಾನದ ಸುತ್ತ ಕೇಂದ್ರೀಕೃತವಾದ ರಾಹುಲ್ ಅವರ ಪ್ರಚಾರವು ದಲಿತರೊಂದಿಗೆ ಅದರಲ್ಲೂ ವಿಶೇಷವಾಗಿ ಉತ್ತರ ಪ್ರದೇಶದಲ್ಲಿ ಪ್ರತಿಧ್ವನಿಸಿತ್ತು. ಅಲ್ಲಿ ಸಮಾಜವಾದಿ ಪಕ್ಷ-ಕಾಂಗ್ರೆಸ್ ಮೈತ್ರಿಕೂಟವು ಅದ್ಭುತ ಗೆಲುವು ಸಾಧಿಸಿತ್ತು.

ಬಿಎಸ್‌ಪಿಯ ಚುನಾವಣಾ ಪ್ರಭಾವ ಕ್ಷೀಣಿಸುತ್ತಿದ್ದಂತೆ, ಕಾನ್ಶಿರಾಮ್ ಅವರ ಜನ್ಮ ದಿನಾಚರಣೆಯನ್ನು ‘ಪಿಡಿಎ (ಪಿಚ್ಡಾ, ದಲಿತ, ಅಲ್ಪಸಂಖ್ಯಾತ ಅಥವಾ ಹಿಂದುಳಿದ, ದಲಿತ, ಅಲ್ಪಸಂಖ್ಯಾತ) ದಿವಸ್’ ಎಂದು ಆಚರಿಸುತ್ತಿರುವ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷವು ಮಾಯಾವತಿಯವರ ನಾಯಕತ್ವದ ಮೂಲಕ ದಲಿತರನ್ನು ಸೆಳೆಯಲು ಪ್ರಯತ್ನಿಸುತ್ತಿವೆ.

‘ಇಂದು ನಾವು ಕಾನ್ಶಿರಾಮ್ ಅವರ ಜನ್ಮ ದಿನ ಸ್ಮರಿಸುತ್ತಿದ್ದೇವೆ. ಅವರ ಪರಂಪರೆ ಮತ್ತು ಕೊಡುಗೆಗಳನ್ನು ಪ್ರತಿಬಿಂಬಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಅವರಿಗೆ ಮರಣೋತ್ತರವಾಗಿ ಭಾರತ ರತ್ನ ನೀಡಬೇಕೆಂದು ವಿನಂತಿಸುತ್ತಾ, ನಾನು ಈ ಪತ್ರ ಬರೆಯುತ್ತಿದ್ದೇನೆ’ ಎಂದು ರಾಹುಲ್ ಗಾಂಧಿ ಹೇಳಿದರು.

ದಲಿತ ಬುದ್ಧಿಜೀವಿಗಳು, ದಲಿತ ನಾಯಕರು ಮತ್ತು ಕಾರ್ಯಕರ್ತರು ಹಲವು ವರ್ಷಗಳಿಂದ ಕಾನ್ಶಿರಾಂ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಅವರ ಬೇಡಿಕೆ ಈಗಲೂ ಸ್ಥಿರವಾಗಿದೆ’ ಎಂದು ಅವರು ನೆನಪಿಸಿಕೊಂಡರು.

ಐದು ವಿಧಾನಸಭೆ ಅಖಾಡ ಸಜ್ಜು

ಒಂದನೇ ಪುಟದಿಂದ...

ಈ ಸಲ ಮೈತ್ರಿಕೂಟ ಸೋತರೆ, ದೇಶದ ಯಾವುದೇ ರಾಜ್ಯದಲ್ಲಿ ಕಮ್ಯುನಿಸ್ಟ್ ಪಕ್ಷದ ಸರ್ಕಾರ ಇಲ್ಲದಂತಾಗುತ್ತದೆ. ಚುನಾವಣೆ ನಡೆಯುತ್ತಿರುವ ಪಶ್ಚಿಮ ಬಂಗಾಳದಲ್ಲಿ ಎಡ ಪಕ್ಷಗಳು ನಿಶ್ಶಕ್ತಗೊಂಡು ದಶಕವೇ ಕಳೆದಿದೆ.

ಪುದುಚೆರಿಯಲ್ಲಿ ಕಾಂಗ್ರೆಸ್-ಡಿಎಂಕೆ ಮೈತ್ರಿಕೂಟದಿಂದ ಸವಾಲು ಎದುರಿಸುತ್ತಿರುವ ಅಖಿಲ ಭಾರತ ಎನ್‌ಆರ್ ಕಾಂಗ್ರೆಸ್ ನಾಯಕ ಎನ್. ರಂಗಸಾಮಿ ಅವರು ಎನ್‌ಡಿಎ ಕೂಟವನ್ನು ಮುನ್ನಡೆಸಲಿದ್ದಾರೆ, ರಾಜ್ಯ ಮುಖ್ಯಮಂತ್ರಿ ಆಗಿ ಮರಳಿ ಅಧಿಕಾರ ವಹಿಸಿಕೊಳ್ಳಲು ಕಾತರರಾಗಿದ್ದಾರೆ.

ನಾಲ್ಕು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೆರಿಯ ಚುನಾವಣೆಯು 2027ರ ಆರಂಭದಲ್ಲಿ ಉತ್ತರ ಪ್ರದೇಶದಲ್ಲಿ ಇತರ ನಾಲ್ಕು ರಾಜ್ಯಗಳಲ್ಲಿ ನಡೆಯಲಿರುವ ಚುನಾವಣೆಗಳ ಮೇಲೆ ಪರೋಕ್ಷ ಪ್ರಭಾವ ಬೀರುವ ಸಾಧ್ಯತೆ ಹೆಚ್ಚು. ‘ಇಂಡಿಯಾ’ ಮೈತ್ರಿಕೂಟಕ್ಕೆ ಈ ಹಣಾಹಣಿ ಮಹತ್ವದ್ದಾಗಿದೆ. 2024ರ ಲೋಕಸಭಾ ಚುನಾವಣೆಯ ಬಳಿಕ ನಡೆದ ಬಹುತೇಕ ಚುನಾವಣೆಗಳಲ್ಲಿ ಸೋತು ಸುಣ್ಣವಾಗಿರುವ ಕಾಂಗ್ರೆಸ್‌ಗೆ ಈ ಚುನಾವಣೆ ಅಳಿವು ಉಳಿವಿನ ಹೋರಾಟ. ಈ ಚುನಾವಣೆಗಳಲ್ಲಿ ಸೋಲು ಎದುರಾದರೆ ಪಕ್ಷ ಭವಿಷ್ಯದಲ್ಲಿ ಮತ್ತೆ ತಲೆಯೆತ್ತುವುದು ಬಹಳ ಕಷ್ಟ. ಎನ್‌ಡಿಎ ಹಾಗೂ ‘ಇಂಡಿಯಾ’ ಮೈತ್ರಿಕೂಟಗಳು ಈ ಸುತ್ತಿನಲ್ಲಿ ಹೂಡುವ ತಂತ್ರ– ಪ್ರತಿತಂತ್ರಗಳನ್ನು ದೇಶ ಕುತೂಹಲದಿಂದ ಎದುರು ನೋಡತೊಡಗಿದೆ.

‘ಪದ್ಮ’ ಪ್ರಶಸ್ತಿಗೆ ಅರ್ಜಿ ಆಹ್ವಾನ

ನವದೆಹಲಿ(ಪಿಟಿಐ): ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳಿಗೆ ಸರ್ಕಾರ ಆನ್‌ಲೈನ್ ಮೂಲಕ ನಾಮನಿರ್ದೇಶನಗಳನ್ನು ಆಹ್ವಾನಿಸಿದೆ. 2027ರ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಅರ್ಜಿ ಸಲ್ಲಿಸಲು 2026ರ ಜುಲೈ 31 ಕೊನೆಯ ದಿನ. ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ https://awards.gov.in ಮೂಲಕ ಅರ್ಜಿ ಸಲ್ಲಿಸಬೇಕು. ಕಲೆ, ಸಾಹಿತ್ಯ, ಶಿಕ್ಷಣ, ಕ್ರೀಡೆ, ವೈದ್ಯಕೀಯ, ಸಮಾಜ ಕಾರ್ಯ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾರ್ವಜನಿಕ ಸಂಪರ್ಕ, ನಾಗರಿಕ ಸೇವೆ, ಉದ್ಯಮ ಸೇರಿ ವಿವಿಧ ಕ್ಷೇತ್ರಗಳ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ.

ಅರ್ಜಿ ನಮೂನೆ, ಅರ್ಹತೆ ಮತ್ತು ಇತರೆ ಮಾಹಿತಿಗಳನ್ನು https://padmaawards.gov.in ಪಡೆಯಬಹುದು.

ನಕ್ಸಲ್ ಬಂಧನ

ಇಂಫಾಲ್ (ಪಿಟಿಐ): ನಿಷೇಧಿತ ಪೀಪಲ್ ಲಿಬರೇಷನ್ ಆರ್ಮಿಗೆ ನೇಮಕಾತಿ ಮಾಡಿಕೊಳ್ಳುತ್ತಿದ್ದ ಆರೋಪದ ಮೇಲೆ ನಕ್ಸಲ್ ಮಹಿಳೆಯೊಬ್ಬಳನ್ನು ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಶನಿವಾರ ಬಂಧಿಸಲಾಗಿದೆ.

ತೆಲಂಗಾಣದ ತೋಟದ ಮನೆಯ ಮೇಲೆ ದಾಳಿ • ಬಿಆರ್‌ಎಸ್ ಮಾಜಿ ಶಾಸಕ ಬಂಧನ

ಶಾಸಕ, ಸಂಸದನಿಂದ ಡ್ರಗ್ಸ್ ಸೇವನೆ ದೃಢ



ಪುಟ್ಟ ಮಹೇಶ್ ಕುಮಾರ್

ಹೈದರಾಬಾದ್, ತೆಲಂಗಾಣ (ಪಿಟಿಐ): ಮಾದಕ ಪದಾರ್ಥ (ಡ್ರಗ್ಸ್) ಸೇವನೆ ಮಾಡಿದ ಆರೋಪದಲ್ಲಿ ಆಂಧ್ರ ಪ್ರದೇಶದ ಎಲೂರು ಕ್ಷೇತ್ರದ ಟಿಡಿಪಿ ಸಂಸದ ಪುಟ್ಟ ಮಹೇಶ್ ಕುಮಾರ್, ಬಿಆರ್‌ಎಸ್‌ನ ಮಾಜಿ ಶಾಸಕ ಪೈಲಟ್ ರೋಹಿತ್ ರೆಡ್ಡಿ ಅವರನ್ನು ಬಂಧಿಸಲಾಗಿತ್ತು. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಅವರಿಬ್ಬರೂ ಮಾದಕ ಪದಾರ್ಥ ಸೇವನೆ ಮಾಡಿರುವುದು ದೃಢಪಟ್ಟಿದೆ.

ರೋಹಿತ್ ರೆಡ್ಡಿ ಅವರಿಗೆ ಸೇರಿದ ತೋಟದ ಮನೆಯಲ್ಲಿ ‘ಡ್ರಗ್ಸ್ ಕೂಟ’ ನಡೆಯುತ್ತಿರುವ ಕುರಿತು ಖಚಿತ ಮಾಹಿತಿ ಆಧರಿಸಿ ಮಾದಕ ಪದಾರ್ಥ ನಿಗ್ರಹ ಎಲೈಟ್ ಆ್ಯಕ್ಷನ್ ಗ್ರೂಪ್‌ನವರು (ಈಗಲ್) ಹಾಗೂ ಸ್ಥಳೀಯ ಪೊಲೀಸರು ಶನಿವಾರ ರಾತ್ರಿ ದಾಳಿ ನಡೆಸಿದ್ದರು.

ಮೋಜಿನ ಕೂಟದ ವೇಳೆ ಒಬ್ಬರು ಗಾಳಿಯಲ್ಲಿ ಮೂರು ಬಾರಿ ಗುಂಡು ಹಾರಿಸಿದ್ದರು. ಭಾಗವಹಿಸಿದ್ದ 11 ಮಂದಿಯನ್ನು ಸ್ಥಳದಲ್ಲಿಯೇ ಮೂತ್ರ ಪರೀಕ್ಷೆಗೆ ಒಳಪಡಿಸಲಾಗಿತ್ತು. ಈ ವೇಳೆ ಮಾಜಿ ಶಾಸಕ ರೋಹಿತ್ ರೆಡ್ಡಿ ಮಾದಕ ದ್ರವ್ಯ ಸೇವನೆ ಮಾಡಿರುವುದು ಗೊತ್ತಾಗಿತ್ತು. ಸಂಸದ ಮಹೇಶ್ ‘ಸೇವನೆ ಮಾಡಿಲ್ಲ’ ಎಂದು ಆ ಕ್ಷಣದ ಪರೀಕ್ಷೆಯು ದೃಢಪಡಿಸಿತ್ತು.

‘ಪ್ರಕ್ರಿಯೆ ಮುಂದುವರಿಸಿದ ಅಧಿಕಾರಿಗಳು ಎಲ್ಲ ಆರು ಮಂದಿಯನ್ನೂ ಆಸ್ಪತ್ರೆಗೆ ಕರೆದೊಯ್ದು, ಮತ್ತೊಮ್ಮೆ ಮೂತ್ರ ಪರೀಕ್ಷೆ ನಡೆಸಿದ್ದರು. ಈ ವೇಳೆ ಸಂಸದರು ಸೇರಿದಂತೆ ಬಂಧಿತರೆಲ್ಲರೂ ಡ್ರಗ್ಸ್ ಸೇವಿಸಿದ್ದು, ಪಾಸಿಟಿವ್ ಫಲಿತಾಂಶ ಕಂಡುಬಂದಿದೆ’ ಎಂದು ಈಗಲ್ ತಂಡದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅವರು ಬೇರೆ ಯಾವುದಾದರೂ ಸ್ಥಳದಲ್ಲಿ ಡ್ರಗ್ಸ್ ಸೇವಿಸಿದ್ದಾರೆಯೇ ಎಂಬುದರ ಕುರಿತೂ ತನಿಖೆ ಮುಂದುವರಿದಿದೆ.

ಸ್ಥಳದಲ್ಲಿ 2 ಗ್ರಾಂ ಮಾದಕ ಪದಾರ್ಥವನ್ನು ವಶಪಡಿಸಿಕೊಳ್ಳಲಾಗಿದ್ದು, ವಿಧಿ ವಿಜ್ಞಾನ ಪ್ರಯೋಗಾಲಯದ ಪರೀಕ್ಷೆಗೆ (ಎಫ್‌ಎಸ್‌ಎಲ್) ಕಳುಹಿಸಿಕೊಡಲಾಗಿದೆ. ಡ್ರಗ್ಸ್ ತಂದಿದ್ದು ಎಲ್ಲಿಂದ ಎನ್ನುವುದರ ಕುರಿತು ತನಿಖೆ ಮುಂದುವರಿದಿದೆ. ಶಸ್ತ್ರಾಸ್ತ್ರ ಕೂಡ ಪತ್ತೆಯಾಗಿದೆ.

ಮೋಜಿನ ಕೂಟದಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳು, ಉದ್ಯಮಿಗಳು, ರಾಜಕಾರಣಿಗಳು ಭಾಗವಹಿಸಿದ್ದರು. ಇದರಲ್ಲಿ ಮಹಿಳೆಯರು ಪಾಲ್ಗೊಂಡಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಲ್ಲ ಶಾಸಕರೂ ಪರೀಕ್ಷೆಗೆ ಒಳಗಾಗಿ: ಕಾಂಗ್ರೆಸ್ ಸವಾಲು

ಹೈದರಾಬಾದ್ (ಪಿಟಿಐ): ಡ್ರಗ್ಸ್ ಪ್ರಕರಣದಲ್ಲಿ ಸಂಸದರು, ಮಾಜಿ ಶಾಸಕರು ಸಿಕ್ಕಿಬಿದ್ದ ಪ್ರಕರಣವು ರಾಜಕೀಯ ವಿವಾದ ಸೃಷ್ಟಿಸಿದೆ. ‘ವಿರೋಧ ಪಕ್ಷದ ನಾಯಕ ಕೆ.ಟಿ.ರಾಮರಾವ್ ಅವರ ಪಕ್ಷದ ಶಾಸಕರು ಸೇರಿದಂತೆ ರಾಜ್ಯದ ಎಲ್ಲ ಶಾಸಕರು ಕೂಡ ನಾರ್ಕೋಟಿಕ್ಸ್ ಪರೀಕ್ಷೆಗೆ ಒಳಪಡಬೇಕು’ ಎಂದು ತೆಲಂಗಾಣ ಕಾಂಗ್ರೆಸ್ ಘಟಕದ ಅಧ್ಯಕ್ಷ ಬಿ.ಮಹೇಶ್ ಕುಮಾರ್ ಗೌಡ್ ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಹಾಕಿರುವ ಸವಾಲು ಸ್ವೀಕರಿಸಿರುವ ಬಿಆರ್‌ಎಸ್ ಪಕ್ಷ, ಪರೀಕ್ಷೆಗೆ ಒಳಪಡಲು ತಾನು ಸಿದ್ಧ ಎಂದು ತಿಳಿಸಿದೆ.

‘ಸೋಮವಾರದಿಂದ ರಾಜ್ಯ ವಿಧಾನಮಂಡಲದ ಅಧಿವೇಶನ ಆರಂಭವಾಗಲಿದ್ದು, ನಾವೇ ವೈದ್ಯರನ್ನು ಕರೆಯುತ್ತೇವೆ. ಎಲ್ಲ ಶಾಸಕರು ಕೂಡ ಪರೀಕ್ಷೆಗೆ ಒಳಪಡಲಿ. ಹಿಂದಿನ ಬಿಆರ್‌ಎಸ್ ಸರ್ಕಾರದ ಅವಧಿಯಲ್ಲಿ ಡ್ರಗ್ಸ್ ರಾಜ್ಯದಾದ್ಯಂತ ವ್ಯಾಪಿಸಿತ್ತು. ಈಗ ಅವರ ಪಕ್ಷದ ಮುಖಂಡರೇ ಭಾಗಿಯಾಗಿದ್ದಾರೆ. ಹೀಗಾಗಿ ಎಲ್ಲ ಶಾಸಕರೂ ಪರೀಕ್ಷೆಗೆ ಒಳಪಡಬೇಕು’ ಎಂದು ಮಹೇಶ್ ಕುಮಾರ್ ಒತ್ತಾಯಿಸಿದ್ದಾರೆ.

ಮಹೇಶ್ ಅವರು ಹಾಕಿದ ಸವಾಲು ಸ್ವೀಕರಿಸಿರುವ ಕೆ.ಟಿ. ರಾಮರಾವ್, ‘ಈ ವಿಚಾರವಾಗಿ ನಾನು ಹಲವು ಸಲ ಪ್ರಸ್ತಾಪಿಸಿದ್ದೇನೆ. ಅವರ ಸಲಹೆಯನ್ನು ನಾನು ಕೂಡ ಸ್ವಾಗತಿಸುತ್ತೇನೆ. ರಾಜ್ಯದ ಎಲ್ಲಾ ಶಾಸಕರು ಪರೀಕ್ಷೆಗೆ ಒಳಪಡುವ ಮೂಲಕ ಮಾದರಿಯಾಗೋಣ’ ಎಂದು ತಿಳಿಸಿದ್ದಾರೆ.

‘ರಾಜ್ಯದ ಪ್ರತಿ ಡ್ರಗ್ಸ್ ಪ್ರಕರಣದಲ್ಲಿ ನನ್ನ ಹೆಸರನ್ನು ಎಳೆದು ತರುತ್ತಿದ್ದು, ಅಂತಹವರಿಗೆ ಕೋರ್ಟ್ ನೋಟಿಸ್ ನೀಡಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ.

ಜಯಂತಿ ಕುಮರೇಶ್‌ಗೆ ‘ಸಂಗೀತ ಕಲಾನಿಧಿ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಜಯಂತಿ ಕುಮರೇಶ್

ಚೆನ್ನೈ: ವೀಣಾ ವಾದಕಿ ಜಯಂತಿ ಕುಮರೇಶ್ ಅವರು ಮದ್ರಾಸ್ ಮ್ಯೂಸಿಕ್ ಅಕಾಡೆಮಿ ನೀಡುವ ಪ್ರತಿಷ್ಠಿತ ‘ಸಂಗೀತ ಕಲಾನಿಧಿ’ ಪ್ರಶಸ್ತಿಗೆ ಭಾಜನರಾಗಿದ್ದಾರೆ.

‘ಸರಸ್ವತಿ ವೀಣೆಯಲ್ಲಿನ ಪಾಂಡಿತ್ಯಕ್ಕಾಗಿ ಮತ್ತು ಕರ್ನಾಟಕ ಸಂಗೀತವನ್ನು ಯುವ ಜನರೆಡೆಗೆ ಕೊಂಡೊಯ್ಯುವಲ್ಲಿನ ಹೊಸ ಆಲೋಚನೆಗಳಿಗಾಗಿ ಜಯಂತಿ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ’ ಎಂದು ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಅಧ್ಯಕ್ಷ ಎನ್.ಮುರಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

57 ವರ್ಷದ ಜಯಂತಿ ಅವರು ದಿವಂಗತ ಉಸ್ತಾದ್ ಜಾಕೀರ್ ಹುಸೇನ್ ಸೇರಿದಂತೆ ಹಲವು ಪ್ರಮುಖ ಕಲಾವಿದರ ಜತೆ ಸಂಗೀತ ಕಾರ್ಯಕ್ರಮ ನೀಡಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಸುಗಂಧಾ ಕಲಾಮೇಘಂ ಮತ್ತು ಮೃದಂಗ ವಾದಕ ತ್ರಿಚೂರ್ ಸಿ.ನರೇಂದ್ರನ್ ಅವರನ್ನು ‘ಸಂಗೀತ ಕಲಾ ಆಚಾರ್ಯ’ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸುಗಂಧಾ ಅವರು ಸಂಗೀತ ಕಲಾ ಆಚಾರ್ಯ ಆರ್. ವೆಂಕಟರಾಮನ್ ಅವರಿಂದ ವೀಣಾ ವಾದನ ಕಲಿತಿರುವುದರ ಜತೆಗೆ, ನವದೆಹಲಿಯ ಗಾಂಧರ್ವ ಮಹಾ ವಿದ್ಯಾಲಯದಲ್ಲಿ ಹಿಂದೂಸ್ತಾನಿ ಸಂಗೀತದಲ್ಲಿ ತರಬೇತಿ ಪಡೆದಿದ್ದಾರೆ.

ನರೇಂದ್ರನ್ ಅವರು ಆಲ್ ಇಂಡಿಯಾ ರೇಡಿಯೊದಲ್ಲಿ ಕಲಾವಿದರಾಗಿ ಕೆಲಸ ಮಾಡಿದ್ದು, ಹಲವು ಮಂದಿಗೆ ತರಬೇತಿ ನೀಡಿದ್ದಾರೆ. ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯೆಗೊ ಸ್ಟೇಟ್ ಯೂನಿವರ್ಸಿಟಿಯಲ್ಲಿ 2 ವರ್ಷ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ.

ಶುಭಮನ್, ಸ್ಮೃತಿಗೆ 'ವಾರ್ಷಿಕ ಕಿರೀಟ'

ಬಿಸಿಸಿಐ 'ನಮನ್' ಪ್ರಶಸ್ತಿ: ರಾಹುಲ್ ದ್ರಾವಿಡ್, ರೋಜರ್ ಬಿನ್ನಿಗೆ ಜೀವಮಾನ ಸಾಧನೆ ಗೌರವ

ನವದೆಹಲಿ (ಪಿಟಿಐ): ದೇಶದ ರಾಜಧಾನಿಯ ಆ ಭವ್ಯ ವೇದಿಕೆಯಲ್ಲಿ ಭಾನುವಾರ ರಾತ್ರಿ ಭಾರತದ 'ಕ್ರಿಕೆಟ್ ಶಕ್ತಿ'ಯ ಪ್ರದರ್ಶನ ನಡೆಯಿತು. ಹಾಲಿ ಮತ್ತು ಭಾವಿ ತಾರೆಗಳು ಕಣ್ಮನ ಸೆಳೆದರು.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆಯೋಜಿಸಿದ್ದ 'ನಮನ್ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ ಅದು.

ಭಾರತ ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ತಂಡಗಳ ನಾಯಕ ಶುಭಮನ್ ಗಿಲ್ 2024–25ರ ಸಾಲಿನ 'ಪಾಲಿ ಉಮ್ರಿಗರ್ ಶ್ರೇಷ್ಠ ಆಟಗಾರ' ಪ್ರಶಸ್ತಿ ಗಳಿಸಿದರು. ಮಹಿಳಾ ತಂಡದ ಉಪನಾಯಕಿ ಸ್ಮೃತಿ ಮಂದಾನ ಅವರು ಶ್ರೇಷ್ಠ ಅಂತರರಾಷ್ಟ್ರೀಯ ಆಟಗಾರ್ತಿ ಗೌರವಕ್ಕೆ ಪಾತ್ರರಾದರು. ಗಿಲ್ ಅವರಿಗೆ ಇದು ಎರಡನೇ ಪ್ರಶಸ್ತಿ ಆಗಿದೆ. 2023ರಲ್ಲಿಯೂ ಅವರು ಈ ಗೌರವಕ್ಕೆ ಪಾತ್ರರಾಗಿದ್ದರು.



ಬಿಸಿಸಿಐ ನಮನ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾರತ ತಂಡದ ಮೊಹಮ್ಮದ್ ಸಿರಾಜ್ ಮತ್ತು ಸಂಜು ಸ್ಯಾಮ್ಸನ್ ಅವರು ಈಚೆಗೆ ಜಯಿಸಿದ ಟಿ20 ವಿಶ್ವಕಪ್ ಟ್ರೋಫಿಯೊಂದಿಗೆ ಕಾಣಿಸಿಕೊಂಡರು

2025ರಲ್ಲಿ ಗಿಲ್ ಅವರು ಇಂಗ್ಲೆಂಡ್ ಪ್ರವಾಸದಲ್ಲಿ ಭಾರತ ತಂಡದ ನಾಯಕರಾಗಿದ್ದರು. ಐದು ಪಂದ್ಯಗಳ ಸರಣಿಯಲ್ಲಿ ತಂಡವು ಸಮಬಲ ಸಾಧಿಸಿತು. ಅದರಲ್ಲಿ 10 ಇನಿಂಗ್ಸ್‌ಗಳಲ್ಲಿ 754 ರನ್ ಪೇರಿಸುವಲ್ಲಿ ಗಿಲ್ ಯಶಸ್ವಿಯಾಗಿದ್ದರು. ಅದರಲ್ಲಿ ನಾಲ್ಕು ಶತಕ ಗಳಿದ್ದವು. ಭಾರತವು ಚಾಂಪಿಯನ್ಸ್ ಟ್ರೋಫಿ ಜಯಿಸುವಲ್ಲಿಯೂ ಗಿಲ್ ಪಾತ್ರ ಮಹತ್ವದ್ದಾಗಿತ್ತು. ಆರಂಭಿಕ ಪಂದ್ಯದಲ್ಲಿ ಬಾಂಗ್ಲಾದೇಶ ಎದುರು ಶತಕ ಗಳಿಸಿದ್ದರು. ಟೂರ್ನಿಯಲ್ಲಿ ಒಟ್ಟು 188 ರನ್ ಸೇರಿಸಿದ್ದರು.

ಸ್ಮೃತಿ ಅವರು ಹೋದ ವರ್ಷ ಅಂತರ ರಾಷ್ಟ್ರೀಯ ಕ್ರಿಕೆಟ್‌ನಲ್ಲಿ 1703 ರನ್ ಪೇರಿಸಿದ್ದರು. ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ಒಂದು ಕ್ಯಾಲೆಂಡರ್ ವರ್ಷದಲ್ಲಿ ಒಂದು ಸಾವಿರಕ್ಕೂ ಹೆಚ್ಚು ರನ್ ಗಳಿಸಿದ ಮಹಿಳಾ ಆಟಗಾರ್ತಿಯೆಂಬ ದಾಖಲೆ ಬರೆದಿದ್ದರು. ಭಾರತ ಮಹಿಳಾ ತಂಡವು ಮೊದಲ ಬಾರಿಗೆ ಜಯಿಸಿದ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಸ್ಮೃತಿ 9 ಪಂದ್ಯಗಳಿಂದ 434 ರನ್ ಗಳಿಸಿದ್ದರು. ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಭಾರತ ತಂಡದ ಆಟಗಾರ್ತಿ ಅವರಾಗಿದ್ದರು.

ಈ ಸಂದರ್ಭದಲ್ಲಿ ವಿವಿಧ ವಿಭಾಗಗಳಲ್ಲಿ ಐಸಿಸಿ ವಿಶ್ವಕಪ್ ಜಯಿಸಿದ ತಂಡಗಳನ್ನೂ ಗೌರವಿಸಲಾಯಿತು.

ಪುರುಷರ ವಿಭಾಗದಲ್ಲಿ ಚಾಂಪಿಯನ್ಸ್ ಟ್ರೋಫಿ, ಟಿ20 ವಿಶ್ವಕಪ್, 19 ವರ್ಷದೊಳಗಿನವರ ಏಕದಿನ ವಿಶ್ವಕಪ್, ಮಹಿಳೆಯರ ವಿಭಾಗದಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಮತ್ತು 19 ವರ್ಷದೊಳಗಿನವರ ಟಿ20 ವಿಶ್ವಕಪ್ ಗೆದ್ದ ತಂಡಗಳನ್ನು ಸನ್ಮಾನಿಸಲಾಯಿತು.



ನವದೆಹಲಿಯಲ್ಲಿ ಭಾನುವಾರ ನಡೆದ ಬಿಸಿಸಿಐ 'ನಮನ್ ಪ್ರಶಸ್ತಿ' ಕಾರ್ಯಕ್ರಮದಲ್ಲಿ ಭಾರತ ಮಹಿಳಾ ಕ್ರಿಕೆಟ್ ತಂಡದ ಜೆಮಿಮಾ ರಾಡ್ರಿಗಸ್, ಅರುಂಧತಿ ರೆಡ್ಡಿ ಮತ್ತು ಸ್ಮೃತಿ ಮಂದಾನ — ಪಿಟಿಐ ಚಿತ್ರಗಳು

ಬಿನ್ನಿ, ದ್ರಾವಿಡ್, ಮಿಥಾಲಿಗೆ ಜೀವಮಾನ ಸಾಧನೆ ಗೌರವ

1983ರ ವಿಶ್ವಕಪ್ ವಿಜೇತ ಭಾರತ ತಂಡದ ಆಲ್‌ರೌಂಡರ್ ರೋಜರ್ ಬಿನ್ನಿ, ಮಾಜಿ ನಾಯಕ ಮತ್ತು ಕೋಚ್ ರಾಹುಲ್ ದ್ರಾವಿಡ್ ಹಾಗೂ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಅವರಿಗೆ 'ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ ಮಾಡಲಾಯಿತು.

'ಭಾರತದ ಕ್ರಿಕೆಟ್ ಸಮೃದ್ಧವಾಗಿ ಬೆಳೆದಿರುವುದನ್ನು ಇಲ್ಲಿ ನೋಡಬಹುದಾಗಿದೆ. ಈ ರೀತಿ ಕ್ರಿಕೆಟ್ ಬೆಳೆಯಲು ಆಟಗರರು, ಆಡಳಿತಗಾರರು ಮತ್ತು ಅಭಿಮಾನಿಗಳು ಒಟ್ಟಾಗಿ ಶ್ರಮಿಸಿದ್ದರಿಂದ ಸಾಧ್ಯವಾಗಿದೆ. ಕಳೆದ ಮೂರು ದಶಕಗಳಲ್ಲಿ ಮಹತ್ತರವಾದ ಬೆಳವಣಿಗೆಯನ್ನು ದೇಶದ ಕ್ರಿಕೆಟ್ ದಾಖಲಿಸಿರುವುದನ್ನು ನೋಡುತ್ತಿದ್ದೇನೆ' ಎಂದು ರಾಹುಲ್ ದ್ರಾವಿಡ್ ಹೇಳಿದರು.

ದ್ರಾವಿಡ್ ಅವರು 1996ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು.

'ಭಾರತದ ಕ್ರಿಕೆಟ್ ಕ್ಷೇತ್ರದಲ್ಲಿ ಯಾವಾಗಲೂ ಉತ್ತಮ ಪ್ರತಿಭಾನ್ವಿತರು ಇದ್ದರು. ಅಲ್ಲದೇ ಒಳ್ಳೆಯ ಆಡಳಿತಗಾರರೂ ಇದ್ದರು. ಯಾವಾಗಲೂ ಒಳ್ಳೆಯ ತರಬೇತುದಾರರು ತಂಡಕ್ಕೆ ಲಭಿಸಿದರು. ಇದೆಲ್ಲದರ ಜೊತೆಗೆ ಅತ್ಯಗತ್ಯವಾದ ಮೂಲಸೌಲಭ್ಯಗಳೂ ಲಭಿಸಿದವು. ನಮ್ಮಲ್ಲಿ ಅಮೋಘವಾದ ದೇಶಿ ಕ್ರಿಕೆಟ್ ವ್ಯವಸ್ಥೆ ಇದೆ. ಜೂನಿಯರ್ ಕ್ರಿಕೆಟ್ ವ್ಯವಸ್ಥೆಯೂ ಅತ್ಯದ್ಭುತವಾಗಿದೆ. ಇದೆಲ್ಲಕ್ಕೂ ಕಳಶವಿಟ್ಟಂತೆ ಅಪಾರವಾಗಿ ಪ್ರೀತಿಸುವ ಅಭಿಮಾನಿಗಳಿದ್ದಾರೆ. ವಿಶ್ವದಲ್ಲಿಯೇ ಇಂತಹ ಅಭಿಮಾನಿಗಳ ವಲಯ ಯಾವ ದೇಶಕ್ಕೂ ಸಿಕ್ಕಿಲ್ಲ' ಎಂದು ಹೇಳಿದರು.

2024ರಲ್ಲಿ ಭಾರತ ತಂಡವು ಟಿ20 ವಿಶ್ವಕಪ್ ಜಯಿಸಿದ್ದ ಸಂದರ್ಭದಲ್ಲಿ ದ್ರಾವಿಡ್ ಮುಖ್ಯ ಕೋಚ್ ಆಗಿದ್ದರು.

ರಾಷ್ಟ್ರೀಯ ಓಪನ್ ಜಂಪ್ ಸ್ಪರ್ಧೆ: ಬೆಳ್ಳಿ ಜಯಿಸಿದ ಸಾಕ್ಷಿ


ರಾಜ್ಯದ ಪುರುಷೋತ್ತಮ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪುರುಷೋತ್ತಮ್ ಅವರು ರಾಷ್ಟ್ರೀಯ ಓಪನ್ ಜಂಪ್ ಸ್ಪರ್ಧೆಯ ಪುರುಷರ ಲಾಂಗ್‌ಜಂಪ್‌ನಲ್ಲಿ ಭಾನುವಾರ ಸ್ವರ್ಣ ಜಯಿಸಿದರು. ಮಹಿಳೆಯರ ವಿಭಾಗದಲ್ಲಿ ಲಕ್ಷದ್ವೀಪದ ಉದಯೋನ್ಮುಖ ಅಥ್ಲೀಟ್ ಮುಬಾಸಿನಾ ಮೊಹಮ್ಮದ್ ಚಿನ್ನದ ಪದಕ ತಮ್ಮದಾಗಿಸಿಕೊಂಡರು.

24 ವರ್ಷ ವಯಸ್ಸಿನ, ಹಾಸನದ ಅಥ್ಲೀಟ್ ಪುರುಷೋತ್ತಮ ಅವರು ಅಂಜು ಬಾಬಿ ಜಾರ್ಜ್ ಕ್ರೀಡಾ ಪ್ರತಿಷ್ಠಾನದ (ಎಬಿಜಿಎಫ್) ಮೈದಾನದಲ್ಲಿ ನಡೆದ ಸ್ಪರ್ಧೆಯಲ್ಲಿ 7.87 ಮೀ. ಜಿಗಿದರು. ವೈಯಕ್ತಿಕ ದಾಖಲೆಯನ್ನೂ (7.59 ಮೀ.) ಸುಧಾರಿಸಿಕೊಂಡರು. ಒಡಿಶಾದ ಸೂರನ್ ಪಾಯಸಿಂಗ್ (7.78 ಮೀ.) ಹಾಗೂ ತಮಿಳುನಾಡಿನ ಎಸ್.ಶರಣ್ (7.78 ಮೀ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದರು.

18 ವರ್ಷದೊಳಗಿನ ಮಹಿಳೆಯರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ರಾಜ್ಯದ ಸಾಕ್ಷಿ ಕ್ರಿಸ್ಟಿನಾ ಕರ್ಕ್ (5.26 ಮೀ.) ರಜತ ಪದಕ ಜಯಿಸಿದರು. 18 ವರ್ಷದೊಳಗಿನ ಪುರುಷರ ಲಾಂಗ್‌ಜಂಪ್‌ನಲ್ಲಿ ಆ್ಯರನ್ ಎಸ್. (6.89 ಮೀ.) ಕಂಚಿನ ಪದಕ ಪಡೆದರು.



ಪುರುಷೋತ್ತಮ್ ಗೆಲುವಿನ ಸಂಭ್ರಮ

ಫಲಿತಾಂಶಗಳು: ಪುರುಷರು: ಲಾಂಗ್‌ಜಂಪ್: ಪುರುಷೋತ್ತಮ್ (ಕರ್ನಾಟಕ; 7.87 ಮೀ.)–1, ಸೂರನ್ ಪಾಯಸಿಂಗ್ (ಒಡಿಶಾ; 7.78 ಮೀ.)–2, ಎಸ್.ಶರಣ್ (ತಮಿಳುನಾಡು; 7.77 ಮೀ.)–3.

20 ವರ್ಷದೊಳಗಿನವರು: ಲಾಂಗ್‌ಜಂಪ್: ಯುವರಾಜ್ ಕೆ. (ಎನ್‌ಸಿಒಇ; 7.63 ಮೀ.)–1, ಆಯುಷ್ ಯಾದವ್ (ದೆಹಲಿ; 7.26 ಮೀ.)–2, ಧನುಷ್ ರಾಜ್ (ಕೇರಳ; 7.06 ಮೀ.) –3. ಪೋಲ್‌ವಾಲ್ಟ್: ಆರ್. ಹರಿಹರನ್ ರಮೇಶ್ (ತಮಿಳುನಾಡು; 4.55 ಮೀ.)–1, ಅಜೀತ್ ಕುಮಾರ್ (ರಾಜಸ್ಥಾನ; 4.50 ಮೀ.)–2, ಆಶಿಷ್‌ಕುಮಾರ್ ಯಾದವ್ (ಮಧ್ಯಪ್ರದೇಶ; 4.40 ಮೀ.)–3.

18 ವರ್ಷದೊಳಗಿನವರು: ಹೈಜಂಪ್: ದೇವಕ್ ಭೂಷಣ್ (ಕೇರಳ; 2.03 ಮೀ.), ಜುಬಿನ್ ಗೊಹೈನ್ (ಜೆಎಸ್‌ಡಬ್ಲ್ಯು; 1.95 ಮೀ.)–2, ವೀರೇಂದ್ರ ಆರ್. (ಮಹಾರಾಷ್ಟ್ರ; 1.85 ಮೀ.)–3. ಲಾಂಗ್‌ಜಂಪ್: ರಾಜೀವ್ ರಾಯ್ (ಎನ್‌ಸಿಒಇ; 7.45 ಮೀ.)–1, ಸಾಗರ್ ಪ್ರಜಾಪತಿ (ಉತ್ತರಪ್ರದೇಶ; 7.07 ಮೀ.)–2, ಆ್ಯರನ್ ಎಸ್.(ಕರ್ನಾಟಕ; 6.89 ಮೀ.)–3.

ಮಹಿಳೆಯರು: ಲಾಂಗ್‌ಜಂಪ್: ಮುಬಾಸಿನಾ ಮೊಹಮ್ಮದ್ (ಎಬಿಜಿಎಫ್; 6.38 ಮೀ.)–1, ಭವಾನಿ ಯಾದವ್ (ರೈಲ್ವೇಸ್; 6.27 ಮೀ.)–2, ಕುಸುಮಾ ಆರ್. (ಎಬಿಜಿಎಫ್; 6.08 ಮೀ.)– 3. ಪೋಲ್‌ವಾಲ್ಟ್: ಬರಾನಿಕಾ ಇಳಂಗೋವನ್ (ತಮಿಳುನಾಡು; 4.10ಮೀ.)–1, ಸಿಂಧು ಶ್ರೀ (ಎನ್‌ಸಿಒಬಿ; 3.95 ಮೀ.)–2, ಬಬಿತಾ ಪಟೇಲ್ (ಸಿಐಎಸ್‌ಎಫ್; 3.90 ಮೀ.)–3. ಹೈಜಂಪ್: ಪೂಜಾ (ಜೆಎಸ್‌ಡಬ್ಲ್ಯು, 1.76 ಮೀ.)–1; ಕೆವಿನ್ನಾ ಅಶ್ವಿನಿ (ರೈಲ್ವೇಸ್; 1.74 ಮೀ.)–2, ಪಲ್ಲವಿ ಪಾಟೀಲ್ (ರೈಲ್ವೇಸ್; 1.71 ಮೀ.)–3. ಟ್ರಿಪಲ್ ಜಂಪ್: ಎಂ.ಅನುಷಾ (ಆಂಧ್ರಪ್ರದೇಶ; 13.18 ಮೀ.)–1, ಅಲೀನಾ ಟಿ.ಸಜಿ (ಕೇರಳ; 13.12 ಮೀ.)–2; ನಿಮಿಷಾ ಡಿ. (ಜೆಎಸ್‌ಡಬ್ಲ್ಯು; 13.08 ಮೀ.)–3.

20 ವರ್ಷದೊಳಗಿನವರು: ಲಾಂಗ್‌ಜಂಪ್: ತಮನ್ನಾ (ಹರಿಯಾಣ; 5.93 ಮೀ.)–1, ಪ್ರಿಯಾ (ಎಬಿಜಿಒ; 5.59 ಮೀ.)–2, ಶಾರದಾ ಭಾರದ್ವಾಜ್ (ಉತ್ತರಪ್ರದೇಶ; 5.40 ಮೀ.)–3.

18 ವರ್ಷದೊಳಗಿನವರು: ಲಾಂಗ್‌ಜಂಪ್: ಕಶೀಶ್ (ಹರಿಯಾಣ; 5.58 ಮೀ.)–1, ಎಂ.ಜೆನಿಸ್ಟಾ ಶಾನು (ತಮಿಳುನಾಡು; 5.47 ಮೀ.)–2, ಸಾಕ್ಷಿ ಕ್ರಿಸ್ಟಿನಾ ಕರ್ಕ್ (ಕರ್ನಾಟಕ; 5.26 ಮೀ.)–3. ಹೈಜಂಪ್: ಹರ್ಷಿಣಿ ರಾಜಶೇಖರ್ (ತಮಿಳುನಾಡು; 1.50 ಮೀ.)–1, ದೀಕ್ಷಿತಾ ರಾಜೇಶ್ (ಗುಜರಾತ್; 1.45 ಮೀ.)–2.

ದಾಂಪತ್ಯ ಜೀವನಕ್ಕೆ ಕುಲದೀಪ್

'ಎಕ್ಸ್' ಚಿತ್ರ



ಭಾರತ ಕ್ರಿಕೆಟ್ ತಂಡದ ಆಟಗಾರ ಕುಲದೀಪ್ ಯಾದವ್ ಅವರು ತಮ್ಮ ಬಾಲ್ಯದ ಗೆಳತಿ ವಂಶಿಕಾ ಸಿಂಗ್ ಚಡ್ಡಾ ಅವರೊಂದಿಗೆ ಉತ್ತರಾಖಂಡದ ಮುಸ್ಸೋರಿಯಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು

ನ್ಯೂಯಾರ್ಕ್ ಸಿಟಿ ಹಾಫ್ ಮ್ಯಾರಥಾನ್: ಗುಲ್ವೀರ್‌ಗೆ ಕಂಚು

ನವದೆಹಲಿ (ಪಿಟಿಐ): ಭಾರತದ ದೂರ ಅಂತರದ ಓಟಗಾರ ಗುಲ್ವೀರ್ ಸಿಂಗ್ ಅವರು ವಿಶ್ವಪ್ರಸಿದ್ಧ ನ್ಯೂಯಾರ್ಕ್ ಸಿಟಿ ಹಾಫ್ ಮ್ಯಾರಥಾನ್ ಓಟದಲ್ಲಿ ಮೂರನೇ ಸ್ಥಾನ ಗಳಿಸಿದರು. ಆ ಹಾದಿಯಲ್ಲಿ ತಮ್ಮ ಕ್ರೀಡಾಬಾಳ್ವೆಯಲ್ಲಿ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದರು.



ಭಾನುವಾರ ನಡೆದ ಈ ಸ್ಪರ್ಧೆಯಲ್ಲಿ (21.1 ಕಿ.ಮೀ.) ಸೇನೆಯ ಓಟಗಾರನಾದ ಗುಲ್ವೀರ್ ನಿಗದಿತ ದೂರವನ್ನು 59 ನಿ. 42 ಸೆ.ಗಳಲ್ಲಿ ಪೂರೈಸಿದರು. ಇದು ಭಾರತದ ರಾಷ್ಟ್ರೀಯ ದಾಖಲೆಯೂ ಆಯಿತು. ದಕ್ಷಿಣ ಆಫ್ರಿಕಾದ ಅಡ್ರಿಯಾನ್ ವೈಲ್ಡ್‌ಶುಟ್ 59:30 ಕಾಲಾವಧಿಯೊಡನೆ ಮೊದಲ ಸ್ಥಾನ ಪಡೆದರೆ, ಮೊರಾಕೊ ಸಂಜಾತ ಅಮೆರಿಕದ ಓಟಗಾರ ಝೌಹರ್ ತಲ್ಬಿ (59:41) ಎರಡನೇ ಸ್ಥಾನ ಪಡೆದರು.

ರಾಷ್ಟ್ರೀಯ ದಾಖಲೆ ಈ ಹಿಂದೆ ಅವಿನಾಶ್ ಸಾಬ್ಳೆ ಹೆಸರಿನಲ್ಲಿತ್ತು. ಅವರು 2020ರ ಡೆಲ್ಲಿ ಹಾಫ್ ಮ್ಯಾರಥಾನ್‌ನಲ್ಲಿ 1:00:30 ಅವಧಿ ಯಲ್ಲಿ ಗುರಿತಲುಪಿದ್ದರು.

ತವರಿಗೆ ತಲುಪಿದ ವಿಂಡೀಸ್ ಆಟಗಾರರು

ನವದೆಹಲಿ (ಪಿಟಿಐ): ಭಾರತದಲ್ಲಿ ಈಚೆಗೆ ನಡೆದ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ವೆಸ್ಟ್ ಇಂಡೀಸ್ ತಂಡದ ಆಟಗಾರರು ತಮ್ಮ ತವರಿಗೆ ಸುರಕ್ಷಿತವಾಗಿ ತಲುಪಿದ್ದಾರೆ.

'ನಮ್ಮ ತಂಡದ ಆಟಗಾರರ ಅಂತಿಮ ಬ್ಯಾಚ್ ಸ್ವದೇಶಕ್ಕೆ ಮರಳಿದೆ. ಸುರಕ್ಷಿತವಾದ ಪ್ರಯಾಣ ವ್ಯವಸ್ಥೆಯಲ್ಲಿ ಅವರು ಬಂದು ತಲುಪಿದ್ದಾರೆ. ತಮ್ಮ ತಮ್ಮ ಮನೆಗಳಿಗೆ ಅವರೆಲ್ಲರೂ ತೆರಳಿದ್ದಾರೆ' ಎಂದು ಕ್ರಿಕೆಟ್ ವೆಸ್ಟ್ ಇಂಡೀಸ್ ತಿಳಿಸಿದೆ. ಐಸಿಸಿ ಮತ್ತು ಸ್ಥಳೀಯ ಕ್ರಿಕೆಟ್ ಮಂಡಳಿಗೆ ಕೃತಜ್ಞತೆ ಸಲ್ಲಿಸಿದೆ.

ಕಳೆದ ವಾರ ವೆಸ್ಟ್ ಇಂಡೀಸ್‌ನ 9 ಆಟಗಾರರು ತೆರಳಿದ್ದರು. ಉಳಿದ 16 ಆಟಗಾರರಿಗೆ ವಿಶೇಷ ವಿಮಾನದ ಮೂಲಕ ಕರೆದೊಯ್ಯಲಾಗಿತ್ತು.

ಅಲ್ಕರಾಜ್ 'ಓಟ'ಕ್ಕೆ ಮೆಡ್ವೆಡೇವ್ ತಡೆ

ಇಂಡಿಯನ್ ವೆಲ್ಸ್ ಟೆನಿಸ್: ಫೈನಲ್‌ಗೆ ಮುನ್ನಡೆದ ಸಿನ್ನರ್

ಇಂಡಿಯನ್ ವೆಲ್ಸ್ (ಅಮೆರಿಕ, ಎಎಫ್‌ಪಿ): ರಷ್ಯಾದ ಡೇನಿಲ್ ಮೆಡ್ವೆಡೇವ್ ಅವರು ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರ ಗೆಲುವಿನ ಓಟಕ್ಕೆ ಶನಿವಾರ ತಡೆಯೊಡ್ಡಿದರು. ಅವರು ಇಂಡಿಯನ್ ವೆಲ್ಸ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ 6–3, 7–6 (7–3)ರಿಂದ ನೇರ ಸೆಟ್‌ಗಳಲ್ಲಿ ಸ್ಪೇನ್‌ನ ತಾರೆಗೆ ಆಘಾತ ನೀಡಿದರು.

30 ವರ್ಷ ವಯಸ್ಸಿನ ಅನುಭವಿ ಆಟಗಾರ ಮೆಡ್ವೆಡೇವ್ ಅವರು ಪ್ರಶಸ್ತಿ ಸುತ್ತಿನಲ್ಲಿ ವಿಶ್ವದ ಎರಡನೇ ಶ್ರೇಯಾಂಕದ ಆಟಗಾರ, ಯಾನಿಕ್ ಸಿನ್ನರ್ ಜೊತೆಗೆ ಸೆಣಸಲಿದ್ದಾರೆ. ನಾಲ್ಕು ಬಾರಿಯ ಗ್ರ್ಯಾನ್‌ಸ್ಲಾಮ್ ವಿಜೇತ ಸಿನ್ನರ್ ಅವರು ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ 6–2, 6–4ರಿಂದ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ವಿರುದ್ಧ ಸುಲಭವಾಗಿ ಗೆದ್ದರು.

22 ವರ್ಷ ವಯಸ್ಸಿನ ಅಲ್ಕರಾಜ್ ಅವರು ಕಳೆದ ವರ್ಷದ ನವೆಂಬರ್‌ನಲ್ಲಿ ನಡೆದ ಎಟಿಪಿ ಫೈನಲ್ಸ್ ಟೂರ್ನಿಯ ಫೈನಲ್‌ನಲ್ಲಿ ಸಿನ್ನರ್ ವಿರುದ್ಧ ಸೋಲನುಭವಿಸಿದ್ದರು. ಆ ನಂತರ ಸತತ 16 ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದರು.

ಮೆಡ್ವೆಡೇವ್ ಅವರು ಈ ಟೂರ್ನಿಯಲ್ಲಿ 2023 ಹಾಗೂ 2024ರಲ್ಲಿ ನಾಲ್ಕರ ಘಟ್ಟದಲ್ಲಿ ಅಲ್ಕರಾಜ್ ವಿರುದ್ಧವೇ ಸೋಲನುಭವಿಸಿದ್ದರು. ಈ ಬಾರಿ ಮುಯ್ಯಿ ತೀರಿಸಿಕೊಂಡರು.



ರಷ್ಯಾದ ಡೇನಿಲ್ ಮೆಡ್ವೆಡೇವ್ — ಚಿತ್ರ: ಎಟಿಪಿ ಟೂರ್

ಸಮಯಪ್ರಜ್ಞೆ ಮೆರೆದ ಮೆಡ್ವೆಡೇವ್: ಮರುಭೂಮಿಯ ತಟದಲ್ಲಿ ನಡೆದ ಪಂದ್ಯದಲ್ಲಿ ಮೆಡ್ವೆಡೇವ್ ಸಮಯಪ್ರಜ್ಞೆ ಮೆರೆದರು. ಅಮೋಘ ಸರ್ವ್‌ಗಳನ್ನು ಮಾಡಿದ ಅವರು ನಾಲ್ಕು ಏಸ್‌ಗಳನ್ನೂ ಹಾಕಿದರು. ಬೇಸ್‌ಲೈನ್‌ನಲ್ಲೇ ಆಡುವ ಮೂಲಕ ಎದುರಾಳಿ ಆಟಗಾರ ದಣಿಯುವಂತೆ ಮಾಡಿದರು. ಜೊತೆಯಲ್ಲೇ, ಆಕ್ರಮಣಕಾರಿ ಹೊಡೆತಗಳೊಂದಿಗೆ ಪಾಯಿಂಟ್ಸ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. 1 ಗಂಟೆ 37 ನಿಮಿಷಗಳಲ್ಲಿ ಪಂದ್ಯವನ್ನು ತಮ್ಮದಾಗಿಸಿಕೊಂಡರು.

'ಅಲ್ಕರಾಜ್ ಅವರಂತಹ ಬಲಿಷ್ಠ ಆಟಗಾರರನ್ನು ಸೋಲಿಸಿದ್ದಕ್ಕೆ ಬಹಳ ಸಂತೋಷವಾಗುತ್ತಿದೆ' ಎಂದು ಮೆಡ್ವೆಡೇವ್ ಅವರು ಪಂದ್ಯದ ನಂತರ ಪ್ರತಿಕ್ರಿಯಿಸಿದರು.

'ಮೆಡ್ವೆಡೇವ್ ವಿರುದ್ಧದ ಪಂದ್ಯದಲ್ಲಿ ದೀರ್ಘ ರ್‍ಯಾಲಿಗಳು ಸಾಮಾನ್ಯ. ಅಲ್ಲದೆ, ಪ್ರತಿ ಹೊಡೆತಗಳನ್ನೂ ಬಲವಾಗಿಯೇ ನಾವು ಹೊಡೆಯಬೇಕು. ಹಾಗಾಗಿ, ಪಂದ್ಯ ಸಾಗಿದಂತೆ ಸಾಮರ್ಥ್ಯ ಕುಂದುತ್ತಾ ಹೋಗುತ್ತದೆ. ತಾಪಮಾನವೂ ಹೆಚ್ಚಿದ್ದರಿಂದ ಸಮಸ್ಯೆಯಾಯಿತು' ಎಂದು ಅಲ್ಕರಾಜ್ ಹೇಳಿದರು.

ದಕ್ಷಿಣ ಆಫ್ರಿಕಾಕ್ಕೆ ಸುಲಭ ಜಯ

ಮೌಂಟ್ ಮಾಂಗಾನೂಯಿ (ಎಎಫ್‌ಪಿ): ಹೊಸಮುಖಗಳನ್ನು ಹೊಂದಿದ ದಕ್ಷಿಣ ಆಫ್ರಿಕಾ ತಂಡ ಭಾನುವಾರ ನಡೆದ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಆತಿಥೇಯ ನ್ಯೂಜಿಲೆಂಡ್ ತಂಡವನ್ನು ಏಳು ವಿಕೆಟ್‌ಗಳಿಂದ ಸೋಲಿಸಿತು.

ವಿಶ್ವಕಪ್ ರನ್ನರ್ ಅಪ್ ತಂಡವು, ಹರಿಣಗಳ ಪಡೆಯ ವೇಗದ ದಾಳಿಗೆ ಸಿಲುಕಿ 14.3 ಓವರುಗಳಲ್ಲಿ 91 ರನ್‌ಗಳಿಗೆ ಆಲೌಟ್ ಆಯಿತು. ಆರಂಭ ಆಟಗಾರ ಕಾನರ್ ಎಸ್ಟರ್‌ಹುಯಿಝೆನ್ ಅವರ ಅಜೇಯ 45 ರನ್‌ಗಳ ನೆರವಿನಿಂದ ದಕ್ಷಿಣ ಆಫ್ರಿಕಾ ಇನ್ನೂ 20 ಎಸೆತಗಳಿರುವಂತೆ 3 ವಿಕೆಟ್‌ಗೆ 93 ರನ್ ಹೊಡೆಯಿತು.

ಮಿಚೆಲ್ ಸ್ಯಾಂಟ್ನರ್ ಮತ್ತು ಆಲ್‌ರೌಂಡರ್ ಜಿಮ್ಮಿ ನೀಶಮ್ ಬಿಟ್ಟರೆ, ಇತ್ತೀಚಿನ ವಿಶ್ವಕಪ್‌ನಲ್ಲಿ ಆಡಿದ್ದ ನ್ಯೂಜಿಲೆಂಡ್‌ನ ಹೆಚ್ಚಿನ ಅನುಭವಿ ಆಟಗಾರರು ವಿಶ್ರಾಂತಿ ಪಡೆದರು. ವಿಶ್ವಕಪ್ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾವನ್ನು ಬಗ್ಗುಬಡಿದಿತ್ತು.

ಈ ಸರಣಿಗೆ ಕೇಶವ ಮಹಾರಾಜ್ ಅವರು ದಕ್ಷಿಣ ಆಫ್ರಿಕಾ ತಂಡದ ನಾಯಕತ್ವ ವಹಿಸಿದ್ದಾರೆ. ಅವರಿಗೆ ಈ ಪಂದ್ಯ 50ನೇ ಟಿ20 ಅಂತರರಾಷ್ಟ್ರೀಯ ಪಂದ್ಯವಾಗಿತ್ತು.

ಸಂಕ್ಷಿಪ್ತ ಸ್ಕೋರು: 14.3 ಓವರುಗಳಲ್ಲಿ 91 (ಜೇಮ್ಸ್ ನೀಶಮ್ 26; ಜೆರಾಲ್ಡ್ ಕೋಟ್ಜಿಯ 14ಕ್ಕೆ2, ಎನ್ಕೊಬನಿ ಮೊಕೇನಾ 26ಕ್ಕೆ3, ಒಟ್ನೀಲ್ ಬಾರ್ಟ್‌ಮನ್ 22ಕ್ಕೆ2, ಕೇಶವ ಮಹಾರಾಜ್ 25ಕ್ಕೆ2); ದಕ್ಷಿಣ ಆಫ್ರಿಕಾ: 16.4 ಓವರುಗಳಲ್ಲಿ 3ಕ್ಕೆ 93 (ಕಾನರ್ ಎಸ್ಟರ್‌ಹುಯಿಝೆನ್ ಔಟಾಗದೇ 45).

ಪಂದ್ಯದ ಆಟಗಾರ: ಎನ್ಕೊಬನಿ ಮೊಕೇನಾ.

ಕ್ರಿಕೆಟ್‌ಗೆ ಸರ್ಫರಾಜ್ ನಿವೃತ್ತಿ

ಕರಾಚಿ (ಪಿಟಿಐ): ಪಾಕಿಸ್ತಾನ ತಂಡದ ಮಾಜಿ ನಾಯಕ ಸರ್ಫರಾಜ್ ಅಹಮದ್ ಅವರು ಎಲ್ಲ ಮಾದರಿಯ ಕ್ರಿಕೆಟ್‌ಗೆ ಭಾನುವಾರ ನಿವೃತ್ತಿ ಘೋಷಿಸಿದರು.



'ಮೂರೂ ಮಾದರಿಗಳಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕನಾಗುತ್ತೇನೆಂದು ಕನಸಿನಲ್ಲೂ ಭಾವಿಸಿರಲಿಲ್ಲ. 2006ರಲ್ಲಿ 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಗೆದ್ದಿದ್ದು ಹಾಗೂ 2017ರ ಚಾಂಪಿಯನ್ಸ್ ಟ್ರೋಫಿ ಜಯಿಸಿದ್ದು ಮರೆಯಲಾಗದ ಕ್ಷಣ' ಎಂದು ಸರ್ಫರಾಜ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

ವಿಕೆಟ್ ಕೀಪರ್– ಬ್ಯಾಟರ್ ಸರ್ಫರಾಜ್ ಅವರು 54 ಟೆಸ್ಟ್, 177 ಏಕದಿನ ಹಾಗೂ 61 ಟಿ20 ಪಂದ್ಯಗಳನ್ನು ಆಡಿದ್ದಾರೆ. ಕ್ರಮವಾಗಿ 3,031, 2,315 ಹಾಗೂ 818 ರನ್ ಗಳಿಸಿದ್ದಾರೆ. ಅವರು 2023ರ ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಪರ್ತ್‌ನಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ಕೊನೆಯ ಬಾರಿಗೆ ಆಡಿದ್ದರು.

ಸರ್ಫರಾಜ್ ಅವರು, ಐಸಿಸಿ ಟೂರ್ನಿಗಳ ಎರಡು ಫೈನಲ್ ಪಂದ್ಯಗಳಲ್ಲಿ ಭಾರತದ ವಿರುದ್ಧ ಪಾಕ್ ತಂಡಕ್ಕೆ ಜಯ ತಂದುಕೊಟ್ಟ ಏಕೈಕ ನಾಯಕ ಎನಿಸಿದ್ದಾರೆ.

ಸರ್ಫರಾಜ್ ಅವರನ್ನು ಟೆಸ್ಟ್ ತಂಡದ ಮುಖ್ಯ ಕೋಚ್ ಆಗಿ ನೇಮಿಸಲು ಪಾಕಿಸ್ತಾನ ಕ್ರಿಕೆಟ್ ಮಂಡಳಿ ತಯಾರಿ ನಡೆಸಿದೆ ಎಂದು ಮೂಲವೊಂದು ತಿಳಿಸಿದೆ.

ಅಥ್ಲೆಟಿಕ್ಸ್: ಸೆಲ್ವಪ್ರಭುಗೆ ಬೆಳ್ಳಿ ಪದಕ

ನವದೆಹಲಿ (ಪಿಟಿಐ): ಭಾರತದ ಸೆಲ್ವಪ್ರಭು ಅವರು ಅಮೆರಿಕದ ಫೇಯಿಟ್‌ವಿಲೆಯಲ್ಲಿ ನಡೆಯುತ್ತಿರುವ ಎನ್‌ಸಿಎಎ ಒಳಾಂಗಣ ಅಥ್ಲೆಟಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದರು.



ಶನಿವಾರ ನಡೆದ ಸ್ಪರ್ಧೆಯಲ್ಲಿ ಪುರುಷರ ಟ್ರಿಪಲ್ ಜಂಪ್‌ನಲ್ಲಿ ಸೆಲ್ವಪ್ರಭು ಅವರು 17.05 ಮೀ. ಜಿಗಿದರು. ಇದು ಅವರ ಜೀವನಶ್ರೇಷ್ಠ ಜಂಪ್ ಕೂಡ ಆಗಿದೆ. 2022ರಲ್ಲಿ ಅವರು 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದರು. ರಾಷ್ಟ್ರೀಯ ದಾಖಲೆಯನ್ನೂ ನಿರ್ಮಿಸಿದ್ದರು. 21 ವರ್ಷದ ಸೆಲ್ವಪ್ರಭು ಇದೀಗ ಒಳಾಂಗಣ ಅಥ್ಲೆಟಿಕ್ಸ್‌ನಲ್ಲಿಯೂ ರಾಷ್ಟ್ರೀಯ ದಾಖಲೆ ಬರೆದರು. ಅವರು ಈಚೆಗಷ್ಟೇ ಕೆನ್ಸಾಸ್ ಸ್ಟೇಟ್ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾಗಿದ್ದಾರೆ.

ರಾಷ್ಟ್ರೀಯ ದಾಖಲೆಗಳನ್ನು ನಿರ್ಧರಿಸುವ ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ನಿಯಮಗಳು ಕಟ್ಟುನಿಟ್ಟಾಗಿವೆ. ಎನ್‌ಸಿಎಎ (ರಾಷ್ಟ್ರೀಯ ಕಾಲೇಜು ಅಥ್ಲೆಟಿಕ್ ಅಸೋಸಿಯೇಷನ್) ಸೇರಿದಂತೆ ಯಾವುದೇ ವಿದೇಶದ ಸ್ಪರ್ಧೆಗಳಲ್ಲಿ ರಚನೆಯಾಗುವ ದಾಖಲೆಗಳ ಮೇಲೆ ನಿಗಾ ಇಟ್ಟಿರುತ್ತದೆ. ಆದರೆ ಎಎಫ್‌ಐ ತಾಂತ್ರಿಕ ಮತ್ತು ಉದ್ದೀಪನ ಮದ್ದು ತಡೆ ನಿಯಮಗಳನ್ವಯ ಪರಿಶೀಲನೆಗೊಳಪಡಿಸಿ ದಾಖಲೆಗಳನ್ನು ನಿರ್ಧರಿಸಲಾಗುತ್ತದೆ.

ಎನ್‌ಸಿಎಎ ಕೂಡ ತನ್ನದೇ ಆದ ಉದ್ದೀಪನ ಮದ್ದು ತಡೆ ಪದ್ಧತಿ ಹೊಂದಿದೆ. ಆದರೆ ಅದು ವಾಡಾ (ವಿಶ್ವ ಉದ್ದೀಪನ ಮದ್ದು ತಡೆ ಘಟಕ) ದಿಂದ ಮಾನ್ಯವಾಗಿಲ್ಲ.